The Canarese Almanac 1868

ಕನ್ನಡ

ಪಂಚಾಂಗವು

ಕ್ರಿಸ್ತಶಕ ೧೮೬೮

ಹಿಂದು:

ಶಾಲಿವಾಹನ ಶಕ ೧೭೮೯—೧೭೯೦.

ಪ್ರಭವ ಸಂವತ್ಸರದ ಅಂತ್ಯ, ವಿಭವ ಸಂವತ್ಸರದ ಆದಿ.

ವಿಕ್ರಮಾದಿತ್ಯನ ಶಕ ೧೯೨೪—೧೯೨೫.

ಕೊಲ್ಲ ೧೦೪೩—೧೦೪೪.

ಮಹಂಮದಿ:

ಹಿಜರಿ ೧೨೮೪—೧೨೮೫.

ಫಸಲಿ ೧೨೭೭—೧೨೭೮.

MANGALORE

PRINTED BY PLEBST & STOLZ, BASEL MISSION PRESS

ವೇಗದಿಂ ಮುಳುಗುವದು ಪ್ರಭವಾಬ್ದ ಕಾಲಾಬ್ಧಿ
ಯೋಗದಿಂ; ಮುಂದುದಯುಪುದು ವಿಭವ ವರುಷಂ, ಸ-
ರಾಗದಿಂದೈಶ್ವರ್ಯದಂ ಸರ್ವ ಜನಹಿತಂ ಎಂದು ತೋರ್ಪುದು ಜಗತಿಗೇ ||
ಈಗ ಮುಂದೈತಪ್ಪ ಸದ್ವರುಷ ಸಫಲ ತರ-
ವಾಗಲೆಂದಿಚ್ಛಿಪೆ ಮನಃಪೂರ್ವಕಂ; ನಿಮ್ಮ
ಭೋಗಕಾರಣವಹ ಶರೀರಪ್ರಾಣಾತ್ಮಾದಿಗಳ ಶೋಧಿಸಿರಿ ಸೂಕ್ಷ್ಮದೀ ||೧||

ತದನಂತರದಿ ಭಾಗ್ಯ ಕೊಡದ ನುಸಿ ಕಿಲುಬು ತಾಂ
ವದಗಿ ನಾಶಿಪ ಚೋರರೆದೆಗೊಂಡು ಕದ್ದೊಯ್ವ
ಚದುರನಾದರು ಮರಣ ಕಾಲದೊಳಗ್ಕೊಯಲಾರದೆ ಹಿಂದುಳಿವ ದ್ರವ್ಯದ||
ಹದನ ಮಾತ್ರವೆಯಲ್ಲದಿಹಪರಕ್ಕುಪಯೋಗ
ಚದುರತೆಯೊಳೀವ ವರ ಜ್ಞಾನದರುಥವ ಬುದ್ಧಿ-
ಯುದಯದಿಂ ಸಂಗ್ರಹಿಸಲೆತ್ನೈಸುವದು ಸುಜ್ಞಕಾರ್ಯವಹುದೆಂ
ದರಿವುದೂ || ೨ ||

ಉಂಡು ಕುಡಿದರು ಮನಕೆ ಶಾಂತಿಯಾಗುವದಿಲ್ಲ,
ಕಂಡ ಕೆಲಸಂ ಗೈದು ಸೊತ್ತ ಸಂಪಾದಿಸಲು
ಭಂಡವದು ಸಾಕಾಗುವದು ಅಲ್ಲ; ಹೃದದೊಳೂರಿದ ಪಾಪದುರೆ ಬೇರದೂ||
ಚಂಡ-ಮನಸಾಕ್ಷಿಯಲ್ಲಿಹ ಗದರಿಕೆ ಇವೆರಡು
ದಿಂಡುಗೆಡದನಿತರೊಳ್ ಹೃತ್‌ತಾಪ ಶಮವಿಲ್ಲ;
ಚಂಡ ಮರಣದ ಭೀತಿ ಇರುವಲ್ಲಿ ನಿಜ ಸುಖವು ತೋರದೆಂಬುದು
ಸಹಜವೂ! || ೩ ||

ಇಂತೆನ್ನಪೇಕ್ಷೆ ಸಲೆ ನೀವರಿದು ಮನಸಿನೊಳ್;
ಸಂತೋಷ ಪಡದು ಉತ್ತಮ ದ್ರವ್ಯ ಸಂಗ್ರಹಿಸಿ
ಸಂತತಂ ಐಶ್ವರ್ಯವಂತರಾಗಿರಿ ಎಂದು ಪಂಚಾಂಗಮಂ ಪಠಿಸುವ ||
ಚಿಂತನೆಯೊಳಿರ್ದು ಬುದ್ಧಿಯ ಕೇಳಲೆಳಿಸುವ ಮ-
ಹಂತರಿಂಗೆಲ್ಲ ಭಾಗ್ಯದ ಮಾರ್ಗ ಪಿಡಿದು ನಿರ್
ಚಿಂತೆಯೊಳ್ ಬಹ ವರ್ಷವಂ ದಾಟಿ ಸೌಖ್ಯದಿಂ ಬಾಳಿರೆಂದಾನ್
ಪೇಳ್ವೆನೂ || ೪ ||

JANUARY. 31 DAYS. 🌕 ಪುಷ್ಯ ಪೂರ್ಣಿಮಿ, ೯ ಜನವರಿ.		**ಜನವರಿ.** ೩೧ ದಿವಸಗಳು. 🌑 ಪುಷ್ಯ ಅಮವಾಸೆ, ೨೪ ಜನವರಿ.

ಪರಲೋಕದಲ್ಲಿ ವಾಸವಾಗಿರುವವನೇ, ನಿನ್ನ ಕಡೆಗೆ ನನ್ನ ಕಣ್ಣುಗಳನ್ನು ಎತ್ತುತ್ತೇನೆ. ಕೀರ್ತ. ೧೨೩, ೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ತೇದಿ	ತಿಂಗಳು	ತೇದಿ
1	W	೧	ಬು	ಪುಷ್ಯ ಶುದ್ಧ	೬	೨೪III	ಪೂ.	೩೮I	ಧನು.	೧೮		೫
2	TH	೨	ಗು		೭	೨೬	ಉ.	೪೦II		೧೯		೬
3	F	೩	ಶು		೮	೨೫III	ರೇ.	೪೧II		೨೦		೭
4	S	೪	ಶ		೯	೨೪I	ಅ.	೪೧I		೨೧		೮
5	SUN	೫	ಆ		೧೦	೨೧III	ಭ.	೪೦		೨೨		೯
6	M	೬	ಚ		೧೧	೧೮II	ಕೃ.	೩೭III		೨೩		೧೦
7	TU	೭	ಮ		೧೨	೧೪	ರೋ.	೩೪III		೨೪		೧೧
8	W	೮	ಬು		೧೩	೯	ಮೃ.	೩೫		೨೫		೧೨
9	TH	೯	ಗು		🌕	೩II	ಆ.	೨೭I		೨೬		೧೩
10	F	೧೦	ಶು	ಪುಷ್ಯ ಬಹುಳ	೧	೫೧III	ಪು.	೨೩		೨೭		೧೪
11	S	೧೧	ಶ		೨	೪೬	ಪು.	೧೯		೨೮		೧೫
12	SUN	೧೨	ಆ		೩	೪೦II	ಆ.	೧೫		೨೯	ಮೊಹರಮ್.	೧೬
13	M	೧೩	ಚ		೪	೩೫II	ಮ.	೧೧III	ಮಕರ.	೧		೧೭
14	TU	೧೪	ಮ		೫	೩೧II	ಪೂ.	೮III		೨		೧೮
15	W	೧೫	ಬು		೬	೨೮	ಉ.	೬III		೩		೧೯
16	TH	೧೬	ಗು		೭	೨೫III	ಹ.	೫II		೪		೨೦
17	F	೧೭	ಶು		೮	೨೪III	ಚಿ.	೫II		೫		೨೧
18	S	೧೮	ಶ		೯	೨೫II	ಸ್ವಾ.	೬III		೬		೨೨
19	SUN	೧೯	ಆ		೧೦	೨೬I	ವಿ.	೯I		೭		೨೩
20	M	೨೦	ಚ		೧೧	೨೯	ಅ.	೧೩		೮		೨೪
21	TU	೨೧	ಮ		೧೨	೩೨III	ಜ್ಯೇ.	೧೭III		೯		೨೫
22	W	೨೨	ಬು		೧೩	೩೭II	ಮೂ.	೨೩I		೧೦		೨೬
23	TH	೨೩	ಗು		೧೪	೪೨III	ಪೂ.	೨೯III		೧೧		೨೭
24	F	೨೪	ಶು		🌑	೪೮I	ಉ.	೩೬I		೧೨		೨೮
25	S	೨೫	ಶ	ಮಾಘ ಶುದ್ಧ	೧	೫೩II	ಶ್ರ.	೪೨II		೧೩		೨೯
26	SUN	೨೬	ಆ		೨	೫೮I	ಧ.	೪೮I		೧೪		೩೦
27	M	೨೭	ಚ		೩	೬೦	ಶ.	೫೩I		೧೫	ಸಫರ್.	೧
28	TU	೨೮	ಮ		೩	೧I	ಪೂ.	೫೩I		೧೬		೨
29	W	೨೯	ಬು		೪	೩II	ಉ.	೫೯III		೧೭		೩
30	TH	೩೦	ಗು		೫	೪III	ರೇ.	೬೦		೧೮		೪
31	F	೩೧	ಶು		೬	೪II	ರೇ.	III		೧೯		೫

FEBRUARY.

29 DAYS.

○ ಮಾಘ ಪೂರ್ಣಿಮೆ,
೮ ಫೆಬ್ರುವರಿ.



ಫೆಬ್ರವರಿ.

೨೯ ದಿವಸಗಳು.

● ಮಾಘ ಅಮವಾಸೆ,
೨೩ ಫೆಬ್ರುವರಿ.


ಎಲ್ಲಾ ಜನಾಂಗಗಳೇ, ಯೆಹೋವನನ್ನು ಸ್ತುತಿಸಿರಿ;
ಎಲ್ಲಾ ಜನಗಳೇ, ಅವನನ್ನು ಹೊಗಳಿರಿ. ಕೀರ್ತ. ೧೧೭, ೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿವಸ	ತಿಂಗಳು	ದಿನ
1	S	೧	ಶ		೭	೨III	ಅ.	III		೨೦		೬
2	SUN	೨	ಆ		೮	I	ಕೃ.	೫೮I		೨೧		೭
3	M	೩	ಚ	ಮಾಘ ಶುದ್ಧ	೧೦	೫೨II	ರೋ.	೫೫I		೨೨		೮
4	Tu	೪	ಮ		೧೧	೪೭I	ಮೃ.	೫೧III		೨೩		೯
5	W	೫	ಬು		೧೨	೪೧II	ಆ.	೪೭III		೨೪		೧೦
6	Th	೬	ಗು		೧೩	೩೫III	ಪು.	೪೩III	ಮಕರ.	೨೫		೧೧
7	F	೭	ಶು		೧೪	೨೯III	ಪು.	೩೯II		೨೬		೧೨
8	S	೮	ಶ		○	೨೪	ಆ.	೩೫II		೨೭		೧೩
9	SUN	೯	ಆ		೧	೧೮II	ಮ.	೩೧III		೨೮		೧೪
10	M	೧೦	ಚ		೨	೧೩III	ಪು.	೩೮III		೨೯		೧೫
11	Tu	೧೧	ಮ		೩	೯II	ಉ.	೨೬II		೩೦		೧೬
12	W	೧೨	ಬು		೪	೬I	ಹ.	೨೫I		೧		೧೭
13	Th	೧೩	ಗು		೫	೪	ಚಿ.	೨೫		೨	ಶಬಾನ್.	೧೮
14	F	೧೪	ಶು		೬	೩	ಸ್ವಾ.	೨೫III		೩		೧೯
15	S	೧೫	ಶ	ಮಾಘ ಕೃಷ್ಣ	೭	೩I	ವಿ.	೨೮		೪		೨೦
16	SUN	೧೬	ಆ		೮	೪III	ಅ.	೩೧II		೫		೨೧
17	M	೧೭	ಚ		೯	೭II	ಜ್ಯೇ.	೩೬		೬		೨೨
18	Tu	೧೮	ಮ		೧೦	೧೧I	ಮೂ.	೪೧II		೭		೨೩
19	W	೧೯	ಬು		೧೧	೧೬	ಪೂ.	೪೭III		೮		೨೪
20	Th	೨೦	ಗು		೧೨	೨೧I	ಉ.	೫೪I		೯		೨೫
21	F	೨೧	ಶು		೧೩	೨೬II	ಶ್ರ.	೬೦	ಕುಂಭ.	೧೦		೨೬
22	S	೨೨	ಶ		೧೪	೩೧II	ಶ್ರ.	III		೧೧		೨೭
23	SUN	೨೩	ಆ		●	೩೬	ಧ.	೬II		೧೨		೨೮
24	M	೨೪	ಚ		೧	೩೯I	ಶ.	೧೧II		೧೩		೨೯
25	Tu	೨೫	ಮ	ಫಾಲ್ಗುಣ ಶುದ್ಧ	೨	೪೧II	ಪೂ.	೧೫II		೧೪		೩೦
26	W	೨೬	ಬು		೩	೪೨II	ಉ.	೧೮II		೧೫	ರಮಜಾನ್.	೧
27	Th	೨೭	ಗು		೪	೪೨	ರೇ.	೨೧I		೧೬		೨
28	F	೨೮	ಶು		೫	೪೦I	ಅ.	೨೦II		೧೭		೩
29	S	೨೯	ಶ		೬	೩೭III	ಭ.	೧೯III		೧೮		೪

MARCH.

31 DAYS.

○ ಫಾಲ್ಗುಣ ಪೂರ್ಣಮಿ,
೮ ಮಾರ್ಚ್.



ಮಾರ್ಚಿ.

೩೧ ದಿವಸಗಳು.

● ಫಾಲ್ಗುಣ ಅಮವಾಸೆ,
೨೪ ಮಾರ್ಚ್.


ಯೆಹೋವನಿಗೆ ಭಯ ಪಟ್ಟು, ಅವನ ಮಾರ್ಗಗಳಲ್ಲಿ ನಡೆದು ಕೊಳ್ಳುವವರೆಲ್ಲರು ಭಾಗ್ಯವಂತರು. ಕೀರ್ತ. ೧೨೮, ೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	SUN	೧	ಆ	ಫಾಲ್ಗುಣ ಶುದ್ಧ.	೭	೩೪	ಕೃ.	೧೮	ಕುಂಭ.	೧೯		೫
2	M	೨	ಚ		೮	೨೯I	ರೋ.	೧೫I		೨೦		೬
3	TU	೩	ಮ		೯	೨೪	ಮೃ.	೧೨		೨೧		೭
4	W	೪	ಬು		೧೦	೧೮II	ಆ.	೮I		೨೨		೮
5	TH	೫	ಗು		೧೧	೧೨II	ಪು.	೪I		೨೩		೯
6	F	೬	ಶು		೧೨	೬II	ಪು.	I		೨೪		೧೦
7	S	೭	ಶ		೧೩	III	ಮ.	೫೨I		೨೫		೧೧
8	SUN	೮	ಆ		○	೫೦I	ಪು.	೪೯		೨೬		೧೨
9	M	೯	ಚ	ಫಾಲ್ಗುಣ ಬಹು.	೧	೪೬	ಉ.	೪೬I		೨೭		೧೩
10	TU	೧೦	ಮ		೨	೪೨III	ಹ.	೪೫		೨೮		೧೪
11	W	೧೧	ಬು		೩	೪೦II	ಚಿ.	೪೪I		೨೯		೧೫
12	TH	೧೨	ಗು		೪	೩೯II	ಸ್ವಾ.	೪೫I	ಮೀನ.	೧	ಶಬಾನು.	೧೬
13	F	೧೩	ಶು		೫	೩೯III	ವಿ.	೪೭		೨		೧೭
14	S	೧೪	ಶ		೬	೪೧I	ಅ.	೫೦I		೩		೧೮
15	SUN	೧೫	ಆ		೭	೪೪	ಜೇ.	೫೪II		೪		೧೯
16	M	೧೬	ಚ		೮	೪೭III	ಮೂ.	೬೦		೫		೨೦
17	TU	೧೭	ಮ		೯	೫೨II	ಮೂ.	I		೬		೨೧
18	W	೧೮	ಬು		೧೦	೫೭III	ಪೂ.	೬I		೭		೨೨
19	TH	೧೯	ಗು		೧೧	೬೦	ಉ.	೧೨III		೮		೨೩
20	F	೨೦	ಶು		೧೧	೩I	ಶ್ರ.	೧೯I		೯		೨೪
21	S	೨೧	ಶ		೧೨	೮	ಧ.	೨೫I		೧೦		೨೫
22	SUN	೨೨	ಆ		೧೩	೧೨I	ಶ.	೩೦II		೧೧		೨೬
23	M	೨೩	ಚ		೧೪	೧೫II	ಪೂ.	೩೫		೧೨		೨೭
24	TU	೨೪	ಮ		●	೧೭II	ಉ.	೩೮I		೧೩		೨೮
25	W	೨೫	ಬು	ಚೈತ್ರ ಶುದ್ಧ.	೧	೧೮I	ರೇ.	೪೦		೧೪		೨೯
26	TH	೨೬	ಗು		೨	೧೭III	ಅ.	೪೦II		೧೫	ರಂಜಾನು.	೧
27	F	೨೭	ಶು		೩	೧೫III	ಭ.	೪೦		೧೬		೨
28	S	೨೮	ಶ		೪	೧೩	ಕೃ.	೩೮I		೧೭		೩
29	SUN	೨೯	ಆ		೫	೯	ರೋ.	೩೫III		೧೮		೪
30	M	೩೦	ಚ		೬	೪II	ಮೃ.	೩೨III		೧೯		೫
31	TU	೩೧	ಮ		೮	೫೩III	ಆ.	೨೯		೨೦		೬

APRIL.

30 DAYS.

🌕 ಚೈತ್ರ ಪೂರ್ಣಮಿ, ೭ ಎಪ್ರಿಲ್.



ಎಪ್ರಿಲ್.

೩೦ ದಿವಸಗಳು.

🌑 ಚೈತ್ರ ಅಮವಾಸೆ, ೨೨ ಎಪ್ರಿಲ್.


ಸೂರ್ಯೋದಯದಿಂದ ಅದರ ಅಸ್ತಮಾನದ ವರಿಗೂ ಯೆಹೋವನ ಹೆಸರು ಸ್ತುತಿಸ ತಕ್ಕದ್ದು. ಕೀರ್ತ. ೧೧೩, ೩.

ಆಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮುಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ಸಂಜ್ಞೆ	ಘಳಿಗೆ	ಮಾಸ	ತೇದಿ	ತಿಂಗಳು	ತೇದಿ
1	W	೧	ಬು		೯	೪೭III	ಪು.	೨೫		೨೧		೭
2	TH	೨	ಗು		೧೦	೪೧III	ಪು.	೨೧		೨೨		೮
3	F	೩	ಶು		೧೧	೩೫III	ಆ.	೧೬III		೨೩		೯
4	S	೪	ಶ	ಚೈತ್ರ ಶು.	೧೨	೩೦I	ಮ.	೧೩I		೨೪		೧೦
5	SUN	೫	ಆ		೧೩	೨೫II	ಪು.	೯II	ಮೀನ	೨೫		೧೧
6	M	೬	ಚ		೧೪	೨೧	ಉ.	೭I		೨೬		೧೨
7	TU	೭	ಮ		🌕	೧೭III	ಹ.	೫I		೨೭		೧೩
8	W	೮	ಬು		೧	೧೫II	ಚಿ.	೪III		೨೮		೧೪
9	TH	೯	ಗು		೨	೧೪II	ಸ್ವಾ.	೫I		೨೯		೧೫
10	F	೧೦	ಶು		೩	೧೪III	ವಿ.	೬III		೩೦		೧೬
11	S	೧೧	ಶ		೪	೧೬	ಅ.	೯II		೩೧		೧೭
12	SUN	೧೨	ಆ		೫	೧೮	ಜೇ.	೧೩II		೧	ಶವ್ವಾಲ್.	೧೮
13	M	೧೩	ಚ		೬	೨೨	ಮೂ.	೧೬		೨		೧೯
14	TU	೧೪	ಮ		೭	೨೩II	ಪೂ.	೨೧II		೩		೨೦
15	W	೧೫	ಬು	ಚೈತ್ರ ಬ.	೮	೨೮	ಉ.	೨೭II		೪		೨೧
16	TH	೧೬	ಗು		೯	೩೩I	ಶ್ರ.	೩೪		೫		೨೨
17	F	೧೭	ಶು		೧೦	೩೮	ಧ.	೪೦II		೬		೨೩
18	S	೧೮	ಶ		೧೧	೪೨III	ಶ.	೪೬I		೭		೨೪
19	SUN	೧೯	ಆ		೧೨	೪೬I	ಪೂ.	೫೧I		೮		೨೫
20	M	೨೦	ಚ		೧೩	೪೮III	ಉ.	೫೬		೯		೨೬
21	TU	೨೧	ಮ		೧೪	೪೩II	ರೇ.	೫೮	ಮೇಷ	೧೦		೨೭
22	W	೨೨	ಬು		🌑	೫೦I	ಅ.	೫೯II		೧೧		೨೮
23	TH	೨೩	ಗು		೧	೪೮III	ಭ.	೫೯III		೧೨		೨೯
24	F	೨೪	ಶು		೨	೪೬II	ಕೃ.	೫೯		೧೩		೩೦
25	S	೨೫	ಶ		೩	೪೩	ರೋ.	೫೭		೧೪		೧
26	SUN	೨೬	ಆ	ವೈಶಾಖ ಶು.	೪	೩೮II	ಮೃ.	೫೪I		೧೫		೨
27	M	೨೭	ಚ		೫	೩೪I	ಆ.	೫೧I		೧೬	ಜಿಲ್ಕಾದ್.	೩
28	TU	೨೮	ಮ		೬	೨೮III	ಪು.	೪೮		೧೭		೪
29	W	೨೯	ಬು		೭	೨೨II	ಪು.	೪೩		೧೮		೫
30	TH	೩೦	ಗು		೮	೧೬	ಆ.	೩೯		೧೯		೬

MAY.

31 DAYS.

○ ವೈಶಾಖ ಪೂರ್ಣಿಮಿ, ೬ ಮೇ.



ಮೇ.

೩೧ ದಿವಸಗಳು.

● ವೈಶಾಖ ಅಮಾವಾಸೆ, ೨೨ ಮೇ.

ಯೆಹೋವನು ಆಕಾಶಗಳಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ; ಅವನ ರಾಜ್ಯವು ಸಮಸ್ತವನ್ನು ಆಳುತ್ತದೆ. ಕೀರ್ತ. ೧೦೩, ೧೯.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ಮಾಸ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ಮಾಸ	ದಿನ
1	F	೧	ಶು		೯	೧೦	ಮ.	೩೫I		೨೦		೭
2	S	೨	ಶ	ವೈಶಾಖ ಶು.	೧೦	೪II	ಪು.	೩೧III		೨೧		೮
3	SUN	೩	ಆ		೧೨	೫೪II	ಉ.	೨೮III		೨೨		೯
4	M	೪	ಚ		೧೩	೫೦II	ಹ.	೨೬I		೨೩		೧೦
5	Tu	೫	ಮ		೧೪	೪೭III	ಚಿ.	೨೩III		೨೪		೧೧
6	W	೬	ಬು		○	೪೫I	ಸ್ವಾ.	೨೪II	ಮೇಷ.	೨೫		೧೨
7	Th	೭	ಗು		೧	೪೫I	ವಿ.	೨೫		೨೬		೧೩
8	F	೮	ಶು		೨	೪೬I	ಅ.	೨೭III		೨೭		೧೪
9	S	೯	ಶ		೩	೪೮	ಜೇ.	೩೦I		೨೮		೧೫
10	SUN	೧೦	ಆ		೪	೫೦I	ಮೂ.	೩೪III		೨೯		೧೬
11	M	೧೧	ಚ		೫	೫೫I	ಪೂ.	೪೦		೩೦		೧೭
12	Tu	೧೨	ಮ		೬	೬೦	ಉ.	೪೬		೩೧	ಜಮಾದಿಲಾಕರ್.	೧೮
13	W	೧೩	ಬು	ವೈಶಾಖ ಬ.	೬	I	ಶ್ರ.	೫೨II		೧		೧೯
14	Th	೧೪	ಗು		೭	೪I	ಧ.	೫೯		೨		೨೦
15	F	೧೫	ಶು		೮	೧೦	ಶ.	೬೦		೩		೨೧
16	S	೧೬	ಶ		೯	೧೪I	ಶ.	೫		೪		೨೨
17	SUN	೧೭	ಆ		೧೦	೧೭III	ಪೂ.	೧೦		೫		೨೩
18	M	೧೮	ಚ		೧೧	೨೦I	ಉ.	೧೪		೬		೨೪
19	Tu	೧೯	ಮ		೧೨	೨೧I	ರೇ.	೧೭I		೭		೨೫
20	W	೨೦	ಬು		೧೩	೨೧	ಅ.	೧೯		೮		೨೬
21	Th	೨೧	ಗು		೧೪	೨೦	ಭ.	೧೯II		೯		೨೭
22	F	೨೨	ಶು		●	೧೭II	ಕೃ.	೧೯	ವೃಷಭ.	೧೦		೨೮
23	S	೨೩	ಶ		೧	೧೬II	ರೋ.	೧೭I		೧೧		೨೯
24	SUN	೨೪	ಆ		೨	೯III	ಮೃ.	೧೫		೧೨		೧
25	M	೨೫	ಚ		೩	೪III	ಆ.	೧೧III		೧೩		೨
26	Tu	೨೬	ಮ	ಜ್ಯೇಷ್ಠ ಶು.	೫	೫೦	ಪು.	೮		೧೪		೩
27	W	೨೭	ಬು		೬	೪೭	ಪು.	೪		೧೫	ರಜಬ್.	೪
28	Th	೨೮	ಗು		೭	೪೦I	ಮ.	೫೬		೧೬		೫
29	F	೨೯	ಶು		೮	೩೫I	ಪು.	೫೨I		೧೭		೬
30	S	೩೦	ಶ		೯	೨೯III	ಉ.	೪೯		೧೮		೭
31	SUN	೩೧	ಆ		೧೦	೨೫I	ಹ.	೪೬II		೧೯		೮

JUNE. 30 DAYS. ○ ಜ್ಯೇಷ್ಠ ಪೂರ್ಣಮಿ, ೫ ಜೂನ್.		**ಜೂನ್.** ೩೦ ದಿವಸಗಳು. ● ಜ್ಯೇಷ್ಠ ಅಮವಾಸೆ, ೨೦ ಜೂನ್.

ಆಕಾಶಗಳು ದೇವರ ಘನವನ್ನು ಸಾರುತ್ತವೆ; ಅಂತರಿಕ್ಷವು ಅವನ ಕೈಕೆಲಸವನ್ನು ತಿಳಿಸುತ್ತದೆ. ಕೀರ್ತ. ೧೯, ೧.

		ಅಂಗ್ಲ.		ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿನ	ತಿಂಗಳು	ದಿನ
1	M	೧	ಚ	ಜ್ಯೇಷ್ಠ ಶುದ್ಧ.	೧೧	೨೧I	ಚಿ.	೪೪III		೨೦		೯
2	Tu	೨	ಮ		೧೨	೧೮I	ಸ್ವಾ.	೪೪I		೨೧		೧೦
3	W	೩	ಬು		೧೩	೧೬II	ವಿ.	೪೪III		೨೨		೧೧
4	Th	೪	ಗು		೧೪	೧೫III	ಅ.	೪೬II		೨೩		೧೨
5	F	೫	ಶು		○	೧೬II	ಜ್ಯೇ.	೪೯II		೨೪		೧೩
6	S	೬	ಶ		೧	೧೮I	ಮೂ.	೫೩II	ವೃಷಭ.	೨೫		೧೪
7	SUN	೭	ಆ		೨	೨೧I	ಪೂ.	೫೮		೨೬		೧೫
8	M	೮	ಚ		೩	೨೫	ಉ.	೬೦		೨೭		೧೬
9	Tu	೯	ಮ		೪	೨೯II	ಉ.	೪II		೨೮		೧೭
10	W	೧೦	ಬು		೫	೩೪II	ಶ್ರ.	೧೦III		೨೯		೧೮
11	Th	೧೧	ಗು		೬	೩೯I	ಧ.	೧೭I		೩೦		೧೯
12	F	೧೨	ಶು		೭	೪೩III	ಶ.	೨೩I		೩೧	ಸಫರ್.	೨೦
13	S	೧೩	ಶ	ಜ್ಯೇಷ್ಠ ಬಹುಳ.	೮	೪೭II	ಪೂ.	೨೮III		೧		೨೧
14	SUN	೧೪	ಆ		೯	೫೦	ಉ.	೩೩I		೨		೨೨
15	M	೧೫	ಚ		೧೦	೫೧I	ರೇ.	೩೬II		೩		೨೩
16	Tu	೧೬	ಮ		೧೧	೫೧I	ಅ.	೩೮II		೪		೨೪
17	W	೧೭	ಬು		೧೨	೫೦	ಭ.	೪೦		೫		೨೫
18	Th	೧೮	ಗು		೧೩	೪೭II	ಕೃ.	೩೯		೬		೨೬
19	F	೧೯	ಶು		೧೪	೪೪	ರೋ.	೩೭II		೭		೨೭
20	S	೨೦	ಶ		●	೩೯III	ಮೃ.	೩೫I		೮		೨೮
21	SUN	೨೧	ಆ		೧	೩೪II	ಆ.	೩೨II	ಮಿಥುನ.	೯		೨೯
22	M	೨೨	ಚ		೨	೨೯	ಪು.	೨೮III		೧೦		೩೦
23	Tu	೨೩	ಮ		೩	೨೩	ಪು.	೨೪III		೧೧		೧
24	W	೨೪	ಬು		೪	೧೬III	ಆ.	೨೦II		೧೨		೨
25	Th	೨೫	ಗು	ಆಷಾಢ ಶುದ್ಧ.	೫	೧೦III	ಮ.	೧೬II		೧೩		೩
26	F	೨೬	ಶು		೬	೪III	ಪು.	೧೨III		೧೪	ರಬಿಲಾವಲ್.	೪
27	S	೨೭	ಶ		೮	೫೪II	ಉ.	೯I		೧೫		೫
28	SUN	೨೮	ಆ		೯	೫೦II	ಹ.	೬II		೧೬		೬
29	M	೨೯	ಚ		೧೦	೪೭II	ಚಿ.	೪II		೧೭		೭
30	Tu	೩೦	ಮ		೧೧	೪೫II	ಸ್ವಾ.	೩III		೧೮		೮

JULY.

31 DAYS.

🌕 ಆಷಾಢ ಪೂರ್ಣಿಮಿ, ೪ ಜುಲಾಯಿ.



ಜುಲಾಯಿ.

೩೧ ದಿವಸಗಳು.

🌑 ಆಷಾಢ ಅಮವಾಸೆ, ೧೯ ಜುಲಾಯಿ.

ಜನಾಂಗಗಳು ಗುಲ್ಲು ಮಾಡುವದೂ ಪ್ರಜೆಗಳು ವ್ಯರ್ಥವಾದದ್ದನ್ನು ಯೋಚಿಸುವದೂ ಯಾಕೆ? ಕೀರ್ತ. ೨, ೧.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿವಸ	ತಿಂಗಳು	ದಿವಸ
1	W	೧	ಬು	ಆಷಾಢ ಶುದ್ಧ.	೧೨	೪೪II	ವಿ.	೪	ಮಿಥುನ.	೧೯	ಜಮಾದಿಲಾವಲ್.	೯
2	TH	೨	ಗು		೧೩	೪೫	ಅ.	೫II		೨೦		೧೦
3	F	೩	ಶು		೧೪	೪೬III	ಜೇ.	೮		೨೧		೧೧
4	S	೪	ಶ		🌕	೫೦III	ಮೂ.	೧೨		೨೨		೧೨
5	SUN	೫	ಆ	ಆಷಾಢ ಬಹುಳ.	೧	೫೩III	ಪೂ.	೧೭		೨೩		೧೩
6	M	೬	ಚ		೨	೫೮I	ಉ.	೨೨III		೨೪		೧೪
7	TU	೭	ಮ		೩	೬೦	ಶ್ರ.	೨೯		೨೫		೧೫
8	W	೮	ಬು		೩	೩I	ಧ.	೩೫II		೨೬		೧೬
9	TH	೯	ಗು		೪	೮	ಶ.	೪೧II		೨೭		೧೭
10	F	೧೦	ಶು		೫	೧೨I	ಪೂ.	೪೭I		೨೮		೧೮
11	S	೧೧	ಶ		೬	೧೬	ಉ.	೫೨		೨೯		೧೯
12	SUN	೧೨	ಆ		೭	೧೮II	ರೇ.	೫೫II		೩೦		೨೦
13	M	೧೩	ಚ		೮	೧೯III	ಅ.	೫೮III		೩೧		೨೧
14	TU	೧೪	ಮ		೯	೧೯III	ಭ.	೫೯II		೩೨		೨೨
15	W	೧೫	ಬು		೧೦	೧೮III	ಕೃ.	೫೯	ಕರ್ಕಾಟಕ.	೧		೨೩
16	TH	೧೬	ಗು		೧೧	೧೬	ರೋ.	೫೭III		೨		೨೪
17	F	೧೭	ಶು		೧೨	೧೩	ಮೃ.	೫೫II		೩		೨೫
18	S	೧೮	ಶ		೧೩	೯III	ಆ.	೫೨II		೪		೨೬
19	SUN	೧೯	ಆ		🌑	೩III	ಪು.	೫೦I		೫		೨೭
20	M	೨೦	ಚ	ಶ್ರಾವಣ ಶುದ್ಧ.	೧	೫೨I	ಪು.	೪೫I		೬		೨೮
21	TU	೨೧	ಮ		೨	೪೬I	ಆ.	೪೧III		೭		೨೯
22	W	೨೨	ಬು		೩	೪೦	ಮ.	೩೭		೮	ಜಮಾದಿಲಾಖರ್.	೧
23	TH	೨೩	ಗು		೪	೩೪I	ಪು.	೩೩I		೯		೨
24	F	೨೪	ಶು		೫	೨೮III	ಉ.	೨೯III		೧೦		೩
25	S	೨೫	ಶ		೬	೨೩II	ಹ.	೨೬III		೧೧		೪
26	SUN	೨೬	ಆ		೭	೧೯III	ಚಿ.	೨೪II		೧೨		೫
27	M	೨೭	ಚ		೮	೧೬II	ಸ್ವಾ.	೨೩II		೧೩		೬
28	Tu	೨೮	ಮ		೯	೧೪II	ವಿ.	೨೩I		೧೪		೭
29	W	೨೯	ಬು		೧೦	೧೩II	ಅ.	೨೪II		೧೫		೮
30	TH	೩೦	ಗು		೧೧	೧೪	ಜೇ.	೨೭		೧೬		೯
31	F	೩೧	ಶು		೧೨	೧೫III	ಮೂ.	೩೦II		೧೭		೧೦

AUGUST.		ಅಗೋಸ್ತು.
31 DAYS.		೩೧ ದಿವಸಗಳು.
◯ ಶ್ರಾವಣ ಪೂರ್ಣಿಮೆ, ೩ ಅಗೋಸ್ತು.		● ಶ್ರಾವಣ ಅಮವಾಸೆ, ೧೮ ಅಗೋಸ್ತು.

ಯೆಹೋವನಿಗೆ ವಿರೋಧವಾಗಿಯೂ, ಅವನ ಅಭಿಷಿಕ್ತನಿಗೆ ವಿರೋಧವಾಗಿಯೂ, ಭೂರಾಜರು ನಿಂತು ಕೊಳ್ಳುತ್ತಾರೆ; ಪ್ರಭುಗಳು ಕೂಡಾ ಆಲೋಚಿಸುತ್ತಾರೆ. ಕೀರ್ತ. ೨, ೨.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ಮಾಸ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	S	೧	ಶ	ಶ್ರಾವಣ ಶುದ್ಧ.	೧೩	೧೮I	ಪೂ.	೩೫I	ಕರ್ಕಾಟಕ.	೧೮	ಜಿಲ್ಕಾದ್.	೧೧
2	SUN	೨	ಆ		೧೪	೨೨I	ಉ.	೪೧II		೧೯		೧೨
3	M	೩	ಚ		◯	೨೬III	ಶ್ರ.	೪೮II		೨೦		೧೩
4	Tu	೪	ಮ	ಶ್ರಾವಣ ಬಹುಳ.	೧	೩೧III	ಧ.	೫೩III		೨೧		೧೪
5	W	೫	ಬು		೨	೩೬III	ಶ.	೫೯II		೨೨		೧೫
6	Th	೬	ಗು		೩	೪೧	ಪೂ.	೬೦		೨೩		೧೬
7	F	೭	ಶು		೪	೪೪III	ಪೂ.	೫I		೨೪		೧೭
8	S	೮	ಶ		೫	೪೭I	ಉ.	೧೦I		೨೫		೧೮
9	SUN	೯	ಆ		೬	೪೮III	ರೇ.	೧೪		೨೬		೧೯
10	M	೧೦	ಚ		೭	೪೯	ಅ.	೧೬III		೨೭		೨೦
11	Tu	೧೧	ಮ		೮	೪೮III	ಭ.	೧೮		೨೮		೨೧
12	W	೧೨	ಬು		೯	೪೫	ಕೃ.	೧೮		೨೯		೨೨
13	Th	೧೩	ಗು		೧೦	೪೫	ರೋ.	೧೭I		೩೦		೨೩
14	F	೧೪	ಶು		೧೧	೩೮	ಮೃ.	೧೫I		೩೧		೨೪
15	S	೧೫	ಶ		೧೨	೩೫I	ಆ.	೧೨II	ಸಿಂಹ.	೧		೨೫
16	SUN	೧೬	ಆ		೧೩	೨೭II	ಪು.	೮III		೨		೨೬
17	M	೧೭	ಚ		೧೪	೨೧	ಪು.	೫		೩		೨೭
18	Tu	೧೮	ಮ		●	೧೫II	ಆ.	೧		೪		೨೮
19	W	೧೯	ಬು	ಭಾದ್ರಪದ ಶುದ್ಧ.	೧	೯I	ಹು.	೫೨II		೫		೨೯
20	Th	೨೦	ಗು		೨	೩II	ಉ.	೪೯I		೬	ಜಿಲ್ಹಾಜ್.	೧
21	F	೨೧	ಶು		೪	೫೩I	ಹ.	೧೬I		೭		೨
22	S	೨೨	ಶ		೫	೪೯II	ಚಿ.	೪೪		೮		೩
23	SUN	೨೩	ಆ		೬	೪೫III	ಸ್ವಾ.	೪೨II		೯		೪
24	M	೨೪	ಚ		೭	೪೩II	ವಿ.	೪೨I		೧೦		೫
25	Tu	೨೫	ಮ		೮	೪೨III	ಅ.	೪೩		೧೧		೬
26	W	೨೬	ಬು		೯	೪೩II	ಜೇ.	೪೫II		೧೨		೭
27	Th	೨೭	ಗು		೧೦	೪೫	ಮೂ.	೪೮II		೧೩		೮
28	F	೨೮	ಶು		೧೧	೪೮	ಪೂ.	೫೩I		೧೪		೯
29	S	೨೯	ಶ		೧೨	೫೧III	ಉ.	೫೮II		೧೫		೧೦
30	SUN	೩೦	ಆ		೧೩	೫೬II	ಶ್ರ.	೬೦		೧೬		೧೧
31	M	೩೧	ಚ		೧೪	೬೦	ಶ್ರ.	೪II		೧೭		೧೨

SEPTEMBER.

30 DAYS.

🌕 ಭಾದ್ರಪದ ಪೂರ್ಣಿಮಿ, ೨ ಸಪ್ಟಂಬರ.



ಸೆಪ್ತಂಬರ್.

೩೦ ದಿವಸಗಳು.

🌑 ಭಾದ್ರಪದ ಅಮವಾಸೆ, ೧೬ ಸಪ್ಟಂಬರ.

ಅಹಂಕಾರ ಬಂದರೆ, ಮಾನಭಂಗವು ಬರುತ್ತದೆ;
ಆದರೆ ವಿನಯವುಳ್ಳವರಲ್ಲಿ ಜ್ಞಾನ ಉಂಟು. ಸಾಮತಿ. ೧೧, ೨.

ಇಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ತಿಂಗಳು	ತಾರೀಖು	ತಿಂಗಳು	ತಾರೀಖು
1	Tu	೧	ಮ	ಭಾ. ಶು.	೧೪	೧I	ಧ.	೧೧		೧೮		೧೩
2	W	೨	ಬು		🌕	೬I	ಶ.	೧೧II		೧೯		೧೪
3	Th	೩	ಗು		೧	೧೦III	ಪೂ.	೨೩I		೨೦		೧೫
4	F	೪	ಶು		೨	೧೪II	ಉ.	೨೮II		೨೧		೧೬
5	S	೫	ಶ		೩	೧೭I	ರೇ.	೩೨I		೨೨		೧೭
6	Sun	೬	ಆ		೪	೧೮III	ಅ.	೩೫I		೨೩		೧೮
7	M	೭	ಚ		೫	೧೯I	ಭ.	೩೭	ಸಿಂಹ	೨೪	ಜಮಾದಿಲಾವಲ್.	೧೯
8	Tu	೮	ಮ	ಭಾದ್ರಪದ ಬ.	೬	೧೮I	ಕೃ.	೩೭II		೨೫		೨೦
9	W	೯	ಬು		೭	೧೬I	ರೋ.	೩೬III		೨೬		೨೧
10	Th	೧೦	ಗು		೮	೧೩I	ಮೃ.	೩೫II		೨೭		೨೨
11	F	೧೧	ಶು		೯	೮III	ಆ.	೩೨II		೨೮		೨೩
12	S	೧೨	ಶ		೧೦	೪	ಪು.	೨೯I		೨೯		೨೪
13	Sun	೧೩	ಆ		೧೨	೫೨III	ಪು.	೨೫II		೩೦		೨೫
14	M	೧೪	ಚ		೧೩	೪೬III	ಆ.	೨೧II		೩೧		೨೬
15	Tu	೧೫	ಮ		೧೪	೪೦II	ಮ.	೧೭II		೧		೨೭
16	W	೧೬	ಬು		🌑	೩೫	ಪು.	೧೩I		೨		೨೮
17	Th	೧೭	ಗು		೧	೨೯II	ಉ.	೯III		೩		೨೯
18	F	೧೮	ಶು		೨	೨೪III	ಹ.	೬II		೪		೧
19	S	೧೯	ಶ		೩	೨೦II	ಚಿ.	೪		೫		೨
20	Sun	೨೦	ಆ		೪	೧೭II	ಸ್ವಾ.	೨I		೬		೩
21	M	೨೧	ಚ		೫	೧೫	ವಿ.	೧III	ಕನ್ಯಾ	೭		೪
22	Tu	೨೨	ಮ	ಆಶ್ವಯುಜ ಶು.	೬	೧೪II	ಅ.	೨I		೮		೫
23	W	೨೩	ಬು		೭	೧೪III	ಜೇ.	೪		೯	ಜಮಾದಿಲಾಖರ್.	೬
24	Th	೨೪	ಗು		೮	೧೬III	ಮೂ.	೭		೧೦		೭
25	F	೨೫	ಶು		೯	೧೯I	ಪೂ.	೧೧		೧೧		೮
26	S	೨೬	ಶ		೧೦	೨೩I	ಉ.	೧೬I		೧೨		೯
27	Sun	೨೭	ಆ		೧೧	೨೮	ಶ್ರ.	೨೨I		೧೩		೧೦
28	M	೨೮	ಚ		೧೨	೩೩	ಧ.	೨೮II		೧೪		೧೧
29	Tu	೨೯	ಮ		೧೩	೩೮	ಶ.	೩೫		೧೫		೧೨
30	W	೩೦	ಬು		೧೪	೪೨III	ಪೂ.	೪೧I		೧೬		೧೩

OCTOBER.

31 DAYS.


ಒಕ್ತೋಬರ್.

೩೧ ದಿವಸಗಳು.

○ ಆಶ್ವೀಜ ಪೂರ್ಣಿಮಿ, ೧ ಒಕ್ತೋಬರ. ● ಆಶ್ವೀಜ ಅಮವಾಸೆ, ೧೫ ಒಕ್ತೋಬರ. ○ ಕಾರ್ತಿಕ ಪೂರ್ಣಿಮಿ, ೩೧ ಒಕ್ತೋಬರ.

ನೆಟ್ಟನೆಯವರ ಸಂಪೂರ್ಣತೆಯು ಅವರನ್ನು ನಡಿಸುತ್ತದೆ;
ಆದರೆ ವಂಚಕರ ಕುಯುಕ್ತಿಯು ಅವರನ್ನು ಸೂರೆ ಮಾಡುತ್ತದೆ. ಸಾಮತಿ. ೧೧, ೩.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಮಾಸ	ದಿನ	ತಿಂಗಳು	ದಿನ
1	TH	೧	ಗು	ಭಾ. ಪ.	○	೪೬III	ಉ.	೪೬II		೧೭		೧೪
2	F	೨	ಶು		೧	೪೯III	ರೇ.	೫೧		೧೮		೧೫
3	S	೩	ಶ		೨	೫೧I	ಅ.	೫೪		೧೯		೧೬
4	SUN	೪	ಆ		೩	೫೧III	ಭ.	೫೬		೨೦		೧೭
5	M	೫	ಚ		೪	೫೧	ಕೃ.	೫೬III		೨೧		೧೮
6	TU	೬	ಮ		೫	೪೯III	ರೋ.	೫೬I		೨೨		೧೯
7	W	೭	ಬು		೬	೪೫III	ಮೃ.	೫೪III	ಕನ್ಯಾ.	೨೩		೨೦
8	TH	೮	ಗು	ಆಶ್ವೀಜ ಕೃ.	೭	೪೧II	ಆ.	೫೨I		೨೪	ಜಮಾದಿಲಾವಲ್.	೨೧
9	F	೯	ಶು		೮	೩೭	ಪು.	೪೯		೨೫		೨೨
10	S	೧೦	ಶ		೯	೩೧II	ಪು.	೪೫II		೨೬		೨೩
11	SUN	೧೧	ಆ		೧೦	೨೬	ಆ.	೪೧II		೨೭		೨೪
12	M	೧೨	ಚ		೧೧	೨೦	ಮ.	೨೭I		೨೮		೨೫
13	TU	೧೩	ಮ		೧೨	೧೪	ಪೂ.	೩೩I		೨೯		೨೬
14	W	೧೪	ಬು		೧೩	೮I	ಉ.	೨೯II		೩೦		೨೭
15	TH	೧೫	ಗು		●	೩	ಹ.	೨೯I		೩೧		೨೮
16	F	೧೬	ಶು		೧	೫೪III	ಚಿ.	೨೩III		೧		೨೯
17	S	೧೭	ಶ		೨	೫೧	ಸ್ವಾ.	೨೧III		೨		೩೦
18	SUN	೧೮	ಆ		೩	೪೯	ವಿ.	೨೧		೩		೧
19	M	೧೯	ಚ		೪	೪೮III	ಅ.	೨೧		೪		೨
20	TU	೨೦	ಮ		೫	೪೮III	ಜ್ಯೇ.	೨೨II		೫		೩
21	W	೨೧	ಬು		೬	೫೧	ಮೂ.	೨೫I		೬		೪
22	TH	೨೨	ಗು		೭	೫೩III	ಪೂ.	೨೯I		೭		೫
23	F	೨೩	ಶು	ಕಾರ್ತಿಕ ಶು.	೮	೫೭III	ಉ.	೩೪I	ತುಲಾ.	೮		೬
24	S	೨೪	ಶ		೯	೬೦	ಶ್ರ.	೪೦		೯	ಜಮಾಖ.	೭
25	SUN	೨೫	ಆ		೯	೨II	ಧ.	೪೪III		೧೦		೮
26	M	೨೬	ಚ		೧೦	೭III	ಶ.	೫೨II		೧೧		೯
27	TU	೨೭	ಮ		೧೧	೧೨III	ಪೂ.	೫೮III		೧೨		೧೦
28	W	೨೮	ಬು		೧೨	೧೭I	ಉ.	೬೦		೧೩		೧೧
29	TH	೨೯	ಗು		೧೩	೨೧II	ಉ.	೪I		೧೪		೧೨
30	F	೩೦	ಶು		೧೪	೧೪II	ರೇ.	೮III		೧೫		೧೩
31	S	೩೧	ಶ		○	೨೬I	ಅ.	೧೫I		೧೬		೧೪

NOVEMBER.		**ನವಂಬರ.**
30 DAYS.		೩೦ ದಿವಸಗಳು.
● ಕಾರ್ತಿಕ ಅಮವಾಸೆ, ೧೪ ನವಂಬರ.		☺ ಮಾರ್ಗಶಿರ ಪೂರ್ಣಿಮಿ, ೩೦ ನವಂಬರ.

ಉಗ್ರದ ದಿವಸದಲ್ಲಿ ದ್ರವ್ಯದಿಂದ ಪ್ರಯೋಜನವಿಲ್ಲ;
ಆದರೆ ನೀತಿಯು ಮರಣದಿಂದ ಬಿಡಿಸುತ್ತದೆ. ಸಾಮತಿ. ೧೧, ೪.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ತಿಂಗಳು	ತಿಥಿ	ಘಳಿಗೆ	ನ. ಹೆಸರು	ಘಳಿಗೆ	ಮಾಸ	ದಿನ	ತಿಂಗಳು	ದಿನ
1	SUN	೧	ಆ		೧	೨೬III	ಭ.	೧೫II		೧೭		೧೫
2	M	೨	ಚ		೨	೨೬	ಕೃ.	೧೫II		೧೮		೧೬
3	Tu	೩	ಮ		೩	೨೪	ರೋ.	೧೫II		೧೯		೧೭
4	W	೪	ಬು		೪	೨೧	ಮೃ.	೧೪I		೨೦		೧೮
5	Th	೫	ಗು		೫	೧೬III	ಆ.	೧೧III		೨೧		೧೯
6	F	೬	ಶು		೬	೧೨I	ಪು.	೯		೨೨		೨೦
7	S	೭	ಶ	ಕಾರ್ತಿಕ ಕೃ.	೭	೭	ಪು.	೫II		೨೩		೨೧
8	SUN	೮	ಆ		೮	೧I	ಆ.	೧II	ತುಲಾ.	೨೪	ರಜಬ್.	೨೨
9	M	೯	ಚ		೧೦	೫೯II	ಮ.	೫೩I		೨೫		೨೩
10	Tu	೧೦	ಮ		೧೧	೫೫	ಉ.	೪೯II		೨೬		೨೪
11	W	೧೧	ಬು		೧೨	೩೮II	ಹ.	೪೬		೨೭		೨೫
12	Th	೧೨	ಗು		೧೩	೩೫	ಚಿ.	೪೩		೨೮		೨೬
13	F	೧೩	ಶು		೧೪	೩೦	ಸ್ವಾ.	೪೧		೨೯		೨೭
14	S	೧೪	ಶ		●	೨೭	ವಿ.	೪೦		೩೦		೨೮
15	SUN	೧೫	ಆ		೧	೨೨	ಅ.	೪೦		೧		೨೯
16	M	೧೬	ಚ		೨	೨೪II	ಜೇ.	೪೧		೨		೧
17	Tu	೧೭	ಮ		೩	೨೫	ಮೂ.	೪೩II		೩		೨
18	W	೧೮	ಬು		೪	೨೭I	ಪೂ.	೪೭		೪		೩
19	Th	೧೯	ಗು		೫	೩೦I	ಉ.	೫೧III		೫		೪
20	F	೨೦	ಶು		೬	೩೪I	ಶ್ರ.	೫೭II		೬		೫
21	S	೨೧	ಶ		೭	೩೯I	ಧ.	೬೦		೭		೬
22	SUN	೨೨	ಆ	ಮಾರ್ಗಶಿರ ಶು.	೮	೪೪I	ಧ.	೩III	ವೃಶ್ಚಿ.	೮		೭
23	M	೨೩	ಚ		೯	೪೯II	ಶ.	೧೦I		೯	ಶಾಬಾನ್.	೮
24	Tu	೨೪	ಮ		೧೦	೫೪I	ಪೂ.	೧೬I		೧೦		೯
25	W	೨೫	ಬು		೧೧	೫೮	ಉ.	೨೧		೧೧		೧೦
26	Th	೨೬	ಗು		೧೨	೬೦	ರೇ.	೨೬I		೧೨		೧೧
27	F	೨೭	ಶು		೧೨	೧II	ಅ.	೩೦II		೧೩		೧೨
28	S	೨೮	ಶ		೧೩	೩I	ಭ.	೩೩I		೧೪		೧೩
29	SUN	೨೯	ಆ		೧೪	೮II	ಕೃ.	೩೪II		೧೫		೧೪
30	M	೩೦	ಚ		☺	೩	ರೋ.	೩೪II		೧೬		೧೫

DECEMBER. 31 DAYS. ● ಮಾರ್ಗಶಿರ ಅಮವಾಸೆ, ೧೪ ದಶಂಬರ.		**ದಶಂಬರ.** ೩೧ ದಿವಸಗಳು. ○ ಪುಷ್ಯ ಪೂರ್ಣಮಿ, ೨೯ ದಶಂಬರ.

ದುಷ್ಟ ಮನುಷ್ಯನ ಮರಣದಲ್ಲಿ ನಿರೀಕ್ಷೆ ನಾಶವಾಗುತ್ತದೆ;
ಪಾತಕಿಗಳ ಎದುರುನೋಡುವಿಕೆ ನಾಶವಾಗುತ್ತದೆ. ಸಾಮತಿ. ೧೧, ೭.

ಅಂಗ್ಲ.				ಚಾಂದ್ರಮಾನ.			ನಕ್ಷತ್ರ.		ಸೌರಮಾನ.		ಮಹಮ್ಮದಿ.	
DATE	DAY	ತಾರೀಖು	ವಾರ	ಮಾಸ	ತಿಥಿ	ಘಳಿಗೆ	ಹೆಸರು	ಘಳಿಗೆ	ಮಾಸ	ತೇದಿ	ಮಾಸ	ತೇದಿ
1	Tu	೧	ಮ		೧	೧	ಮೃ.	೩೩II		೧೭		೧೬
2	W	೨	ಬು		೩	೫೪II	ಆ.	೩೧II		೧೮		೧೭
3	Th	೩	ಗು		೪	೪೯	ಪು.	೨೮III		೧೯		೧೮
4	F	೪	ಶು		೫	೪೩III	ಪು.	೨೫I		೨೦		೧೯
5	S	೫	ಶ		೬	೩೮	ಆ.	೨೨II		೨೧		೨೦
6	SUN	೬	ಆ	ಮಾರ್ಗಶಿರ	೭	೩೨I	ಮ.	೧೭II	ವೃಶ್ಚಿಕ	೨೨		೨೧
7	M	೭	ಚ		೮	೨೬II	ಪು.	೧೩II		೨೩		೨೨
8	Tu	೮	ಮ		೯	೨೦III	ಉ.	೯II		೨೪	ಶಾಬಾನ್.	೨೩
9	W	೯	ಬು		೧೦	೧೫III	ಹ.	೬		೨೫		೨೪
10	Th	೧೦	ಗು		೧೧	೧೧	ಚಿ.	೨III		೨೬		೨೫
11	F	೧೧	ಶು		೧೨	೭I	ಸ್ವಾ.	II		೨೭		೨೬
12	S	೧೨	ಶ		೧೩	೪II	ಅ.	೫೮III		೨೮		೨೭
13	SUN	೧೩	ಆ		೧೪	೨III	ಜೇ.	೫೯III		೨೯		೨೮
14	M	೧೪	ಚ		●	೪III	ಮೂ.	೬೦		೧		೨೯
15	Tu	೧೫	ಮ		೧	೩	ಮೂ.	೬III		೨		೩೦
16	W	೧೬	ಬು		೨	೫	ಪೂ.	೫I		೩		೧
17	Th	೧೭	ಗು		೩	೮I	ಉ.	೧೧I		೪		೨
18	F	೧೮	ಶು		೪	೧೨II	ಶ್ರ.	೧೨II		೫		೩
19	S	೧೯	ಶ		೫	೧೭II	ಧ.	೨೦I		೬		೪
20	SUN	೨೦	ಆ		೬	೨೨III	ಶ.	೨೬III		೭		೫
21	M	೨೧	ಚ	ಪುಷ್ಯ	೭	೨೮I	ಪೂ.	೩೩III		೮		೬
22	Tu	೨೨	ಮ		೮	೩೩	ಉ.	೪೦	ಧನು	೯		೭
23	W	೨೩	ಬು		೯	೩೭	ರೇ.	೪೫I		೧೦	ರಮಜಾನ್.	೮
24	Th	೨೪	ಗು		೧೦	೩೯III	ಅ.	೪೯I		೧೧		೯
25	F	೨೫	ಶು		೧೧	೪೧I	ಭ.	೫೨		೧೨		೧೦
26	S	೨೬	ಶ		೧೨	೪೧III	ಕೃ.	೫೩II		೧೩		೧೧
27	SUN	೨೭	ಆ		೧೩	೪೧	ರೋ.	೫೪		೧೪		೧೨
28	M	೨೮	ಚ		೧೪	೩೯	ಮೃ.	೫೩		೧೫		೧೩
29	Tu	೨೯	ಮ		○	೩೫III	ಆ.	೫೧I		೧೬		೧೪
30	W	೩೦	ಬು	ಮಾಘ	೧	೩೧III	ಪು.	೪೮III		೧೭		೧೫
31	Th	೩೧	ಗು		೨	೨೭I	ಪು.	೪೫II		೧೮		೧೬

೧೮೬೭ನೇ ವರುಷದ ಮುಖ್ಯ ಸಂಗತಿಗಳು.

ಆಸ್ಯ ಖಂಡ.

ಈ ನಮ್ಮ ಖಂಡದಲ್ಲಿ ಕಳದ ವರುಷದಲ್ಲಿ ಭೂಪ್ರಸಿದ್ಧಿಯಾದದ್ದು ಏನೂ ನಡಿಯಲಿಲ್ಲ. ದೇವರು ಹಿಂದು ದೇಶಕ್ಕೆ ಸಮಾಧಾನ ಕೊಟ್ಟು, ಭೂಮಿ ತನ್ನ ಫಲ ಕೊಡುವ ಹಾಗೆ ಸಹ ಮಾಡಿದ್ದಾನೆ. ಮುಂಬಾಯಿಯ ಅಧಿಪತಿಯಾದ ಸರ್ ಬಾರ್ತ್ಲ್ ಫ್ರೇರ್ ಎಂಬವರು ವಿಲಾಯತಿಗೆ ಹೋಗಿ, ಇವರ ಬದಲಾಗಿ ಸರ್ ಸಿಮೂರ್ ಫಿತ್ಸ್‌ಜೆರಾಲ್ಡ್ ಎಂಬವರು ಅಧಿಕಾರ ಹೊಂದಿದ್ದಾರೆ.

ಒಕ್ಟೋಬರ ತಿಂಗಳಲ್ಲಿ ಮುಂಬಾಯಿಯಿಂದ ಶುಮಾರು ೮೦೦೦ ಮಂದಿ ಸೋಲ್ಜರರೂ ಶಿಪಾಯರೂ ರಾಹುತರೂ ಹಡಗವನ್ನೇರಿ ಅಬಿಸ್ಸೀನ್ಯವೆಂಬ ಅಫ್ರಿಕ ಖಂಡದ ಪೂರ್ವ ಪಾರ್ಶ್ವದಲ್ಲಿರುವ ದೇಶಕ್ಕೆ ಹೋದರು. ನಾಲ್ಕು ವರುಷಗಳ ಹಿಂದೆ ಥಿಯೆದೋರೊಸ್ ಎಂಬ ಆ ದೇಶದ ಅರಸು ಕೆಲವು ಇಂಗ್ಲಿಷರನ್ನೂ ಬೇರೆ ವಿಲಾಯತಿಯವರನ್ನೂ ಸುಮ್ಮನೆ ಅನುಮಾನ ಪಟ್ಟು, ಕೋಪ ಮಾಡಿ, ಶೆರೆಗೆ ವೈದು, ಪೀಡಿಸಿದನು. ಇಂಗ್ಲಾಂಡಿನ ಪ್ರಧಾನರು ತಿರಿಗಿ ತಿರಿಗಿ ರಾಯಭಾರಿಗಳನ್ನೂ ಉಡುಗೆರೆಗಳನ್ನೂ ಕಳುಹಿಸಿ ಅರಸನ ಹತ್ತಿರ, ಅವನು ಕಾರಣವಿಲ್ಲದೆ ಶೆರೆಗೆ ಹಾಕಿದವರನ್ನು ಬಿಡ ಬೇಕೆಂತ ಕೇಳಿದರು. ಆದರೆ ಅರಸನು ಕಿವಿಗೊಡದೆ ಒಬ್ಬ ರಾಯಭಾರಿಯನ್ನೂ ಹಿಡು ಕೊಂಡನು. ಬ್ರಿತಿಷರು ಬಹು ತಾಳ್ಮೆಯಿಂದ ಇದು ವರೆಗೆ ಕಾದು ಕೊಂಡ ಮೇಲೆ, ಕಡೆಯಲ್ಲಿ ಆ ಶೆರೆಯವರನ್ನು ಬಲವಂತದಿಂದ ರಕ್ಷಿಸ ನಿಶ್ಚೈಸಿ, ಮುಂಬಾಯಿಯಿಂದಲೂ ಇಂಗ್ಲಾಂಡಿನಿಂದಲೂ ಒಂದು ಸೇನೆ ಕಳುಹಿಸಿ ಯುದ್ಧ ತೊಡಗುವರು.

ಕೊಚಿನ್‌ಚೀನದಲ್ಲಿ ಫ್ರಂಚರು ಇನ್ನು ಕೆಲವು ಜಿಲ್ಲೆಗಳನ್ನು ತಮಗೆ ವಶ ಮಾಡಿ ಕೊಂಡರು.

ವಿಲಾಯತಿ ಖಂಡ.

ಹೋದ ವರುಷದ ಪಂಚಾಂಗದಲ್ಲಿ ಪ್ರುಸ್ಯರೂ ಔಸ್ತ್ರಿಯರೂ ನಡಿಸಿದ ವಿಶೇಷ ಯುದ್ಧದ ವರ್ತಮಾನ ಹೇಳಿದೆವಲ್ಲ? ಇತ್ತಲಾಗಿ ಜರ್ಮನಿಯ ಉತ್ತರ ಸಂಸ್ಥಾನಗಳಲ್ಲಿ ಪ್ರುಸ್ಯರ ಸಂಗಡ ಒಂದು ಒಪ್ಪಂದ ಮಾಡಿ, ಒಂದು ದೊಡ್ಡ ರಾಜ್ಯವಾಗಿ ಕೂಡಿ ಕೊಂಡು, ಒಂದು ಆಲೋಚನಾಸಭೆ ನೇಮಿಸಿದರು. ದಕ್ಷಿಣ ಸಂಸ್ಥಾನದವರು ಸಹ ಈ ಒಪ್ಪಂದಕ್ಕೆ ಒಳಗಾಗ ಬೇಕೆಂಬ ಅಪೇಕ್ಷೆ ತೋರಿಸುತ್ತಾರೆ.

ತುರ್ಕರಿಗೆ ವಶವಾಗಿದ್ದ ಭೂಮಧ್ಯಸಮುದ್ರದಲ್ಲಿರುವ ಕ್ರೇತವೆಂಬ ದ್ವೀಪದ ನಿವಾಸಿಗಳು ದಂಗೆ ಎಬ್ಬಿಸಿ ಬಹು ಧೈರ್ಯದಿಂದ ಯುದ್ಧ ನಡಿಸಿದರು. ಆದರೆ ಕಡೆಯಲ್ಲಿ ತುರ್ಕರು ಕಳುಹಿಸಿದ ದೊಡ್ಡ ಸೇನೆಗಳ ಮುಂದೆ ಇನ್ನು ನಿಲ್ಲಲಾರದೆ ಹೋದರು. ವಿಲಾಯತಿಯ ಕೆಲವು ದೇಶಗಳ ಸರಕಾರಿಗಳು ಈ ದ್ವೀಪವನ್ನು ಗ್ರೇಕರ ರಾಜ್ಯಕ್ಕೆ ಶೇರಗೊಡಿಸ ಬೇಕೆಂದು ಸುಲ್ತಾನನ ಹತ್ತಿರ ಸೂಚಿಸಿದರು, ಆದರೆ ಈ ಸಂಗತಿ ಇನ್ನು ತೀರಿಕೆ ಆಗಲಿಲ್ಲ.

ಸ್ಪೇನ್ ದೇಶದವರು ಸಹ ತಮ್ಮ ಅನ್ಯಾಯವಾದ ಸರಕಾರದವರಿಗೆ ವಿರೋಧವಾಗಿ ಎದ್ದು, ತಮಗೆ ಹೆಚ್ಚು ಸ್ವತಂತ್ರ ಆಗ ಬೇಕೆಂದು ಪ್ರಯತ್ನ ಮಾಡುತ್ತಾರೆ.

ವಿಲಾಯತಿಯಲ್ಲಿ ಹೋದ ವರುಷದ ಮುಖ್ಯ ಸಂಗತಿ ಯಾವದಂದರೆ, ಪರಿಸ್ ಎಂಬ ಫ್ರಂಚ ದೇಶದ ರಾಜಧಾನಿಯಲ್ಲಿ ಮಾಡಿದ ಒಂದು ಕಾರ್ಯವು. ಈ ಬಗ್ಗೆ ಮಹಾರಾಜನು ಕಟ್ಟಿಸಿದ ಒಂದು ಮಹಾ ವಿಸ್ತಾರವಾದ ಮನೆಯಲ್ಲಿ ಸರ್ವಲೋಕದ ಉತ್ಪನ್ನಗಳನ್ನೂ ಕೈಕೆಲಸಗಳನ್ನೂ ಚಮತ್ಕಾರದ ಕೆಲಸಗಳನ್ನೂ ವೇಡಿಕೆಗಾಗಿ ಇಟ್ಟರು. ಇದರಷ್ಟು ಪ್ರಖ್ಯಾತ ಕಾರ್ಯವು ಮುಂಚೆ ಎಲ್ಲಿಯೂ ಎಂದಿಗೂ ಕಾಣಲಿಲ್ಲ ಅಂತೆ. ಅದನ್ನು ನೋಡಲಿಕ್ಕೂ ಮಹಾರಾಜನ ಭೇಟಿ ಮಾಡಲಿಕ್ಕೂ ರುಸ್ಯದ ಮಹಾರಾಜನೂ, ಪ್ರುಸ್ಯದ ಅರಸೂ, ಸುಲ್ತಾನನೂ, ಮಿಸ್ರ ದೇಶದ ಅರಸೂ, ಬೇರೆ ಅರಸುಗಳೂ, ಶ್ರೀಮಂತರೂ ಬಂದಿದ್ದರು. ಇದಲ್ಲದೆ ಲಕ್ಷಾಂತರ ಜನರು ಎಲ್ಲಾ ದೇಶಗಳಿಂದ ಕೂಡಿ ಬಂದರು. ಹಿಂದುಸ್ಥಾನದಿಂದ ಸಹಾ, ಮುಖ್ಯವಾಗಿ ಗುರ್ಜರಾಷ್ಟ್ರದಿಂದ ಅನೇಕ ಸಾಖ್ಯಸ್ಥರಾದ ಬ್ರಾಹ್ಮಣರು, ಅಲ್ಲಿಗೆ ಹೋದರು. ಅವರಲ್ಲಿ ಹೆಚ್ಚಾದವರು ಗಾಯಕವಾಡರ ಅಪ್ಪಣೆಯಿಂದ ಈ ಪ್ರಯಾಣ ಮಾಡಿದರು. ಅಲ್ಲಿಂದ ಸುಲ್ತಾನನೂ ಮಿಸ್ರ ದೇಶದ ಅರಸನೂ ಇಂಗ್ಲಾಂಡಿಗೆ ಹೋಗಿ, ರಾಣಿಯಿಂದಲೂ ಪ್ರಧಾನರಿಂದಲೂ ಜನರಿಂದಲೂ ಬಹುಮಾನ ಹೊಂದಿದ್ದಾರೆ.

ಅಮೆರಿಕ ಖಂಡ.

ಅಲ್ಲಿಂದ ಒಂದು ದುಃಖಕರವಾದ ವರ್ತಮಾನ ಬಂದದೆ. ಹೋದ ವರುಷದಲ್ಲಿ ಒಂದು ವೇಳೆ ಆದೀತು ಎಂದು ಹೇಳಿದ್ದು ಆಯಿತು. ಮೆಕ್ಸಿಕೋ ಎಂಬ ದೇಶಕ್ಕೆ ಫ್ರಂಚ ಮಹಾರಾಜನು ಬಲವಂತದಿಂದ ನೇಮಿಸಿದ ಮಹಾರಾಜನನ್ನು ಆ ದೇಶದವರು ಎದುರಿಸಿ, ಫ್ರಂಚರು ಹೋದ ಮೇಲೆ ಹೆಚ್ಚು ಕೃತಾರ್ಥರಾಗಿ, ಕಡೆಯಲ್ಲಿ ಮಹಾರಾಜನ ಸೇನೆಯನ್ನು ಜೈಸಿ ಅವನನ್ನು ಹಿಡುಕೊಂಡು, ಕೊಂದು ಹಾಕಿದರು.

ಉತ್ತರ ಸಂಸ್ಥಾನಗಳ ಆಚೆ ಇರುವ ಕನದವೆಂಬ ಬ್ರಿಟಿಷ ಸಾಮ್ರಾಜ್ಯದ ಒಂದು ವಿಭಾಗಕ್ಕೆ ರಾಣಿಯು ಒಬ್ಬ ಪ್ರತಿನಿಧಿಯನ್ನೂ ಸ್ವಂತ ಆಲೋಚನಾಸಭೆಯನ್ನೂ ನೇಮಿಸಿದ್ದರಿಂದ ಅವರು ಇನ್ನು ಮುಂದೆ ತಮ್ಮ ಕಾರ್ಯಗಳನ್ನು ತಾವೇ ನಡಿಸುವರು.

ಹೀಗೆ ಒಟ್ಟು ನೋಡಿದರೆ, ಹೋದ ವರುಷದಲ್ಲಿ ಸ್ವಲ್ಪ ಕಡಿಮೆ ಭೂಲೋಕವೆಲ್ಲಾದರಲ್ಲಿ ಸಮಾಧಾನವಿದ್ದು, ವ್ಯಾಪಾರವೂ, ಬೇರೆ ಕೆಲಸಗಳೂ ಅಡ್ಡಿ ಇಲ್ಲದೆ ನಡೆದು ಬಂದವು. ಇದು ಮಾತ್ರ ನಿಜಸೌಖ್ಯಕ್ಕೆ ಸಾಕಾಗುವದಾದರೆ, ಮನುಷ್ಯರಿಗೆಲ್ಲ ಒಳ್ಳೇದಾಗ ಬೇಕಾಯಿತು. ಆದರೆ ಹೊರಗಿನ ಸ್ಥಿತಿಯೂ ಆಸ್ತಿ ಮುಂತಾದ ಈ ಲೋಕವು ಕೊಡುವಂಥಾ ಭೋಗವೂ ಸತ್ಯ ತೃಪ್ತಿ ಕೊಡಲಾರವು. ನಾನು ಲೋಕವೆಲ್ಲ ಸಂಪಾದಿಸಿ ಕೊಂಡು, ನನ್ನ ಪ್ರಾಣ ಕಳಕೊಂಡರೆ, ಅಂದರೆ ನಿತ್ಯಜೀವದ ನಿರೀಕ್ಷೆ ಇಲ್ಲದೆ ಈ ಜೀವವನ್ನು ಬಿಡ ಬೇಕಾದರೆ, ನನಗೆ ಪ್ರಯೋಜನವೇನು? ಇದನ್ನು ಓದುವವರೆಲ್ಲರು ನಿಜಜ್ಞಾನ ಕಲಿತು, ಲಯವಾಗದಂಥಾ ಪೂರ್ಣ ತೃಪ್ತಿ ಕೊಡುವಂಥಾ ಆಸ್ತಿಯನ್ನು ಕೂಡಿಸಿ ಕೊಂಡರೆ, ಎಷ್ಟೋ ಒಳ್ಳೇದು!

ಕನ್ನಡ, ಮಲಯಾಳ ಜಿಲ್ಲೆಗಳಲ್ಲಿಯೂ, ಕೊಡಗದಲ್ಲಿಯೂ

ಶಿಕ್ಕುವಂಥ

ವೃಕ್ಷಾದಿಗಳ ವರ್ಣನೆ.

೧. ಅಧ್ಯಾಯ: ಅಕಾರ.

ಈ ನಮ್ಮ ದೇಶದಲ್ಲಿ ಹುಟ್ಟುವ ವಿವಿಧವಾದ ವೃಕ್ಷಾದಿಗಳನ್ನು ಕುರಿತು ಸಾಧಾರಣವಾಗಿ ಈ ದೇಶದ ಜನರು ಸ್ವಲ್ಪ ಮಾತ್ರ ತಿಳಿಯುತ್ತಾರಲ್ಲದೆ, ಅವುಗಳ ಸ್ವರೂಪ ಪ್ರಯೋಜನಗಳನ್ನೂ ಅರಿಯದಿರುವದರಿಂದ, ಅಂಥವರ ತಿಳುವಳಿಕೆಗಾಗಿಯೂ, ಪರಿಕ್ಷಾರ್ಥವಾಗಿಯೂ ಕೆಳಗಿನ ಸಣ್ಣ ನಿಘಂಟು ಈ ವರ್ಷದ ಪಂಚಾಂಗದಲ್ಲಿ ಪ್ರಕಟಿಸುತ್ತೇವೆ.

ಸೂಚನೆ: ತು.	ಅಂದರೆ	ತುಳು.	ಮ.	ಅಂದರೆ	ಮಲಯಾಳ.
ತೆ.	„	ತೆಲುಗು.	ಹಿಂ.	„	ಹಿಂದುಸ್ಥಾನಿ.
ಮಹಾ.	„	ಮಹಾರಾಷ್ಟ್ರ	ತ.	„	ತಮಿಳು.
ಸಂ.	„	ಸಂಸ್ಕೃತ.	ಕೊಂ.	„	ಕೊಂಕಣಿ.
ಹುಟ್ಟು.	„	ಹುಟ್ಟುಸ್ಥಳ.	ಪುಷ್ಪ.	„	ಪುಷ್ಪ ಸಮಯ.

ಇಂಗ್ಲಿಷ್ ಅಕ್ಷರಗಳಿಂದ ಬರೆದ ಶಬ್ದಗಳು ವಿಲಾಯಿತೀ ವಿದ್ವಾಂಸರು ಇಟ್ಟ ಲಾತೀನ ಹೆಸರುಗಳೇ.

1. ಅಂಕೋಲೆ ಮರ. *Alangium decapetalum* (*Lam.*) ಮ: ಅಂಗೊಲಂ. ಸಂ: ಅಂಕೋಲ.

ಹುಟ್ಟು: ಪಶ್ಚಿಮ ಪೂರ್ವ ಘಟ್ಟಗಳು, ಅಸ್ಸಾಂ. ಪುಷ್ಪ: ಚೈತ್ರ, ವೈಶಾಖ.

ಔಷಧೋಪಯೋಗ. ಬೇರು (ಪುಡಿ): ಸರ್ಪದಂಶಕ್ಕೆ. ಬೇರಿನ ಮತ್ತು ಕೆತ್ತೆಗಳ ರಸವು ಬೀಗಿಗೂ, ಕ್ರಿಮಿರೋಗಕ್ಕೂ. ಎಲೆಗಳು, ಎಣ್ಣೆಯಲ್ಲಿ ಕಾಯಿಸಿ: ಶೇಕ ಕೊಡುವದು. ಬೀಜಗಳ ತೈಲ ಸರ್ಪ ಕಚ್ಚಿದರೆ, ಘಾಯಕ್ಕೆ ಹಾಕುವದು.

ಸಾಧಾರಣ ಉಪಯೋಗ. ಮರವು ಘಟ್ಟಿಯೂ ನಯವೂ ಇರುವದರಿಂದ, ಕೆಲಸಕ್ಕೆ ಒಳ್ಳೇದು.

2. ಅಂಟುವಾಳ ಮರ ಇಲ್ಲವೆ ಅಂತರಳೇ ಮರ, ಅರಡಾಳ ಮರ. *Sapindus emarginatus* (*Vahl.*)

ಹುಟ್ಟು: ಸಾಧಾರಣವಾಗಿ ಎಲ್ಲಿಯೂ ಸಿಕ್ಕುತ್ತದೆ, ಹೆಚ್ಚಾಗಿ ಬಂಗಾಳದಲ್ಲಿ.

ಪುಷ್ಪ: ಆಶ್ವೀಜ, ಕಾರ್ತೀಕ.

ಔಷ: ಬೀಜ ಶಿಪ್ಪೆ: ಶ್ವಾಸಖಾಸಕ್ಕೆ, ಅದನ್ನು ಜಜ್ಜಿದರೆ, ಘಾಯಕ್ಕೆ ಒಳ್ಳೇದು. ಬೀಜ ಬಾಯಿಯಲ್ಲಿ ಇಟ್ಟರೆ, ಅಪಸ್ಮಾರಕ್ಕೆ.

ಸಾಧಾರಣ ಉಪ: ಬೀಜ ಶಿಪ್ಪೆಯಿಂದ ಕೂದಲನ್ನೂ ರೇಶ್ಮಿಯನ್ನೂ ಬೆಳ್ಳಿ ಚಂಗಾರಗಳನ್ನೂ ತೊಳೆಯುವದು.

3. ಅಂಟಿನ ಮರ. *Diospyros embryopteris* (*Pers.*)

ಹುಟ್ಟು: ಪಶ್ಚಿಮ ಘಟ್ಟಗಳು.

ಔಷ: ಅಂಟು ದೇಹ ಪುಷ್ಟಿಗೆ ಒಳ್ಳೇದು.

ಸಾಧಾರಣ ಉ: ಅಂಟು ಕೆಲಸಕ್ಕೂ ಆಗುತ್ತದೆ.

4. ಅಂತರಗಂಗೆ ಗಿಡ. *Pistia stratiotes* (*Linn.*)

ಹುಟ್ಟು: ಕೆರೆಗಳು. ಪುಷ್ಪ: ಚೈತ್ರ.

ಔಷ: ಚಾವ ತಂಪು. ಬೇರು: ವಿರೋಚನೆಗೂ, ಲಘು ಮಾಡುವದಕ್ಕೂ. ಎಲೆಗಳು: ರಕ್ತಭೇದಿಗೂ, ಅಜೀರ್ಣಕ್ಕೂ, ಕೆಮ್ಮಿಗೂ, ಶ್ವಾಸಖಾಸಕ್ಕೂ ಉಪಯೋಗ.

5. ಅಂದುವೃಕ್ಷ. *Boswellia integrifolia.*

6. ಅಪೂರಣಿ ಮರ ಇಲ್ಲವೆ ಬೂರುಗದ ಮರ, ಯಲವ ಮರ, ಬೂರಗದ ಮರ, ಬೂರದ ಮರ. *Eriodendron anfractuosum* (*D. C.*) ಸಂ: ಶಲ್ಮಲಿವೃಕ್ಷ.

ಹುಟ್ಟು: ಸಾಧಾರಣ. ಪುಷ್ಪ: ಮಾರ್ಗಶಿರ, ಪುಷ್ಯ.

ಔಷ: ಅಂಟು ಸಂಬಾರ ಜೀನಸುಗಳ ಸಮೇತ ಕರಳುಗಳ ಅಕ್ರಮಕ್ಕೆ.

ಸಾಧಾ: ಅರಳೆ ಹಾಸಿಗೆಗಳಿಗೆ ಹಾಕುವದು; ಹೂವು ಒಣಗಿಸಿ ಪುಡಿ ಮಾಡಿದರೆ, ಒಳ್ಳೇ ತಂಪು ಶೀಗೆ.

7. ಅಂಬಟೆ ಮರ. *Spondias mangifera* (*Pers.*) ಮಹಾ: ಕಾರಂಜ ಮರ.

ಹುಟ್ಟು: ಘಟ್ಟ ಅಡವಿಗಳು. ಪು: ಫಾಲ್ಗುಣ.

ಔಷ: ಚೀರು: ಸೂಶಿಕ ಸಮ ಆಗುವ ಹಾಗೆ. ಶಿಪ್ಪೆ: ಅಜೀರ್ಣ ರೋಗಕ್ಕೆ. ಎಲೆಗಳೂ ಕಾಯಿಯೂ ಕಿವಿ ಬೇನೆಗೆ.

ಸಾಧಾ: ಕಾಯಿ ತಿನ್ನ ಬಹುದು. ಎಳದಾಗಿರುವಾಗ ಉಪ್ಪಿನ ಕಾಯಿ ಮಾಡುತ್ತಾರೆ. ರಸ ಬೇಯಿಸಿ ಸಿರ್ಕ ಮಾಡುವದುಂಟು.

8. ಅಂಬಟೇ ಹುಲ್ಲು ಇಲ್ಲವೆ ಗರಿಕೇ ಹುಲ್ಲು, ಕರಿಕೇ ಹುಲ್ಲು. *Pentaptera tomentosa.*

ಹುಟ್ಟು: ಸಾಧಾರಣ.

ಔಷ: ಚಾವ ತಂಪು. ರಸ ಕೊಟ್ಟರೆ, ರಕ್ತ ಕಾರುವದು ನಿಲ್ಲುತ್ತದೆ. ಕಷಾಯ ಜ್ವರಕ್ಕೆ ಒಳ್ಳೇದು.

ಸಾಧಾ: ದನಕ್ಕೆ ಬಹು ಒಳ್ಳೇ ಆಹಾರ.

9. ಅಂಬು ಗರಿಕೇ ಹುಲ್ಲು. *Cynodon dactylon* (*Pers.*) ಸಂ: ದೂರ್ವಾ.
ಮೇಲಿನ ಹುಲ್ಲಿನ ಗುಣವುಳ್ಳದ್ದು. ಅದಕ್ಕಿಂತ ದೊಡ್ಡದು.

10. ಅಂಬುಸೊಂಡೆ ಬಳ್ಳಿ, ಇಲ್ಲವೆ ಕಾಕಮುಂಚಿ ಗಿಡ. *Solanum trilobatum* (*Linn.*)
ಹುಟ್ಟು: ಪಶ್ಚಿಮ ತೀರ, ಕನ್ಯಾಕುಮಾರಿ, ದಖ್ಖಣ.
ಔಷ: ಬೇರೂ ಎಲೆಗಳೂ ಕ್ಷಯರೋಗಕ್ಕೆ, ಹೂವು ಮತ್ತು ಕಾಯಿ ಕಷಾಯ ಮಾಡಿದರೆ, ಕೆಮ್ಮಿಗೆ ಉಪಯೋಗ.

11. ಅಂಬೇ ಹಳದಿ ಗಿಡ ಇಲ್ಲವೆ ಆನೆ ಮಂಜಲು, ಕಾಡರಸಿನ. *Curcuma aromatica* (*Salisb.*) ಹಿಂ: ಜಂಗಲ್ಹಲ್ದಿ. ಕೊಂ: ಆಂಬಹಳದಿ.
ಹುಟ್ಟು: ಪಶ್ಚಿಮ ತೀರ, ಬಂಗಾಳ. ಪುಷ್ಪ: ಫಾಲ್ಗುಣ, ಚೈತ್ರ, ವೈಶಾಖ.
ಔಷ: ಬೇರು ಇಲ್ಲವೆ ಗಡ್ಡೆ ಶರೀರದ ಬಲಕ್ಕೆ, ಅದರ ರಸ ಮೈಗೆ ಹಚ್ಚಿದರೆ, ಖಜ್ಜಿ ಒಣಗುವದು.
ಸಾಧಾ: ಪರಿಮಳಕ್ಕಾಗಿ ಉಪ್ಪಿನ ಕಾಯಿಗೆ ಬೆರಸುತ್ತಾರೆ.

12. ಅಕ್ಕಿ. *Oryza sativa* (*Linn.*) ಸಂ: ತಂಡುಲ. ತು: ಅರಿ. ತ: ಅರಿಶಿ. ತೆ: ಬಿಯಮು. ಮಹಾ: ತಾಂದುಲ್ಲ.
ಇದರ ಪ್ರಯೋಜನ ವಿವರಿಸಲಿಕ್ಕೆ ಅವಶ್ಯವಿಲ್ಲ.

13. ಅರ್ಕೆಬೂರು ಇಲ್ಲವೆ ಅಡ್ಕೆಬೀಳು ಬಳ್ಳಿ. *Pothos scandens* (*Linn.*)
ಹುಟ್ಟು: ಅಡವಿಗಳು.
ಔಷ: ಬೇರು ಗುದ್ದಿ ಎಣ್ಣೇ ಸಮೇತ ತಲೆಗೆ ಹಚ್ಚಿದರೆ, ತಲೇ ಖಜ್ಜಿ, ಕುರು ಸಹ ಗುಣ.

14. ನವಣೆ ಅಕ್ಕಿ ಇಲ್ಲವೆ ಕಂಗೂ, ಪ್ರಿಯಂಗು. *Panicum italicum* (*Linn.*)
ಇದೊಂದು ಒಳ್ಳೇ ಧಾನ್ಯ; ಗೋಧೀ ಹಾಗೆ ಬಲ ಕೊಡುವಂಥಾದ್ದು.

15. ಅಗಚೆ ಮರ ಇಲ್ಲವೆ ಅಗಸೆ ಮರ. *Agati grandiflora* (*Desv.*)
ಹುಟ್ಟು: ಪಶ್ಚಿಮ ತೀರದ ತೋಟಗಳು. ಪುಷ್ಪ: ಫಾಲ್ಗುಣ, ಚೈತ್ರ.
ಔಷ: ಶಿಪ್ಪೆ: ಶರೀರಕ್ಕೆ ಬಲ ಕೊಡುವದು, ಅದರ ಕಷಾಯ ಮೈಲಿಗೆ ರೋಗದಲ್ಲಿ ಪ್ರಯೋಗಿಸುತ್ತಾರೆ. ಎಲೆಗಳು: ಜ್ವರಕ್ಕೂ ಖಾಸಕ್ಕೂ. ಹೂವಿನ ರಸ ಮಂದ ಕಣ್ಣಿಗೆ ಒಳ್ಳೇದು.
ಸಾಧಾ: ಎಲೆಹೂಕಾಯಿಗಳು ಪಲ್ಯವಾಗಿವೆ.

16. ಅಗರುಗಂಧ ಮರ ಇಲ್ಲವೆ ಅಗಿಲುಗಂಧ ಮರ. *Chickrassia tabularis* (*Ad. Iuss.*)
ಹುಟ್ಟು: ಘಟ್ಟ ಅಡವಿಗಳು, ಹೆಚ್ಚಾಗಿ ಚಿತ್ತಗೊಂಗ. ಪುಷ್ಪ: ಚೈತ್ರ, ವೈಶಾಖ.
ಔಷ: ಶಿಪ್ಪೆ: ಅತಿಸಾರಕ್ಕೂ ಕ್ರಿಮಿರೋಗಕ್ಕೂ ಒಳ್ಳೇದು.
ಸಾಧಾ: ಪರಿಮಳ; ಮರ ಕೆಲಸಕ್ಕೆ ವಿಶೇಷವಾದದ್ದು.

17. ಅಗಸೆ ಗಿಡ, ಇಲ್ಲವೆ ಚಗಚ ಗಿಡ, ಅಗತಿ ಗಿಡ, ಅಗಶಿ ಗಿಡ *Linum usitatissimum* (*Linn.*)

ಹುಟ್ಟು: ವಿಶೇಷವಾಗಿ ನೀಲಗಿರಿಗಳೂ, ಉತ್ತರ ಹಿಂದುಸ್ಥಾನವೂ.

ಪುಷ್ಪ: ಮಾರ್ಗಶಿರ, ಪುಷ್ಯ, ಮಾಘ.

ಔಷ: ಬೀಜ: ಜುಲಾಬು ನಿಲ್ಲಿಸುತ್ತದೆ, ಅಜೀರ್ಣ, ಶ್ವಾಸ, ಕರುಳುಗಳ ಅಕ್ರಮ ಇವುಗಳಿಗೆ ಉಪಯೋಗ. ಎಣ್ಣೆಯೂ ಲಿಂಬೆರಸವೂ ಕೂಡಿದರೆ, ಬೆಂದ ಹುಣ್ಣು ಸುಟ್ಟ ತೊಗಲೂ ವಾಸಿಯಾಗುವದು.

ಸಾಧಾ: ಎಣ್ಣೆ ದೀಪಕ್ಕೆ ಆಗುತ್ತದೆ, ಅದನ್ನು ಕಾಸಿದರೆ, ಮರದ ಕೆಲಸಕ್ಕೆ ಒಳ್ಳೇ ಲೇಪವಾಗುವದು. ನಾರು ಹಗ್ಗ ವಸ್ತ್ರಗಳನ್ನು ಮಾಡಲಿಕ್ಕೆ ಉತ್ತಮ.

18. ಅಗಳೇ ಶುಂಠಿ ಗಿಡ. *Cissampelos hexandra?* ಸಂ: ಕೋಲಾಂಜನ.

ಹುಟ್ಟು: ಅಡವಿ.

ಔಷ: ಚಾವ ಉಷ್ಣ. ಬೇರು ಹೊಟ್ಟೆನೋವಿಗೆ.

ಸಾಧಾ: ಪರಿಮಳ.

19. ಅಜಾಗರ ಗಿಡ ಇಲ್ಲವೆ ಬೊಡದರಗ, ಗರುಗ, ಗರ್ಗ *Eclipta erecta* (*Linn.*) ಮ: ಕೈಯೆನ್ನಿ. ಸಂ: ಭೃಂಗರಾಜ.

ಹುಟ್ಟು: ನೀರುಳ್ಳ ಸ್ಥಳಗಳು.

ಔಷ: ಕ್ರಿಮಿನಾಶ, ಅಜೀರ್ಣಹರ, ತಲೆಪಾಶೆಹರ, ಎಲೇ ರಸ ಎಣ್ಣೆಯಲ್ಲಿ ಕಾಸಿದರೆ, ಬೀಗುಹರ. ಎಣ್ಣೆಯೂ ಎಳ್ಳೆಣ್ಣೆಯೂ ಕೂಡಿಸಿ ಆನೆಕಾಲಿಗೆ ಹಚ್ಚುವದು.

20. ಅಜಾಮುಲಗಿಡ ಇಲ್ಲವೆ ಮೋವ, ಮೋಮ, ಅಜಾಮೋದದ ಗಿಡ. *Ptychotis ajowan.* (*D. C.*) ಮ: ಐಮೋರಂ. ಹಿಂ: ಅಜವಾನ್.

ಹುಟ್ಟು: ಸಾಧಾರಣ, ಹೆಚ್ಚಾಗಿ ಘಟ್ಟಗಳಲ್ಲಿ. ಪುಷ್ಪ: ಮಾರ್ಗಶಿರ, ಪುಷ್ಯ.

ಔಷ: ಬೀಜಗಳ ಎಣ್ಣೆ ರಸಗಳು ಅಜೀರ್ಣಕ್ಕೂ ಕ್ರಿಮಿರೋಗಕ್ಕೂ ವಾತರೋಗಕ್ಕೂ ಕರುಳುಗಳ ಅಕ್ರಮಕ್ಕೂ.

21. ಅಡಿಕೆ ಮರ. *Areca catechu* (*Linn.*) ತು: ಕಂಗ್. ಮ: ಕಯ್ಂಗ್. ಹಿಂ: ಸುಪಾರಿಕೇ ಝಾಡ್. ಸಂ: ಪೂಗ ವೃಕ್ಷ.

ಹುಟ್ಟು: ತಗ್ಗು ಸೀಮೆಗಳು. ಪುಷ್ಪ: ಚೈತ್ರ, ವೈಶಾಖ.

ಔಷ: ಚಾವ ಉಷ್ಣ. ಕಾಯಿ ಅರಿದು ಬಾವಿಗೆ ಹಚ್ಚುವದು.

ಸಾಧಾ: ಕಾಯಿ ಅನೇಕರು ತಿನ್ನುತ್ತಾರೆ. ಅದು ಬಣ್ಣಕ್ಕೆ ಪ್ರಯೋಗವಾಗುತ್ತದೆ. ಕಾಯಿ ಸುಟ್ಟು ಮಶಿ ಮಾಡಿ ಹಲ್ಲು ತಿಕ್ಕಿದರೆ ಒಳ್ಳೇದು.

22. ಅಡವಿ ತಾವರೇ ಗಿಡ ಇಲ್ಲವೆ ವನತಾವರೇ ಗಿಡ. *Hibiscus mutabilis.* ಸಂ: ಅತಿಚರ.

ಹುಟ್ಟು: ಅಡವಿ. ಪುಷ್ಪ: ಚೈತ್ರ, ವೈಶಾಖ.

ಔಷ: ಶರೀರ ಘಟ್ಟಿ ಮಾಡುತ್ತದೆ.

23. ಅಡ್ಡಸರ ಮರ ಇಲ್ಲವೆ ಆಡುಸೋಗೆ, ಆಡುಪೊಗೆ, ಅಡ್ಡಲಸ, ಬ್ಯಾಲದ ಮರ. *Adhatoda vasica* (*Nees.*) ಮ: ಆಟಲೋಡ್. ಸಂ: ವಾಶಾವೃಕ್ಷ.

ಹುಟ್ಟು: ಎಲ್ಲೆಲ್ಲಿಯೂ ಆಗುತ್ತದೆ. ಪುಷ್ಪ: ಪುಷ್ಯದಿಂದ ಚೈತ್ರ ವರೆಗೆ.

ಔಷ: ಕೆಮ್ಮಿಗೂ ಶ್ವಾಸಖಾಸಕ್ಕೂ ಜ್ವರಕ್ಕೂ ಉಪಯೋಗ.

24. ಅಡವಿಗೋರಂಟಿ. *Sethia indica* (*D. C.*)

ಹುಟ್ಟು: ದಕ್ಷಿಣ ಹಿಂದುಸ್ಥಾನ. ಪುಷ್ಪ: ಆಷಾಢದಿಂದ ಮಾರ್ಗಶಿರ ವರೆಗೆ.

ಔಷ: ತಂಪು ಮತ್ತು ಬಲ ಕೊಡುವಂಥಾದ್ದು. ಎಲೆಗಳೂ ಚಿಗುರುಗಳೂ ಗುದ್ದಿ ಎಣ್ಣೆಯಲ್ಲಿ ತಲೆಗೆ ಹಚ್ಚಿದರೆ, ಪಿತ್ತಹರ; ನಿದ್ರೆಗೂ ಮಂದ ಕಣ್ಣಿಗೂ ಸಹ ಒಳ್ಳೇದು.

ಸಾಧಾ: ಮರಕ್ಕೆ ಪರಿಮಳ ಉಂಟು. ಅದು ಕೆಲಸಕ್ಕೆ ಸಹ ಆಗುತ್ತದೆ.

25. ಅಡುಂಬುಬಳ್ಳಿ ಇಲ್ಲವೆ ಕೆಂಪು ಬಂಗದ ಬಳ್ಳಿ. *Ipomoea pes-caproe* (*Sweet.*)

ಹುಟ್ಟು: ತೋಟ ಗುಡ್ಡಗಳು.

ಔಷ: ಎಲೆ: ಕಾಯಿಸಿ ತಿಕ್ಕಿದರೆ, ಕಠಿಣ ಹೊಟ್ಟೆನೋವಿಗೆ, ಅದರ ಕಷಾಯ ವಾತರೋಗಕ್ಕೆ.

ಸಾಧಾ: ನೀರು ಶುದ್ಧ ಮಾಡುತ್ತದೆ.

26. ಅತ್ತೀ ಮರ. *Ficus racemosa* (*Linn.*) ಸಂ: ಔದುಂಬರ ವೃಕ್ಷ.

ಹುಟ್ಟು: ಪಶ್ಚಿಮ ತೀರ.

ಔಷ: ಬೇರು: ಅದರ ನೀರು ಶರೀರಕ್ಕೆ ತಂಪು ಕೊಡುತ್ತದೆ. ಕೆತ್ತೆಗಳು: ಕಷಾಯ ಮಾಡಿ, ಕೂವೆ ಹಿಟ್ಟು ಅಂಬಲಿ ಮಾಡಿ ಉಂಡರೆ ಉಷ್ಣಹರ, ರಕ್ತ ಹೋಗುವದು ಗುಣ, ಮೂತ್ರ ಶುದ್ಧಿಯಾಗುವದು. ಪುಡಿ ಮಾಡಿ ಎಳ್ಳೆಣ್ಣೆಗೆ ಕೂಡಿಸಿದರೆ, ಹಳೆ ಹುಣ್ಣುಗಳಿಗೆ ಒಳ್ಳೇದು. ಎಲೆಗಳು ಪುಡಿ ಮಾಡಿ ಜೇನು ಬೆರಸಿದರೆ ಪಿತ್ತರೋಗಕ್ಕೆ.

ಸಾಧಾ: ಎಳೆ ಎಲೆಗಳು ಪಲ್ಯ. ದನಕ್ಕೆ ಹಾಲು ಹೆಚ್ಚಿಸುತ್ತವೆ.

27. ಅತಿಮಧುರ ಮರ ಇಲ್ಲವೆ ಇಪ್ಪೇ ಮರ. *Butea frondosa* (*Roxb.*) ತೆ: ಮಧುಕ. ತ: ಪೊರಸುಂ. ಹಿಂ: ಪಲಸ್. ಕೊಂ: ಗೋಡಕೊಷ್ಟ್. ಸಂ: ಜೇಷ್ಠಮಧು.

ಹುಟ್ಟು: ಪಶ್ಚಿಮ ತೀರ. ಪುಷ್ಪ: ಮಾರ್ಗಶಿರದಿಂದ ಮಾಘ ವರೆಗೆ.

ಔಷ: ಮರ: ಕಷಾಯ ಮಾಡಿದರೆ ಕೆಮ್ಮುಹರ, ನೆಗಡಿ ಸಹ ಗುಣ, ಕಠಿಣ ಜ್ವರದಲ್ಲಿ ತ್ರಿಪಲೆಯಾಗಿ ಪ್ರಯೋಗಿಸುತ್ತಾರೆ. ಬೀಜಗಳು (tape-worm) ಲಾಡಿಹುಳಕ್ಕೆ ಒಳ್ಳೇದು.

ಸಾಧಾ: ಮರದ ತುಂಡನ್ನು ಕಲ್ಲುಸಕ್ಕರೆ ಸಹಿತವಾಗಿ ಅಗಿದರೆ, ಬಾಯಾರಿಕೆಹರ. ಅಂಟೂ, ಹೂವಿನ ರಸವೂ ಬಣ್ಣಕ್ಕೆ ಪ್ರಯೋಗಿಸುತ್ತಾರೆ. ಬೇರಿನ ನಾರುಗಳಿಂದ ಒಳ್ಳೇ ಹಗ್ಗವಾಗುತ್ತದೆ.

28. ಅಣಿಲೇ ಮರ ಇಲ್ಲವೆ ಅಳಲೇ ಮರ. *Terminalia chebula* (*Retz.*) ಮ: ಕಡುಕ ಮರಂ. ಹಿಂ: ಹರಡ್ಕೇ ಝಾಡ್. ಸಂ: ಹರೀತಕಿ ವೃಕ್ಷ.

ಹುಟ್ಟು: ಪಶ್ಚಿಮ ತೀರ, ಬಂಗಾಳ. ಪುಷ್ಪ: ಫಾಲ್ಗುಣ, ಚೈತ್ರ.

ಔ: ಕಾಯಿ: ಮೂತ್ರರೋಗಕ್ಕೂ ಭೇದಿಗೂ ಬೀಗಿಗೂ ಮೂಲವ್ಯಾಧಿಗೂ ಕಣ್ಣುನೋವಿಗೂ ಕುರುಪಿಗೂ ಖಜ್ಜಿಗೂ ಒಳ್ಳೇದು.

ಸಾಧಾ: ಮಶಿ ಮಾಡುತ್ತಾರೆ. ಕಾಯಿಯ ಕಷಾಯದಿಂದ ಮೈ ತೊಳೆಯುತ್ತಾರೆ; ಅದು ಬಣ್ಣಕ್ಕೆ ಸಹ ಉಪಯೋಗ.

29. ಅನಾಸು ಇಲ್ಲವೆ ಹನಾಸು, ಫಾರಿಂಗಿ ಹಲಸು. *Ananas sativus (Schult.)*
ಹುಟ್ಟು: ತೋಟಗಳು. ಪುಷ್ಪ: ಚೈತ್ರ, ವೈಶಾಖ.

ಸಾಧಾ: ಕಾಯಿ ತಿನ್ನುತ್ತಾರೆ. ಹೆಚ್ಚು ತಿಂದರೆ, ಕೂಡಲೇ ಅಜೀರ್ಣರೋಗ ಹತ್ತ ಬಹುದು. ಎಲೆಗಳಿಂದ ಬಹು ಒಳ್ಳೇ ನೂಲು ಮಾಡುತ್ತಾರೆ.

30. ಅನಿಲ್. *Tephrosia tinctorea (Pers.)*

31. ಅಪಾಮಾರ್ಗ ಗಿಡ ಇಲ್ಲವೆ ಉತ್ತರಣೀ ಗಿಡ *Achyranthes aspera (Linn.)* ಕೊಂ: ಕಾಂಟಮೊಗ್ರೀ.

ಹುಟ್ಟು: ತಿರುವಂಕೋಡು, ಪೂರ್ವ ತೀರ, ಬಂಗಾಳ.

ಔಷ: ಎಲೆ ಹೂವುಗಳು: ಚೇಳೂ ಹುಚ್ಚ ನಾಯಿಯೂ ಕಚ್ಚಿದ್ದಲ್ಲಿ. ಬೀಜ: ಹುಚ್ಚ ನಾಯಿ ಕಚ್ಚಿದ ರೋಗಕ್ಕೂ ಕಣ್ಣುರೋಗಕ್ಕೂ ಸರ್ಪದಂಶಕ್ಕೂ ಚರ್ಮನಂಜಿಗೂ. ಗಿಡ ಸುಟ್ಟು ಮಶಿ ಪುಡಿ ಮಾಡಿ, ಗಂಜಿಯಲ್ಲಿ ತೆಗೆದರೆ, ಬೀಗು ಗುಣ.

ಸಾಧಾ: ಬೇರು ಹಾಲಿನಲ್ಲಿ ಕಾಸಿ ಕುಡಿಯುತ್ತಾರೆ. ಬೇರಿನಿಂದ ಹಲ್ಲು ತಿಕ್ಕುವದು ಒಳ್ಳೇದು.

32. ಅಬ್ದ ಹುಲ್ಲು ಇಲ್ಲವೆ ಗೇಕಿನ ಗೆಡ್ಡೆ, ಗೇಕಿನ ಗಡ್ಡ, ಕೊರನಾರಿ ಗಡ್ಡೆ. *Cyperus hexastachyus* ಮ: ಮುತ್ತಜ. ತೆ: ತುಂಗಮುಸ್ತೆ. ಸಂ: ಭದ್ರಮುಷ್ಟಿ.

ಹುಟ್ಟು: ಸಾಧಾರಣ. ಪುಷ್ಪ: ಜ್ಯೇಷ್ಠದಿಂದ ಶ್ರಾವಣ ವರೆಗೆ.

ಔಷ: ಜ್ವರಕ್ಕೂ ಶೀತರೋಗಕ್ಕೂ ಅಜೀರ್ಣರೋಗಕ್ಕೂ ಅತಿ ಬೇಧಿಗೂ ಆಗುತ್ತದೆ.

ಸಾಧಾ: ಪರಿಮಳ.

33. ಅಬನಾಸಿ ಮರ ಇಲ್ಲವೆ ಕರಿಮರ, ಕರ್ಮರ್ ಮರ, ಬಿಲಾರದ ಮರ. *Diospyros melanoxylon (Roxb.)* ಮ: ಅಚಾಮರಂ. ಹಿಂ: ಸೀಸಂಕೇ ಝಾಡ್.

ಹುಟ್ಟು: ಪಶ್ಚಿಮ ಪೂರ್ವ ಘಟ್ಟಗಳು. ಪುಷ್ಪ: ಚೈತ್ರ, ವೈಶಾಖ.

ಔಷ: ಕೆತ್ತೆ ಪುಡಿ ಮಾಡಿದರೆ, ಹುಣ್ಣಿಗೂ ಒಳ್ಳೇ ಮೆಣಸು ಸಹಿತ ಅಜೀರ್ಣರೋಗಕ್ಕೂ ಆಗುತ್ತದೆ.

ಸಾಧಾ: ಮರವು ಉತ್ತಮ ತರದ ಕೆಲಸಕ್ಕೆ ಬರುತ್ತದೆ.

34. ಅಭ್ರಾಂಗ್ ಗಿಡ ಇಲ್ಲವೆ ಮಜ್ಜಿಗೆ ಸಪ್ಪು. *Grewia microcos (Linn.)* ಮ: ಚಕ್ಕರಿ ಕೊಟ್ಟಂ. ಕೊಂ: ಚಿವಾರಿ.

ಹುಟ್ಟು: ತೋಟ ಅಡವಿಗಳು. ಪು: ಶ್ರಾವಣ ಭಾದ್ರಪದ.

ಔಷ: ಎಲೆಗಳ ಕಷಾಯ ಅಜೀರ್ಣಕ್ಕೂ ಶೀತ ಜ್ವರಕ್ಕೂ; ಕೆಕ್ಕೋಲಿನ ಸಂಗಡ ಕುಡಿದರೆ, ರಕ್ತ ಬೇಧಿ ಗುಣ. ಸಿರ್ಕ ಕೂಡಿಸಿದರೆ ಬಾಯಿಹುಣ್ಣಿಗೆ.

ಸಾಧಾ: ಎಲೆಗಳು ಬೇಯಿಸಿ ಸಾರು ಮಾಡುತ್ತಾರೆ.

35. ಅಮರದ ಬಳ್ಳಿ ಇಲ್ಲವೆ ಅಮೃತ ಬಳ್ಳಿ, ಉಗನಿ ಬಳ್ಳಿ. *Cocculus cordifolius (D. C.)* ಮಹಾ: ಗುಳವೇಲ. ಸಂ: ಗುಳೂಚೀವಲ್ಲಿ.

ಹುಟ್ಟು: ಸಾಧಾರಣ. ಪುಷ್ಪ: ಚೈತ್ರದಿಂದ ಆಷಾಢ ವರೆಗೆ.

ಔಷ: ಸರ್ಪ ಮತ್ತು ಬೇರೆ ಜಂತುಗಳ ವಿಷಕ್ಕೂ ಜ್ವರಕ್ಕೂ ವಾತರೋಗಕ್ಕೂ ಮೂತ್ರ ರೋಗಕ್ಕೂ ಕೆಂಪಿರೋಗಕ್ಕೂ ಅರಸಿನಮುಂಡಕ್ಕೂ ಕ್ಷಯರೋಗಕ್ಕೂ ಅಶಕ್ತಿಗೂ.

ಸಾಧಾ: ಕಷಾಯ ಮಾಡಿ ಹಾಲು ಬೆರಿಸಿ ಕುಡಿಯುತ್ತಾರೆ.

36. ಅಮ್ಲ ಮರ ಇಲ್ಲವೆ ಹುಣಿಸೇ ಮರ. *Tamarindus indica* (*Linn.*) ಮ: ವಾಳಂಪುಳ್ಳಿ ಮರಂ. ತು: ಪುನ್ಕೇ ಮರ. ಸಂ: ತಿಂತ್ರಣೀ.

ಹುಟ್ಟು: ಹೆಚ್ಚಾಗಿ ತೀರಪ್ರಾಂತದಲ್ಲಿಯೂ ಬಂಗಾಳದಲ್ಲಿಯೂ. ಪುಷ್ಪ: ವೈಶಾಖ, ಜ್ಯೇಷ್ಠ.

ಔಷ: ಎಲೆಗಳು: ಕಾಮಿಲೆರೋಗಕ್ಕೂ ಪಿತ್ತಕ್ಕೂ. ಹಣ್ಣು: ಅಜೀರ್ಣಕ್ಕೂ ಕಣ್ಣುರೋಗಕ್ಕೂ ಹುಣ್ಣಿಗೂ ಸ್ವರಭಂಗಕ್ಕೂ. ಬೀಜ: ಅಜೀರ್ಣರೋಗಕ್ಕೆ.

ಸಾಧಾ: ಮರ ಬಹಳ ಘಟ್ಟಿ ಇರುವದರಿಂದ ಒಳ್ಳೇ ಕೆಲಸಕ್ಕೆ ಬರುತ್ತದೆ. ಎಲೆಗಳ ರಸ ಕೆಂಪು ಮತ್ತು ಹಸುರು ಬಣ್ಣಕ್ಕೆ ಪ್ರಯೋಗ. ಕಾಯಿ ತಿನ್ನುತ್ತಾರೆ. ಬೀಜಗಳನ್ನರಿದು ನೀರು ಬೆರಿಸಿ ಹಳೇ ಹುಣ್ಣಿಗೆ ಹಾಕುತ್ತಾರೆ. ಕಾಯಿಯ ಕಷಾಯಕ್ಕೆ ಉಪ್ಪು ನೀರು ಶೇರಿಸಿ ಅಕ್ಕಸಾಲೆಯವರು ಒಪ್ಪೆ ಹಾಕುತ್ತಾರೆ. ಬೀಜಗಳ ಪುಡಿಗೆ ಗ್ಲೂ ಇಲ್ಲವೆ ವಜ್ರಸರಿ ಕೂಡಿಸಿದರೆ, ಮರದ ಕೆಲಸಕ್ಕೆ ಒಳ್ಳೇ ಅಂಟು ಆಗುತ್ತದೆ.

37. ಅಮುಕೀರೆ ಇಲ್ಲವೆ ಕಂದಗಡ್ಡೆ, ಹಿರಿಮದ್ದಿನ ಗಡ್ಡೆ, ಸೊಗದೇ ಬೇರು. *Physalis somnifera* (*Nees.*) ಸಂ: ಅಶ್ವಗಂಧಿ.

ಹುಟ್ಟು: ಪಶ್ಚಿಮ ಪೂರ್ವ ತೀರಗಳೂ ಬಂಗಾಳವೂ.

ಔಷ: ಬೇರು ಎಲೆಗಳು: ಅಶಕ್ತಿಗೂ ಕೆಮ್ಮಿಗೂ ಕ್ಷಯವ್ಯಾಧಿಗೂ ಕಠಿಣ ರಕ್ತಬಾವಿಗೂ (ಚೋಪು) ಉಷ್ಣ ಜ್ವರಕ್ಕೂ ಹುಣ್ಣುಘಾಯಕ್ಕೂ ಗಂಟುವಾತಕ್ಕೂ ಉರಿಬಾವಿಗೂ ಮೂತ್ರ ತಡೆಗೂ ಉಪಯೋಗ.

ಸಾಧಾ: ಬೇರು ಹಾಲಿನಲ್ಲಿ ಕಾಸಿ ಕುಡಿದರೆ ಪರಿಕರ ಉಷ್ಣಹರ.

38. ಅರಗಿನ ಮರ ಇಲ್ಲವೆ ಅರಗ್ವಧ ಮರ, ಕೊಂದೇ ಮರ, ಕಕ್ಕೇ ಮರ. *Cathartocarpus fistula* (*Pers.*) ಕೊಂ: ಕಕ್ಕಾಯಿ. ತ: ಕೊನ್ನಾಯಿ ಮರಂ. ಸಂ: ಆರೇವತ.

ಹುಟ್ಟು: ಅಡವಿಘಟ್ಟಗಳು. ಪುಷ್ಪ: ವೈಶಾಖ, ಜ್ಯೇಷ್ಠ.

ಔಷ: ಬೇರು: ಜ್ವರಕ್ಕೆ. ಕೆತ್ತೆಎಲೆಗಳು: ಬೀಗಿಗೂ ಕಾಮಿಲೆಗೂ ಅನ್ನಕೋಶದ ಪೀಡೆಗೂ ಬೊಕ್ಕೆಗಳಿಗೂ ಉಪಯೋಗ.

ಸಾಧಾ: ಕಷಾಯ ಬಣ್ಣಕ್ಕೆ ಪ್ರಯೋಗಿಸುತ್ತಾರೆ.

39. ಅರಸಿನ ಗಿಡ ಇಲ್ಲವೆ ಹಳದೀ ಗಿಡ. *Curcuma longa* (*Roxb.*) ತು: ಮಂಜಲ ದೈ. ಮ: ಮಞ್ಞತ್ತೈ. ಹಿಂ: ಹಲ್ದಿ. ಸಂ: ರಜಣೀ.

ಹುಟ್ಟು: ಸ್ವಲ್ಪ ಕಡಿಮೆ ಸಮಸ್ತ ಹಿಂದುಸ್ಥಾನವು. ಪುಷ್ಪ: ಆಷಾಢದಿಂದ ಭಾದ್ರಪದ ವರೆಗೆ.

ಔಷ: ಬೇರು: ಹುಣ್ಣು ಘಾಯಗಳಿಗೂ ಹೊಟ್ಟೇ ಅಕ್ರಮಕ್ಕೂ ಭೇದಿಗೂ; ನೆಲೆಕಾಯಿಯ ರಸ ಶೇರಿಸಿದರೆ, ಕ್ರಮವಿಲ್ಲದ ಮೂತ್ರಕ್ಕೂ ಅರಸಿನಮುಂಡಕ್ಕೂ ಆಗುತ್ತದೆ.

ಸಾಧಾ: ಬೇರು ಸಂಬಾರ ಜಿನಸುಗಳಲ್ಲಿ ಶೇರುತ್ತದೆ, ಕೆಲವು ಕಡೆಯಲ್ಲಿ ಬಣ್ಣ ಸಹ ಮಾಡುತ್ತಾರೆ.

40. ಅರಸಿನ ಉಮತ ಗಿಡ. *Argemone mexicana (Linn.)* ಸಂ: ಬ್ರಹ್ಮದಂಡೆ, ಬ್ರಹ್ಮ ರಾಕ್ಷಸ.

ಹುಟ್ಟು: ಪಶ್ಚಿಮ ಪೂರ್ವ ತೀರಗಳು. ಪುಷ್ಪ: ಆಶ್ವೀಜ, ಕಾರ್ತಿಕ.

ಔಷ: ಸ್ವಭಾವಿಕ ಗುಣ: ಭೇದಿ, ಶುಲೆಹರ, ನಿದ್ರೆ ಕೊಡುವದು. ದಂಟು ಎಲೆಗಳ ರಸ ಕಣ್ಣುರೋಗಕ್ಕೂ ಮೂತ್ರದ ಅಕ್ರಮಕ್ಕೂ. ಬೀಜ: ವಾಂತಿ ಮಾಡಲಿಕ್ಕಾಗುತ್ತದೆ. ಅದರ ಎಣ್ಣೆ ತಲೆಗೆ ಹಚ್ಚಿದರೆ, ತಲೇ ನೋವು ಗುಣ. 15-20 ಬಿಂದುಗಳು ಸಕ್ಕರೆಯಲ್ಲಿ ತೆಗೆದರೆ, ಹೊಟ್ಟೆ ನೋವು ಕ್ಷಣದಲ್ಲಿ ನಿಲ್ಲುವದು.

ಸಾಧಾ: ಎಣ್ಣೆ ಮರಕ್ಕೆ ಹಚ್ಚಿದರೆ, ಅದಕ್ಕೆ ಪ್ರಕಾಶ ಕೊಡುವದು.

41. ಅರಳೀ ಮರ ಇಲ್ಲವೆ ಅರಸೇ ಮರ, ಅಶ್ವತ್ಥ ಮರ. *Ficus religiosa (Linn.)* ಹಿಂ: ಪಿಪಲ್ಕೇಝಾಡ್. ಮಹಾ: ಪಿಂಪಳೇವೃಕ್ಷ. ಸಂ: ಪಿಪ್ಪಲ.

ಹುಟ್ಟು: ಸಮಸ್ತ ಹಿಂದುಸ್ಥಾನ.

ಔಷ: ಚಿಗುರುಗಳು ಹಾಲಿನಲ್ಲಿ ಬೇಯಿಸಿ ಕುಡಿದರೆ, ಉಷ್ಣಶಮನವೂ ಭೇದಿಯೂ. ಬೀಜಗಳು: ತಂಪು.

ಸಾಧಾ: ಎಲೆಗಳು ರೇಶ್ಮಿಹುಳಕ್ಕೆ ಆಹಾರ. ಕೆತ್ತೆ ಎಲೆಗಳ ಕಷಾಯದಿಂದ ಚರ್ಮ ಹದ ಮಾಡುತ್ತಾರೆ.

42. ಅರೆಮಾದಲು ಗಿಡ ಇಲ್ಲವೆ ಅರಮಾಫಲದ ಗಿಡ. *Randia longispina.*

ಔಷ: ಬೇರು ಲಿಂಬೇ ರಸದಲ್ಲಿ ತೇದು ಬಾವು ಖಜ್ಜಿಗಳಿಗೆ ಲೇಪಿಸುವದು. ರಕ್ತ ಕೆಡುವ ರೋಗಕ್ಕೂ ಆಗುತ್ತದೆ.

ಸಾಧಾ: ಕಾಯಿಯಿಂದ ಉಪ್ಪಿನಕಾಯಿ ಮಾಡುತ್ತಾರೆ.

43. ಅರಿಜೋಳ. *Spergula arvensis (B.)*

ಇದೊಂದು ಧಾನ್ಯ.

44. ಅರ್ಕ ಇಲ್ಲವೆ ಎಕ್ಕೆ, ಎಕ್ಕೆಮಾಲೆ, ನೆಲಎಕ್ಕೆ ಗಿಡ, ಬಿಳೀ ಎಕ್ಕೆ. *Calotropis gigantea (R. Br.), Asclepias gigantea* ಮ: ಎರ್ಕ್ಕ. ತೆ: ನೆಲಜಿಲ್ಲೇಡು. ಕೊಂ: ರೂವಿ. ಸಂ: ಅರ್ಕ.

ಹುಟ್ಟು: ದಕ್ಷಿಣ ಹಿಂದುಸ್ಥಾನದ ಬೈಲು ಸ್ಥಳಗಳು.

ಔಷ: ಬೇರು ಪುಡಿ ಮಾಡಿ ಎಣ್ಣೆ ಬೆರಸಿದರೆ, ಹಳೇ ಹುಣ್ಣುಗಳಿಗೆ ಒಳ್ಳೇದು. ಎಲೆಗಳು: ಮೆಣಸು ಸಮೇತ ಸರ್ಪದಂಶಕ್ಕೆ; ಎಣ್ಣೆಯಲ್ಲಿ ಕಾಸಿ ಮೈಗೆ ಹಚ್ಚಿದರೆ, ದದ್ದು ಹೋಗುವದು; ಅವುಗಳು ಎಣ್ಣೆ ಹಚ್ಚಿ ಹೊಟ್ಟೆಗೆ ಕಟ್ಟಲು, ನೋವು ಗುಣ. ಮನುಷ್ಯನು ಬಿದ್ದರೆ, ಎಲೆಗಳಿಗೆ ಎಣ್ಣೆ ಹಚ್ಚಿ ಬೆಂಕಿಯಲ್ಲಿ ಕಾಸಿ ಶೇಕ ಕೊಡುವದು. ಚಿಗುರುಗಳ ಹಾಲು ಕಿವಿ ನೋವಿಗೆ. ಗಿಡದ ಹಾಲು ವಿಶೇಷ ಗುಣವುಳ್ಳದ್ದು. ಉಪ್ಪಿನ ಸಂಗಡ ತಿಕ್ಕಿದರೆ ಹಲ್ಲು ನೋವು ಗುಣ; ಇದಲ್ಲದೆ ಪಕ್ಷವಾತಕ್ಕೂ ಅಪಸ್ಮಾರಕ್ಕೂ ಕ್ರಿಮಿರೋಗಕ್ಕೂ ಜಂತುಗಳ ವಿಷಕ್ಕೂ ಕುಷ್ಠರೋಗಕ್ಕೂ ಬಿಳಿಗೂ ವಾತರೋಗಕ್ಕೂ ವಿಷಮಜ್ವರಕ್ಕೂ ಅಂಗದಾಹಕ್ಕೂ ಆಗುತ್ತದೆ.

ಇಂಗು 2 ಪಾಲು ಕಂಕಣಕಾರ 1 ಪಾಲು ಈ ಎಲೆಗಳ ರಸದಿಂದರದು ಸಣ್ಣ ಮೆಣಸಿನ ಹಾಗೆ ಗುಳಿಗೆಗಳು ಮಾಡಿ ಒಂದು ಗುಳಿಗೆ ಘಾಯಕ್ಕೆ ಹಚ್ಚಿದರೆ, ಸರ್ಪದಂಶ ಗುಣ. ಇದೇ ಒಂದು ಗುಳಿಗೆ ನೀರಿನಲ್ಲಿ ಸನ್ನಿಗೂ ಕೊಡ ಬಹುದು.

ಸಾಧಾ: ಗಿಡಕ್ಕೂ ಅದರ ಕಾಯಿಗಳಿಗೂ ಒಳ್ಳೇ ನಾರು ಉಂಟು. ಹಾಲು ಸಹ ಕೆಲಸಕ್ಕೆ ಪ್ರಯೋಗಿಸುತ್ತಾರೆ.

45. ಅಶ್ವಕರ್ಣಕಮರ ಇಲ್ಲವೆ ಹೊನ್ನೆ ಮರ, ಕುದುರೇಕಿವಿಗನು, ಮತ್ತೀ ಮರ. *Terminalia tomentosa* (*W. & A.*)

ಹುಟ್ಟು: ಪಶ್ಚಿಮ ತೀರದ ಕಾಡುಗಳು, ಅಯೋಧ್ಯ. ಪುಷ್ಪ: ಚೈತ್ರದಿಂದ ಜೇಷ್ಠ ವರೆಗೆ.

ಸಾಧಾ: ಮರ ಕೆಲಸಕ್ಕೆ ಒಳ್ಳೇದು, ಮುಖ್ಯವಾಗಿ ದೋಣಿಗಳಿಗೆ. ಕೆತ್ತೆಗಳು ಸುಟ್ಟು ಒಂದು ತರದ ಸುಣ್ಣ ಮಾಡುತ್ತಾರೆ. ಕಪ್ಪು ಬಣ್ಣಕ್ಕೆ ಸಹಾ ಉಪಯೋಗ.

46. ಅಲಸಂದಿ ಬಳ್ಳಿ. *Dolichos catiany.*

ಸಾಧಾ: ಇದು ಪಲ್ಯಕ್ಕೆ ಆಗುತ್ತದೆ.

47. ಅಲಾಬು ಬಳ್ಳಿ ಇಲ್ಲವೆ ಕಹಿ ಸೊರೆ, ಸೊರೆ ಬಳ್ಳಿ, ಎಲಚೀ ಬಳ್ಳಿ. *Lagenaria vulgaris* (*Ser.*) ಸಂ: ಕರ್ಕಂದು.

ಹುಟ್ಟು: ತೋಟಗಳು. ಪುಷ್ಪ: ಆಷಾಢದಿಂದ ಭಾದ್ರಪದ ವರೆಗೆ.

ಔಷ: ಎಲೆಗಳ ಕಷಾಯ, ಸಕ್ಕರೆ ಬೆರಸಿ, ಅರಸಿನಮುಂಡರೋಗಕ್ಕೆ. ಕಾಯಿಯ ರಸ ಎಣ್ಣೆಗೆ ಶೇರಿಸಿ ಕಾಸಿ ಹಚ್ಚಿದರೆ, ವಾತಹರ. ಬೀಜ ಎಣ್ಣೆಯಲ್ಲಿ ಅರದು ಕಿವಿಗೆ ಹಿಂಡಿದರೆ, ಓಡು ಹುಳ ಸಾಯುವದು.

ಸಾಧಾ: ಕಾಯಿಯಿಂದ ಬುರುಡೆಗಳನ್ನು ಮಾಡುತ್ತಾರೆ.

48. ಅಲಿಗಿನ ಗಿಡ ಇಲ್ಲವೆ ಹುಚ್ಚುಕಬ್ಬು. *Æschyinomene aspera* (*Linn.*) ಮ: ಅಟುಕ್ಕಿದಾಸ. ಸಂ: ಪಿಶಾಚ.

ಹುಟ್ಟು: ನೀರು ನಿಲ್ಲುವ ಸ್ಥಳಗಳು. ಪುಷ್ಪ: ಜೇಷ್ಠದಿಂದ ಶ್ರಾವಣ ವರೆಗೆ.

ಸಾಧಾ: ಗಿಡದ ಬೆಂಡಿನಿಂದ ಒಳ್ಳೇ ಹೀಲಿಯಾಗುತ್ತದೆ. ಇಲಿಗಳ ಬಾಧೆಗೆ ಹೀಲಿ ಚೂರು ಮಾಡಿ ಎಣ್ಣೆ ತಾಗಿಸಿಟ್ಟರೆ, ಒಳ್ಳೇದು.

49. ಅಲಮರ್ ಮರ. *Memecylon* { *tinctorium* (*Koen.*)
ramiflorum.
ovatum.

ಹುಟ್ಟು: ಪಶ್ಚಿಮ ಪೂರ್ವ ತೀರಗಳು. ಪುಷ್ಪ: ಚೈತ್ರ, ವೈಶಾಖ.

ಸಾಧಾ: ಕಾಯಿ ತಿನ್ನುತ್ತಾರೆ. ಹೂ ರಮ್ಯ. ಎಲೆಗಳು ಬಣ್ಣಕ್ಕೆ ಆಗುತ್ತವೆ.

50. ಅವುಡಲ ಗಿಡ ಇಲ್ಲವೆ ಔಡ್ಲು = ಔಂಡ್ಲ = ಔಡಲ, ಹರಳ = ಗಿಡ. *Ricinus communis* (*Linn.*) ತು: ಅಲಂಬುಡ. ಮ: ಆಮಣಕ. ಹಿಂ: ಏರಂಡಿಕೇ ಝಾಡ್. ಸಂ: ಏರಂಡ.

ಹುಟ್ಟು: ತೋಟಗಳು.

ಔಷ: ಬೇರು: ಕಷಾಯ ಮಾಡಿ ಸ್ವಲ್ಪ ಬೆಣ್ಣೆ ಶೇರಿಸಿ ಕುಡಿದರೆ, ಮಲಮೂತ್ರ ಶೋಧನೆಯಾಗಿ ಶರೀರ ಲಘುವಾಗುವದು; ಅದರ ಪುಡಿ ಅರದಲೇ ಬೇನೆಗೂ ವಾತರೋಗಕ್ಕೂ. ಎಲೆಗಳು: ಸೂತಿ ಕ್ರಮ ಪಡಿಸುವದಕ್ಕೂ ಮೊಲೇ ಹಾಲು ಬರುವದಕ್ಕೂ. ಬೀಜಗಳ ಎಣ್ಣೆ: ವಿರೋಚನೆಗೂ ಮೈನೋವಿಗೂ ವಾತಕ್ಕೂ ಚರ್ಮರೋಗಕ್ಕೂ ಸೊಂಟನೋವಿಗೂ ಕಂಪವಾತಕ್ಕೂ.

ಸಾಧಾ: ಎಣ್ಣೆ ದೀಪಕ್ಕೆ ಹಾಕುತ್ತಾರೆ. ಕೆತ್ತೆ ಹೊಗೆಸೊಪ್ಪು ಶುಂಠಿ ಇವುಗಳನ್ನರಿದು ಉಂಟೆ ಹಣ್ಣುಷ್ಟು ಕುದುರೆಗೆ ತಿನ್ನಿಸಲು ಹೊಟ್ಟೆನೋವು ಗುಣ.

51. ಅವರೆ ಬಳ್ಳಿ ಇಲ್ಲವೆ ಹೊಲದವರೆ, ಚಪ್ಪರದವರೆ. *Lablab vulgaris (Savi.)*

ಹುಟ್ಟು: ತೋಟಗಳು. ಪುಷ್ಪ: ಕಾರ್ತಿಕದಿಂದ ಮಾಘ ವರೆಗೆ.

ಸಾಧಾ: ಅದರ ಎಳೆ ಕಾಯಿ ಪಲ್ಯ ಮಾಡುತ್ತಾರೆ; ಬೆಳದ ಮೇಲೆ ಮನುಷ್ಯರಿಗೂ ದನಕ್ಕೂ ಉಪಯೋಗವಾದ ಒಳ್ಳೇ ಧಾನ್ಯ.

52. ಅಶೋಕ ಮರ. *Uvaria longifolia.*

ಸಾಧಾ: ಶೃಂಗಾರದ ಮರ.

53. ಅಶ್ವಕರ್ಣಮರ ಇಲ್ಲವೆ ರಾಳದ ಮರ. *Shorea robusta (Roxb.)* ಮು: ಚಂಚಲ್ಯಂ.

ಹುಟ್ಟು: ಘಟ್ಟ ಅಡವಿಗಳು, ಹಿಮಾಲಯ. ಪುಷ್ಪ: ಫಾಲ್ಗುಣ, ಚೈತ್ರ.

ಸಾಧಾ: ಕೆತ್ತೆಗಳಿಂದ ಒಳ್ಳೇ ಸುಣ್ಣ ಮಾಡುತ್ತಾರೆ. ಮರ ಕೆಲಸಕ್ಕೆ ಬಹು ಒಳ್ಳೇದು. ಅಂಟು ಸಹ ಪ್ರಯೋಜನವಾದದ್ದು.

54. ಅಳಂಗಿ ಮರ. *Colosanthes indica.*

ಜ್ಞಾನ ಮಾರ್ಗಗಳು.

ದೇವರು ತನ್ನನ್ನು ಲೋಕದ ಸೃಷ್ಟಿಯಿಂದ ಪ್ರಕಟ ಮಾಡಿದ್ದಾನೆ. ಸೃಷ್ಟಿಯನ್ನು ನೋಡುವಾಗ, ಇದರ ಉತ್ಪತ್ತಿ ಏನು? ಯಾವ ಬಲದಿಂದಲೂ, ಯಾವ ಜ್ಞಾನದಿಂದಲೂ, ಯಾವ ಉದ್ದೇಶಕ್ಕೂ ಇದೆಲ್ಲ ಉಂಟಾಯಿತೋ, ಆ ಉದ್ದೇಶವನ್ನು ನೇಮಿಸಿದವನ್ಯಾರೋ ಎಂಬ ಪ್ರಶ್ನೆಗಳು ಮಾನುಷಬುದ್ಧಿಯಲ್ಲಿ ಹುಟ್ಟ ಬೇಕಲ್ಲ? ಇದಲ್ಲದೆ ನಮ್ಮ ಮನಸ್ಸಿನಲ್ಲಿ ಒಂದು ನ್ಯಾಯಪ್ರಮಾಣವು ಅದೆ; ಇದರ ಮೇರೆಗೆ ಮಾಡಲಿಕ್ಕೆ ನಮ್ಮ ಹಂಗು ಎಂದೂ ಇದಕ್ಕೆ ವಿರೋಧವಾಗಿದ್ದರೆ, ನಮಗೆ ದೋಷವೆಂದೂ ಅದರ ವಿಧೇಯತ್ವದಿಂದ ನಮಗೆ ಆಶೀರ್ವಾದವೂ ಅವಿಧೇಯತ್ವದಿಂದ ಶಾಪವೂ ಬರುತ್ತದೆಂದೂ ತಿಳುಕೊಳ್ಳುತ್ತೇವೆ. ಈ ನ್ಯಾಯಪ್ರಮಾಣವನ್ನು ನಮ್ಮ ಅಂತರ್ಭಾವದಲ್ಲಿ ಇಟ್ಟು, ನಾವು ಅದಕ್ಕೆ ವಿಧೇಯರಾಗಿರುವ ಹಾಗೆ ನೋಡುವವನು ಯಾರು? ಈ ಪ್ರಕಾರ ನಮ್ಮ ಮನಸ್ಸಿನಲ್ಲಿ ಹುಟ್ಟುವ ಆಲೋಚನೆಗಳಿಂದ ಕಾಣಬರುವದೇನಂದರೆ: ಮನಸ್ಸು ಸತ್ಯವನ್ನೂ ದೇವರನ್ನೂ ಹುಡುಕಿ, ಜ್ಞಾನವನ್ನು ತನ್ನಿಂದಾಗು

ವಷ್ಟು ವ್ಯವಸಾಯ ಮಾಡಲೆಳಸುತ್ತದೆ. ಇದು ಸ್ವಭಾವಿಕ ಭಯಭಕ್ತಿ, ಇದು ವಿಜ್ಞಾನಿಗಳ ಮಾರ್ಗವೇ.

ಕ್ರೈಸ್ತರ ಜ್ಞಾನವು ಬೇರೆ, ಅದು ಮತ್ತೊಂದು ಬೇರಿನಿಂದ ಹುಟ್ಟುತ್ತದೆ. ಕ್ರೈಸ್ತರ ವಿಶ್ವಾಸಪ್ರಮಾಣವು ದೇವರ ವಾಕ್ಯದಲ್ಲಿ ಬರದಿಟ್ಟ ಆತ್ಮೀಯ ಪ್ರಕಟಣೆಯಿಂದ ಉಂಟಾಗಿದೆ. ದೇವರು ಮನುಷ್ಯರಿಗೆ ತನ್ನನ್ನು ತೋರಿಸಿ, ಅವರ ಸಂಗಡ ಮಾತಾಡಿ, ಅವರಿಗೆ ತನ್ನ ಅದೃಶ್ಯವಾದ ಆತ್ಮದ ಬೆಳಕನ್ನು ಕೊಟ್ಟು ಈ ಪ್ರಕಾರ ಸಹ ತನ್ನನ್ನು ಅವರಿಗೆ ಪ್ರಕಟ ಮಾಡಿದ್ದಾನೆ. ಕಡೆಯಲ್ಲಿ ಆತನು ಅವತಾರವಾಗಿ, ಮನುಷ್ಯನಾಗಿ ಮನುಷ್ಯರಿಗೆ ಮಾತಾಡಿದ್ದಾನೆ. ಸೃಷ್ಟಿಕರ್ತನೂ ನ್ಯಾಯದ ಕರ್ತನೂ ಇದ್ದು, ಲೋಕವನ್ನು ಆಳಿ ನ್ಯಾಯತೀರಿಸುತ್ತಾನೆಂಬದೂ ಮನಸ್ಸಾಕ್ಷಿಯ ಶಬ್ದವು ಆತನದೆಂಬದೂ, ಸೃಷ್ಟಿಯಲ್ಲಿಯೂ ಮನಸ್ಸಾಕ್ಷಿಯಲ್ಲಿಯೂ ನಮಗೆ ಉಂಟಾದ ದೇವರ ಪ್ರಕಟಣೆಯಿಂದ ತೋರ ಬರುವದುಂಟು; ಆದರೆ ಇದನ್ನು ಮಾತ್ರ ಅರಿಯುವವನು ಈ ಸೃಷ್ಟಿ ಕರ್ತನ ಸ್ವಭಾವ ಆಲೋಚನೆ ಮಾರ್ಗಗಳನ್ನು ಕುರಿತು ಏನೊಂದು ತಿಳಿಯಲಾರನು. ಮನುಷ್ಯನ ಆತ್ಮವು ಮಾತ್ರ ಮನುಷ್ಯನಲ್ಲಿ ಇರುವಂಥಾದ್ದು ಹ್ಯಾಗೆ ತಿಳಿಯುತ್ತದೊ ಹಾಗೆಯೇ ದೇವರ ಆತ್ಮವು ಮಾತ್ರ ದೇವರ ಅಶೋಧನಿಯವಾದ ಭಾವವನ್ನು ತಿಳು ಕೊಳ್ಳ ಬಹುದು. ನಮಗೂ ಈ ದೇವರ ಆತ್ಮದ ಮುಖಾಂತರ ಮಾತ್ರ ದೇವರ ತಿಳುವಿಕೆ ಆಗುವದುಂಟು.

ಇದಲ್ಲದೆ ಮನುಷ್ಯರ ಹೃದಯಗಳು ಪಾಪದಿಂದ ಕತ್ತಲೆಯಾಗಿ ತಿಳುವಿಕೆಯ ಸಾಮರ್ಥ್ಯವು ಸಹಾ ಕಡಿಮೆಯಾಗಿದ್ದರಿಂದ ಇನ್ನು ಹೆಚ್ಚಾಗಿ ನಿಶ್ಚಯವಾಗುವದೇನಂದರೆ: ದೇವರನ್ನು ತಿಳಿಯುವದಕ್ಕೂ ಆತನ ಅನ್ಯೋನ್ಯದಲ್ಲಿ ಶೇರುವದಕ್ಕೂ ನಮಗೆ ಸೃಷ್ಟಿಯಲ್ಲಿ ಆದ ದೇವರ ಪ್ರಕಟಣೆಯು ಸಾಲದೆ ಸಾಲುವದಿಲ್ಲ; ಅದಕ್ಕೆ ತನ್ನ ವಾಕ್ಯದಲ್ಲಿ ನಮಗೆ ಕೊಟ್ಟ ಪ್ರಕಟಣೆಯೂ ಅತಿ ಅವಶ್ಯವಾಗಿದೆ.

ರಾಗ ಚೌಪದ, ತಾಳ ಝಂಪೆ.

ಸದು ಹೃದಯು ಸದು ಹೃದಯು ಸದು ಹೃದಯು ವರದಾ
ಸದು ಹೃದಯು ಬಾಹಿರನೆ ನಿತ್ಯ ಸ್ಥಿತಿ ತೊರದಾ || ಪಲ್ಲ ||

ಶುದ್ಧ ಹೃದಯುವ ಪಟ್ಟವನೆ ಭಾಗ್ಯವಂತಾ
ಬದ್ಧ ದೇವರ ಕಾಂಬನವನೆ ನಿಶ್ಚಿಂತಾ
ಬಿದ್ದೊಡಲಿನಾಶೆ ನಿಡು ನಿದ್ದೆಗದು ಮೂಲಾ
ಶ್ರದ್ಧೆಯಿಂದೆಚ್ಚರು ಪ್ರಸಿದ್ಧಿ ಕಿದೆ ಕಾಲಾ || ೧ ||

ವ್ಯರ್ಥ ಸಾಶಿರ ದೆವ್ವಗಳ ನಂಬ ಬೇಡಾ
ಅರ್ಥಾತುರದೊಳನರ್ಥವ ಘಳಿಸ ಬೇಡಾ

ಸ್ವಾರ್ಥವೆ ಪಾಪವು ಪಿಶಾಚನು ಪ್ರತಾಪಿ
ಧೂರ್ತತನ ಕೆಳಸದವನವನೆ ನಿರ್ಲೇಪಿ || ೧ ||

ದೇವನೇಕೋ ಮಹೋನ್ನತ ನಿತ್ಯನಾತಾ
ಭಾವಿಸು ಸ್ವತಂತ್ರಿ ಸರ್ವತ್ರಾಣಿಯಾತಾ
ಕೇವಲಾನಂದ ತೇಜೋಪೂರ್ಣ ರಾಶಿ
ಪಾವನಾಮಳ ಭಜಕ ಪಾಪಾಘನಾಶಿ || ೩ ||

ಸಬ್ಬಾತು ದಿನ ನಿತ್ಯ ಪರಿಶುದ್ಧನಾಗು
ಮಬ್ಬಿನಂತರ್ಯ ಜಡ ಭಾವಗಳ ನೀಗು
ಊರ್ಬಿಯುಗಲದೊಳುಳ್ಳ ಸಕಲ ಜೀವರನು
ಸರ್ಬ ಕರ್ತುವೆ ನ್ಯಾಯ ತೀರ್ಚಿ ಪಾಲಿಪನು || ೪ ||

ಮಾನಸಾಂತರವೆ ಉದ್ಭಾನು ದೈದೀಪ್ಯಾ
ಮಾನವಂತರು ಬಲ್ಲರದರಂದ ಗೋಪ್ಯಾ
ಧ್ಯಾನವೇ ನಿತ್ಯಜೀವದ ಕಡೆಗೆ ತಿರುಗು
ಹೀನ ಭಾವದ ಚಿಂತೆಗಳನೆಲ್ಲ ಜರುಗು || ೫ ||

ಪರರೊಡವೆ ಪರರ ವಧುಗಳ ಮುಟ್ಟ ಬೇಡಾ
ಮರತಾದಡೆಂದೆಂದು ಸುಳ್ಳಾಡ ಬೇಡಾ
ಸರಸ ಕೆಳಸದಿರು ವ್ಯಭಿಚಾರ ದೋಷದೊಳು
ನರಕದಗ್ನಿಯೊಳುರಿವೆ ನಂಬುಮಂತ್ಯದೊಳು || ೬ ||

ದೇವರಾಜ್ಞೆಗಳೋದು ಬಿಡದೆ ಯನವರತಾ
ಯೇಹೋವನಮೊ ಎಂದು ತ್ಯಜಿಸು ಘನ ದುರಿತಾ
ಪಾವನಾತ್ಮಕರ ಸಂಗದೊಳಿರಿಸು ಭಾವಾ
ಜೀವೇಶ ದೇವದತ್ತನೆ ಬಿಡದೆ ಕಾವಾ || ೭ ||

ಟಪ್ಪಾಲಿನ ವಿಷಯವಾದ ಮುಖ್ಯ ಕಟ್ಟಳೆಗಳು.

೧. ಇಂಡಿಯದ ಸಾಧಾರಣವಾದ ಕಾಗದಟಪ್ಪಾಲು.

ಈ ಟಪ್ಪಾಲಿನ ಮುಖಾಂತ್ರವಾಗಿ ಚಾರದಲ್ಲಿ ೧೨ ತೊಲೆಗಳಿಗೆ ಮಿಾರದ ಕಾಗದ ಮುಂತಾದವುಗಳು ಇದರ ಕೆಳಗಿನ ಪಟ್ಟಿಯಲ್ಲಿ ಕಾಣಿಸಿರುವ ನಿರಕುಗಳ ಪ್ರಕಾರ ಇಂಡಿಯಾ ಗವರ್ನಮೆಂಟ್ ಎಂಬ ಸರಕಾರದ ಕೆಳಗಿರುವ ದೇಶಗಳಲ್ಲಿಯ ಯಾವದಾದರೂ ಒಂದು ಟಪ್ಪಾಲುಕಟ್ಟೆಯಿಂದ ಬೇರೊಂದಕ್ಕೆ ಕಳುಹಿಸಲ್ಪಡ ಬಹುದು.

ಚಾರದಲ್ಲಿ	೧/೪ ತೊಲೆ	೧/೨ ತೊಲೆ	೧ ತೊಲೆ	೧ ೧/೨ ತೊಲೆ	೨ ತೊಲೆ
			ಮಿಾರದ್ದಕ್ಕೆ		
ಟಪ್ಪಾಲ ದಸ್ತೂರಿ	೬ ಪೈ	೧ ಆಣೆ	೨ ಆಣೆ	೩ ಆಣೆ	೪ ಆಣೆ

ಚಾರದಲ್ಲಿ ಎರಡು ತೊಲೆಗೆ ಮಿಾರಿ ಇರುವ ಪ್ರತಿ ಅರ್ಧ ತೊಲೆಗೆ ಅಥವಾ ಅರ್ಧ ತೊಲೆಯ ಅಂಶಗಳಿಗೆ ಒಂದು ಆಣೆ ಹೆಚ್ಚಾಗಿ ವಸೂಲು ಮಾಡಲಾದೀತು.

ಕಾಗದವನ್ನು ಕಳುಹಿಸುವವನು ಅದನ್ನು, ದಸ್ತೂರಿ ಮುಂದಾಗಿ ಕೊಟ್ಟು ಆಗಲಿ, (bearing) ಬೇರಿಂಗ್ ಆಗಿ ಅಂದರೆ, ಕಾಗದ ಯಾರಿಗೆ ಕಳುಹಿಸ ಬೇಕೋ ಅವನೇ ದಸ್ತೂರಿ ಕೊಡ ಬೇಕೆಂತ ಆಗಲಿ, ಟಪ್ಪಾಲಿನ ಮೇಲೆ ಹಾಕ ಬಹುದು.

ಕಾಗದವನ್ನು ಟಪ್ಪಾಲಿನ ಮೇಲೆ ಹಾಕುವಾಗ ಅದರ ಬಲಗಡೆಯಲ್ಲಿ (stamp) ಸ್ಟೆಂಪ್ ಎಂಬ ಟಪ್ಪಾಲುಚೀಟನ್ನು ಹಚ್ಚಿದರೆ ದಸ್ತೂರಿ ಮುಂದಾಗಿ ಕೊಟ್ಟ ಹಾಗೆ ಆಯಿತು.

ಕಾಗದಗಳು ಬೇರಿಂಗ್ ಆಗಿ ಕಳುಹಿಸಲ್ಪಟ್ಟರೆ ಮೇಲಿನ ಪಟ್ಟಿಯಲ್ಲಿರುವ ನಿರಕಿನ ಇಮ್ಮಡಿ ದಸ್ತೂರಿ ವಸೂಲು ಮಾಡಲಾದೀತು.

ಮತ್ತು ಕಾಗದಕ್ಕೆ ಅದರ ಚಾರಕ್ಕೆ ನೇಮಿಸಿದ ಸರಿಯಾದ ಸ್ಟೆಂಪನ್ನು ಹಚ್ಚದೆ ಅದಕ್ಕಿಂತ ಕಡಿಮೆಯದನ್ನು ಹಚ್ಚಿದರೆ, ಆ ಸರಿಯಾದ ಸ್ಟೆಂಪಿಗೂ ಇದಕ್ಕೂ ಇರುವ ಹೆಚ್ಚು ಕಡಿಮೆಯ ಎರಡು ಪಾಲು ಹೆಚ್ಚು ವಸೂಲು ಮಾಡಲಾದೀತು.

ಒಬ್ಬನು ಒಂದು ಕಾಗದವನ್ನು ಟಪ್ಪಾಲಿನ ಮೇಲೆ ಹಾಕಿದ ತರುವಾಯ, ಗವರ್ನಮೆಂಟಿನ ಪರ ಅಪ್ಪಣೆ ಪಡಕೊಂಡ ವಿನಹಾ, ತನಗೆ ಅದನ್ನು ವಾಪಸು ಕೊಡಿಸ ಬೇಕೆಂತ ಹೇಳ ಕೂಡದು.

ಜಂಗಿಟಪ್ಪಾಲು ಇರುವಲ್ಲಿ ಚಾರದಲ್ಲಿ ೧೨ ತೊಲೆಗಳಿಗೆ ಮಿಾರಿ ಇರುವ ಯಾವ ಕಾಗದವಾದರೂ ಕಾಗದಟಪ್ಪಾಲಿನಿಂದ ಕಳುಹಿಸಲ್ಪಡಲಿಕ್ಕಿಲ್ಲ.

ಆದರೆ ಜಂಗಿಟಪ್ಪಾಲು ಇಲ್ಲದ್ದಲ್ಲಿ ೧೨ ತೊಲೆಗಳಿಗೆ ಮಿಾರಿ ೪೦ ತೊಲೆಗಳಿಗೆ ಮಿಾರದೆ ಇರುವ ಕಾಗದಗಳು ಅಂಗೀಕರಿಸಲ್ಪಟ್ಟು, ಕಾಗದಟಪ್ಪಾಲಿನಿಂದ ಕಳುಹಿಸಲ್ಪಡುವವು.

ಕಾಗದಗಳು ಯಾವಾಗಲೂ ಅಂದರೆ ಹಗಲಿನಲ್ಲಿಯೂ ಇರುಳಿನಲ್ಲಿಯೂ ಟಪ್ಪಾಲಿನ ಮೇಲೆ ಹಾಕ ಬಹುದು. ಟಪ್ಪಾಲು ಕೈದು ಮಾಡುವ ಒಂದು ತಾಸಿನ ಮುಂಚೆ ಬಂದ ಕಾಗದಗಳೆಲ್ಲವೂ ಕಳುಹಿಸಲ್ಪಡುವವು. ಆದರೆ ಅದರ ತರುವಾಯ ಬಂದವುಗಳು ಎರಡನೇ ಟಪ್ಪಾಲಿನಿಂದ ಕಳುಹಿಸಲ್ಪಡುವವು.

ಟಪ್ಪಾಲದಸ್ತೂರಿಯ ಖರ್ಚನ್ನು ತಪ್ಪಿಸಿ ಕೊಳ್ಳುವ ಹಾಗೆ ಬೇರೆ ಬೇರೆಯವರಿಗೆ ಪ್ರತ್ಯ ಪ್ರತ್ಯೇಕವಾಗಿ ಬರೆದ ಕಾಗದಗಳನ್ನು ಒಂದೇ ಲಿಫಾಪೆಯಲ್ಲಿ ಹಾಕಿ ಕಳುಹಿಸುವಂಥವರು ಪೋಸ್ತ್‌ಹಾಪಿಸ್ ಆಕ್ಟಿನ ಪ್ರಕಾರ ಶಿಕ್ಷೆಗೆ ಪಾತ್ರರಾಗುತ್ತಾರೆ.

೨. ಇಂಡಿಯನ್ ಬುಕ್‌ಪೋಸ್ತ್.

ಇದರಿಂದ ಭಾರದಲ್ಲಿ ೨೦೦ ತೊಲೆಗಳಿಗೆ ಮೀರದ ಪುಸ್ತಕಗಳೂ ಪಾಂಫ್ಲೇಟ್‌ಗಳೂ ವರ್ತಮಾನಪತ್ರಿಕೆಗಳ ಕಟ್ಟುಗಳೂ ವರ್ತಮಾನಪತ್ರಿಕೆಗಳಲ್ಲದ ಛಾಪಿಸಿದ ಕಾಗದಗಳೂ, ಕೆಳಗಿನ ಪಟ್ಟಿಯಲ್ಲಿ ನಮೂದ ಇರುವ ನಿರಕುಗಳಿಗೆ ಸರಿಯಾಗಿ ಸ್ಟೆಂಪ್ಸ್ ಎಂಬ ಚೀಟುಗಳನ್ನು ಮುಂದಾಗಿಯೇ ಹಚ್ಚಿದರೆ, ಜಂಗೀ ಮೈಲ್ ಎಂಬ ಟಪ್ಪಾಲಿನ ಮೇಲೆ ಕಳುಹಿಸಲ್ಪಡ ಬಹುದು.

ಭಾರದಲ್ಲಿ

	೧೦ ತೊಲೆಗಳಿಗೂ	೨೦ ತೊಲೆಗಳಿಗೂ ಮೀರದ್ದಕ್ಕೆ
ಟಪ್ಪಾಲದಸ್ತೂರಿ	೧ ಆಣೆ	೨ ಆಣೆ

ಭಾರದಲ್ಲಿ ೨೦ ತೊಲೆಗಳಿಗೆ ಮೀರಿ ಇರುವ ಪ್ರತಿ ೧೦ ತೊಲೆಗಳಿಗೂ ಆದರ ಅಂಶಗಳಾದ ೫, ೮ ಮುಂತಾದ ತೊಲೆಗಳಿಗೂ ಒಂದೊಂದು ಆಣೆ ಹೆಚ್ಚು ಕೊಡ ಬೇಕು.

ಈ ಟಪ್ಪಾಲಿನಿಂದ ಕಳುಹಿಸಲ್ಪಡುವ ಕಾಗದ ಮುಂತಾದವುಗಳು ಲಿಫಾಪೆಯಲ್ಲಿ ಹಾಕಲ್ಪಡದೆ ಅಥವಾ ಚಿಕ್ಕ ಲಿಫಾಪೆಯಲ್ಲಿ ಹಾಕಲ್ಪಟ್ಟು, ಆ ಲಿಫಾಪೆಯ ಎರಡು ಕಡೆಗಳನ್ನು ಖುಲ್ಲಾ ಬಿಟ್ಟು ಕಳುಹಿಸಲ್ಪಡುವವು.

ಒಂದೇ ಲಿಫಾಪೆಯಲ್ಲಿ ಬೇಕಾದಷ್ಟು ಪುಸ್ತಕಗಳು ಅಥವಾ ವಿದ್ಯೆಗೆ ಸಂಬಂಧವಾದ ಪ್ರಕಟಣೆಗಳು ಕಳುಹಿಸಲ್ಪಡ ಬಹುದು, ಆದರೆ ಯಾವ (ಪತ್ರಿಕೆ) ಕಾಗದವಾದರೂ ಗರ್ಭಿಸ ಬಾರದು.

ತನಿಖಿ ಮಾಡದ ಹಾಗೆ ಮುಚ್ಚಲ್ಪಟ್ಟ ಅಥವಾ ಖುಲ್ಲಾ ಇರುವ ಕಾಗದ ಮುಂತಾದ್ದೇನಾದರೂ ಈ ಟಪ್ಪಾಲಿನಿಂದ ಕಳುಹಿಸಲ್ಪಡಲಿಕ್ಕಿಲ್ಲ. ಮತ್ತು ಕಾಗದದ ಭಾವವುಳ್ಳ ಯಾವ ಸಂಗತಿಯನ್ನಾದರೂ ಪುಸ್ತಕ ಮುಂತಾದ್ದು ಹಾಕಲ್ಪಟ್ಟ ಲಿಫಾಪೆಯ ಮೇಲೆ ಬರಿಯಲೂ ಛಾಪಿಸಲೂ ಕೂಡದು.

ಪುಸ್ತಕಗಳ ಕಟ್ಟಿನ ಮೇಲ್ವಿಳಾಸದ ಪಟ್ಟಿ ಟಪ್ಪಾಲಕಟ್ಟೆಯಲ್ಲಿ ಇಡದೆ ಇರುವ ಕಾರಣ, ಅಂಥಾ ಪ್ರತಿ ಪುಸ್ತಕದ ಕಟ್ಟನ್ನು ೪ ಆಣೆ ಕೊಟ್ಟು ರಿಜಿಸ್ತ್ರಿ ಮಾಡಿಸಿ ಕೊಳ್ಳ ಬಹುದು.

ಬುಕ್‌ಪೋಸ್ತ್ ಎಂಬ ಈ ತರದ ಟಪ್ಪಾಲಿನ ದ್ವಾರಾ ಕಳುಹಿಸ ಬಹುದಾದ ಜಿನಸುಗಳು

ಯಾವವಂದರೆ: ಛಾಪಿಸಿದ ಅಥವಾ ಬೇರೆ ತರದ ಪುಸ್ತಕಗಳು; ಛಾಪಿಸಿದ ಅಥವಾ ಕೈಬರಹದ ಪಂಚಾಂಗಗಳೂ ನಕ್ಷೆಗಳೂ; ಛಾಪಿಸಿದ ಅಥವಾ ಬರೆದ ಅಥವಾ ಖಾಲಿಯಾದ ಯಾವ ತರದ ಕಾಗದಗಳೂ; ಪೆನಶಿಲು, ಲೇಖಣಿ ಇತ್ಯಾದಿ ಈ ತರದ ವಸ್ತುಗಳು ಮಾತ್ರವಲ್ಲ, ಛಾಪಿಸದೆ ಇರುವಂಥಾ ಲಿಖಿತಗಳಾಗಲೀ ಲಿಖಿತಗಳ ಸ್ವಭಾವವುಳ್ಳ ಪತ್ರಗಳಾಗಲೀ ಅಥವಾ ಅದರಿ ಹೋಗುವ ಯಾ ಅಪಾಯಕರವಾದ ವಸ್ತುಗಳಾಗಲೀ ಹೊರ್ತು, ಇತರ ಯಾವ ವಸ್ತುವನ್ನಾಗಲೀ ಇಂಡಿಯಾ ದೇಶದ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಬುಕ್ ಪೋಸ್ಟ್ ಆಗಿ ಕಳುಹಿಸುವದಕ್ಕೆ ಆತಂಕ ವಿರುವದಿಲ್ಲ.

ಟಪ್ಪಾಲಿಗೆ ಹಾಕುವ ಪುಸ್ತಕ ಮುಂತಾದ್ದನ್ನು ಟಪ್ಪಾಲಕಟ್ಟೆಯಲ್ಲಿರುವ ಕ್ಲರ್ಕನ ಕೈಯಲ್ಲಿ ಕೊಡ ಬಹುದು, ಅಥವಾ ಕಾಗದಪೆಟ್ಟಿಗೆಯಲ್ಲಿ ಹಾಕ ಬಹುದು.

೩. ಭಂಗೀ ಟಪ್ಪಾಲು.

ಈ ಟಪ್ಪಾಲಿನಲ್ಲಿ ಕಳುಹಿಸುವ ಸಮಸ್ತ ಒಡವೆಗಳಿಗೆ ಭಾರ ಮತ್ತು ಮೈಲುಗಳ ಲೆಖ್ಖದ ಪ್ರಕಾರ ದಸ್ತೂರಿ ಕಟ್ಟುತ್ತದೆ. ಹ್ಯಾಗಂದರೆ:

ದೂರ.	ತೂಕದಲ್ಲಿ ಕೆಳಗಿನ ಭಾರ ಮೀರದಿದ್ದರೆ							
	೨೦ ತೊಲೆ.		೫೦ ತೊಲೆ.		೧೦೦ ತೊಲೆ.		ಇದಕ್ಕೆ ಮೀರಿರುವ ಪ್ರತಿ ೧೦೦ ತೊಲೆ.	
ಮೈಲುಗಳು	ರೂ.	ಆ.	ರೂ.	ಆ.	ರೂ.	ಆ.	ರೂ.	ಆ.
೩೦೦ ಮೀರದಿದ್ದರೆ	೦	೪	೦	೮	೦	೧೨	೦	೧೨
೬೦೦ „	೦	೮	೧	೦	೧	೮	೧	೮
೯೦೦ „	೦	೧೨	೧	೮	೨	೪	೨	೪
೧೨೦೦ „	೧	೦	೨	೦	೩	೦	೩	೦
೧೨೦೦ ಮೀರಿದರೆ	೧	೪	೨	೮	೩	೧೨	೩	೧೨

ಪತ್ರಿಕೆಗಳ ಟಪ್ಪಾಲೂ ಭಂಗೀ ಟಪ್ಪಾಲೂ ಬೇರೆ ಬೇರೆ ನಡಿಯುವ ಮಾರ್ಗಗಳಲ್ಲಿ ಭಂಗೀ ಕಟ್ಟಿನಲ್ಲಿ ೧ಕ್ಕಿಂತ ಹೆಚ್ಚು ಪತ್ರಿಕೆಗಳನ್ನು ಗರ್ಭಿಸ ಕೂಡದು; ಆದರೆ ಟಪ್ಪಾಲುಗಾಡಿಗಳೂ ಲೋಹಮಾರ್ಗಗಳೂ ಇರುವಲ್ಲಿ ಪತ್ರಿಕೆಗಳ ಟಪ್ಪಾಲೂ ಭಂಗೀ ಟಪ್ಪಾಲೂ ಒಟ್ಟಿಗೆ ನಡಿಯುವದರಿಂದ, ಅಂಥಾ ಕಡೆಯಲ್ಲಿ ಪತ್ರಿಕೆಗಳನ್ನು ಭಂಗೀ ಕಟ್ಟಿನಲ್ಲಿ ಗರ್ಭಿಸಿ ಕಳುಹಿಸ ಕೂಡದು.

ಭಂಗೀ ಟಪ್ಪಾಲು ಇಲ್ಲದೆ ಇರುವಲ್ಲಿ, ೧೨ ತೊಲೆ ಭಾರದ ಮೇಲೆ ೪೦ ತೊಲೆ ಭಾರದ ಒಳಗೆ ಟಪ್ಪಾಲು ಉದ್ಯೋಗಸ್ಥನು ತಕ್ಕೊಂಡು ಮುಂದೆ ಕಳುಹಿಸಿ ಕೊಡುವನು, ಮತ್ತು ಟಪ್ಪಾಲುದಸ್ತೂರಿ ಮೇಲೆ ಭಂಗೀ ಟಪ್ಪಾಲಿಗೆ ಹೇಳಿದ ಪಟ್ಟಿಯ ದಸ್ತೂರಿಯೆ ಆಗಿರುವದು.

ಜಂಗೀ ಟಪ್ಪಾಲು ನಡಿಯುವಲ್ಲಿ, ೪೦ ತೊಲೆ ಭಾರದ ಮೇಲೆ ೬೦೦ ತೊಲೆ ಭಾರದ ಒಳಗೆ ತರುವ ಕಟ್ಟುಗಳು, ಪೋಸ್ಟ್ಮಾಸ್ತರನು ಅನುಕೂಲವೆಂದು ಎಣಿಸುವ ಕಾಲಗಳಲ್ಲಿಯೂ ರೀತಿಯಲ್ಲಿಯೂ, ಮುಂದೆ ಕಳುಹಿಸಲಾದಾವು.

ಜಂಗೀ ಕಟ್ಟು ಮೂರು ಫೂಟು ಉದ್ದ, ಒಂದು ಫೂಟು ಅಗಲ, ಒಂದು ಫೂಟು ದಪ್ಪಕ್ಕಿಂತ, ಅಥವಾ ಎರಡು ಸಾವಿರದ ಐನೂರ ತೊಂಭತ್ತೆರಡು ಘನ ಇಂಚುಗಳಿಗಿಂತ ಗಾತ್ರವಾಗಿರ ಕೂಡದು.

ಜಂಗೀ ಕಟ್ಟುಗಳನ್ನು ಯಾವಾಗಲೂ ಬಟ್ಟೆಯಲ್ಲಿ, ಅಥವಾ ಮೇಣವಸ್ತ್ರದಲ್ಲಿ, ಅಥವಾ ತವರದ ತಗಡಿನಲ್ಲಿ ಕಟ್ಟಿ ತರ ಬೇಕು. ಇದಲ್ಲದೆ ಆ ಗವಸಣಿಗೆ ಘಟ್ಟಿ ಮಾಡುವದಕ್ಕೆ ಹೊಲಿದ ಹೊಲಿಗೆಯ ಮೇಲೆ, ಮೂರು ಇಂಚು ಮೀರದ ದೂರ ದೂರದಲ್ಲಿ (ನಡಿಯುವ ನಾಣ್ಯದಿಂದಲ್ಲಾ) ಯಾವದಾದರೂ ಮುದ್ರೆಯಿಂದ ಸ್ಪಷ್ಟವಾದ ಅಂಕಿತವನ್ನು ಹಾಕ ತಕ್ಕದ್ದು.

ಜಂಗೀ ಟಪ್ಪಾಲಿಗೆ ಕಟ್ಟುಗಳನ್ನು ತಕ್ಕೊಳ್ಳುವ ಸಮಯವು, ಆದಿತ್ಯವಾರ ಹೊರ್ತು, ಜಿಲ್ಲೆಗಳಲ್ಲಿ ಪ್ರತಿದಿನ ಮಧ್ಯಾನ್ಹದ ಮುಂಚೆ ೧೦ ಘಂಟೆಯಿಂದ ಮಧ್ಯಾನ್ಹದ ಮೇಲೆ ೪ ಘಂಟೆ ವರೆಗೆ, ರಾಜಧಾನಿಯಲ್ಲಿ ಮಧ್ಯಾನ್ಹದ ಮುಂಚೆ ೧೦ ಘಂಟೆಯಿಂದ ಮಧ್ಯಾನ್ಹದ ಮೇಲೆ ೫ ಘಂಟೆ ವರೆಗೆ. ಟಪ್ಪಾಲುಕಟ್ಟೆಗೆ ಮುಂಚೆಯೇ ಬರದು ತಂದ ರಶೀದಿಗಳಿಗೆ ಟಪ್ಪಾಲುಮುದ್ರೆ ಹಾಕಿ ಕೊಡಲಾದೀತು.

ಸಮುದ್ರಮಾರ್ಗವಾಗಿ ಟಪ್ಪಾಲು ಕಳುಹಿಸುವಲ್ಲಿ, ಜಂಗೀ ಕಟ್ಟುಗಳಿಗೆ ೧೦೦ ತೊಲೆಗೆ ೮ ಆಣೆಯ ಪ್ರಕಾರ ಹಡಗದ ದಸ್ತೂರಿಯಾಗಿ ಹೆಚ್ಚಿಗೆ ಕೊಡ ತಕ್ಕದ್ದು. ೧೦೦ ತೊಲೆಯ ಅಂಶಕ್ಕೆ ಸಹಾ ನೂರು ತೊಲೆ ಎಂಬಂತೆ ದಸ್ತೂರಿ ಕೊಡ ತಕ್ಕದ್ದು.

ಈ ದಸ್ತೂರಿ ಸರ್ಕಾರಿ ಹಡಗಗಳು ತಕ್ಕೊಂಡು ಹೋಗುವ ಕಟ್ಟುಗಳಿಗೆ ಮಾತ್ರವೆ ನೇಮಕ. ಬೇರೆ ಜನರ ಹಡಗಗಳು ಅಂಥಾ ಒಡವೆಗಳನ್ನು ತಕ್ಕೊಂಡು ಹೋಗುವ ಹಂಗಿಗೆ ಒಳಗಾಗಿರುವದಿಲ್ಲ.

೪. ತಿರಿಗಿ ಮೇಲುವಿಳಾಸ ಬರದು ಬೇರೆ ಕಡೆಗೆ ಕಳುಹಿಸುವ ವಿಷಯ.

ಟಪ್ಪಾಲಿನವರ ಮೇಲೆ ಕೆಳಗೆ ಕಾಣಿಸುವ ಸಮಯಗಳಲ್ಲಿ ಅಧಿಕ ಕೆಲಸವೂ ಕಷ್ಟವೂ ಬೀಳುವದರಿಂದ, ಪತ್ರಿಕೆಗಳಿಗೂ ಕಾಗದಗಳಿಗೂ ಪುಸ್ತಕಗಳಿಗೂ ಕಟ್ಟುಗಳಿಗೂ ತಿರಿಗಿ ಮುಂದೆ ಕಳುಹಿಸುವ ದಸ್ತೂರಿ ನೇಮಕವಾಗಿಯದೆ. ಯಾವಾಗ ಅಂದರೆ:

೧. ಪತ್ರಿಕೆ ಮುಂತಾದ್ದನ್ನು, ಮೊದಲು ವಿಳಾಸ ಬರದು ಕಳುಹಿಸಿದ ಠಾಣ್ಯದಲ್ಲಿ ಹೊಂದ ತಕ್ಕ ಜನವು ಇಲ್ಲದಿರುವದರಿಂದ, ಬೇರೊಂದು ಠಾಣ್ಯಕ್ಕೆ ಕಳುಹಿಸ ಬೇಕಾಗುವಾಗ.

೨. ಪತ್ರಿಕೆ ಮುಂತಾದ್ದು ಒಂದು ಟಪ್ಪಾಲುಕಟ್ಟೆಯೊಳಗಿಂದ ದಾಟಿ ಹೋಗುತ್ತಿರುವಷ್ಟರೊಳಗೆ, ಒಪ್ಪಿಸಿ ಕೊಡಿಸುವ ಬಗ್ಯೆ, ಆ ಟಪ್ಪಾಲುಕಟ್ಟೆಯಲ್ಲಿ ನಿಲ್ಲಿಸುವಾಗ.

೩. ಮುಂಚೆ ಮೇಲುವಿಳಾಸವಿದ್ದ ಸ್ಥಳದಲ್ಲಿ, ಬೇರೊಂದು ಸ್ಥಳಕ್ಕೆ ಕಳುಹಿಸುವ ಬಗ್ಯೆ, ಟಪ್ಪಾಲುಕಟ್ಟೆಯೊಳಗಿಂದ ದಾಟಿ ಹೋಗುತ್ತಿರುವಷ್ಟರೊಳಗೆ, ನಿಲ್ಲಿಸುವಾಗ.

ಸರ್ಕಾರಿ ಉದ್ಯೋಗಸ್ಥರು ಉದ್ಯೋಗದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ

ತಿರುಗುವ ಸಮಯದಲ್ಲಿ, ಕಾಗದ ಮುಂತಾದ್ದನ್ನು ಖಾಸಗಿಯಲ್ಲಿ ಕಳುಹಿಸಿದರೆ, ಆ ಕಾಗದ ಮುಂತಾದ್ದನ್ನು ಮೇಲೆ ಹೇಳಿದ ಪ್ರಕಾರ ಬೇರೊಂದು ಕಡೆಗೆ ಕಳುಹಿಸಿ ಕೊಡುವ ಪಕ್ಷದಲ್ಲಿ, ಮುಂದೆ ಕಳುಹಿಸುವ ದಸ್ತೂರಿ ಅವರಿಗೂ ತಪ್ಪದು. ಸೋಲ್ಜರರಿಗೆ ವಿಲಾಯತಿಯಿಂದ ಬಂದ ಪತ್ರಿಕೆಗಳಿಗೆ ಮಾತ್ರವೆ ಹೆಚ್ಚಿಗೆ ದಸ್ತೂರಿ ಇಲ್ಲಾ.

೫. ಪತ್ರಿಕೆ, ವರ್ತಮಾನಕಾಗದ, ವಹಿ, ಪುಸ್ತಕಗಳ ರೆಜಿಸ್ತ್ರಿ ವಿಷಯ.

ಪತ್ರಿಕೆಗಳನ್ನೂ, ವರ್ತಮಾನಕಾಗದಗಳನ್ನೂ, ವಹಿಗಳನ್ನೂ, ಪುಸ್ತಕಗಳನ್ನೂ, ಸಾಧಾರಣ ಟಪ್ಪಾಲುದಸ್ತೂರಿಯ ಹೊರ್ತು, ಬೇರೆ ೪ ಆಣೆ ರುಸುಮು ಕೊಟ್ಟು, ಪ್ರತ್ಯೇಕವಾಗಿ ರೆಜಿಸ್ತ್ರಿ ಮಾಡಿಸ ಬಹುದು; ಆದರೆ ದಸ್ತೂರಿಯನ್ನು ರುಸುಮನ್ನೂ ಮುಂದಾಗಿ ಸಲ್ಲಿಸ ಬೇಕು. ಯಾವ ಪತ್ರಿಕೆ, ವರ್ತಮಾನಕಾಗದ, ವಹಿ, ಪುಸ್ತಕವನ್ನಾದರೂ ಹಿಂದುಸ್ಥಾನ ಸರ್ಕಾರಕ್ಕೆ ಒಳಗಾಗಿರುವ, ಅಥವಾ ಐಕ್ಯರಾಜ್ಯವೆಂಬ ಇಂಗ್ಲಿಷು ಸಂಸ್ಥಾನದಲ್ಲಿರುವ ಮತ್ತು ಅದರ ಕೊಲೊನಿ ಎಂಬ ಆಜ್ಞಾಧಿಕಾರದಲ್ಲಿರುವ ದೇಶಗಳಲ್ಲಿರುವ ಯಾವ ಸ್ಥಳಕ್ಕಾದರೂ ರೆಜಿಸ್ತ್ರಿ ಮಾಡಿಸ ಬಹುದು.

ರೆಜಿಸ್ತ್ರಿ ಮಾಡಲಿಕ್ಕೆ ಆಲೋಚಿಸಿದ ಕಾಗದಗಳನ್ನು, ಟಪ್ಪಾಲುಚೀಲ ಮುಚ್ಚುವದಕ್ಕೆ ನಿಶ್ಚಯಿಸಿ ಇರುವ ಸಮಯದ ಅರ್ಧ ತಾಸಾದರೂ ಮುಂಚೆಯೆ, ಟಪ್ಪಾಲುಕಟ್ಟೆಗೆ ತರ ಬೇಕು. ಆ ಸಮಯದ ತರುವಾಯ ತಂದರೆ, ತಡವಾಯಿತು ಎಂಬ ಅರ್ಥವುಳ್ಳ 'ಟೂ ಲೇಟ್' ಎಂಬ ಮುದ್ರೆ ಹಾಕಿ, ಮರುಸರ್ತಿಗೆಂದು ಇಡಲಾದಾವು.

ಪೋಸ್ತ್ಮಾಸ್ತರನಾಗಲಿ ಬೇರೆ ಉದ್ಯೋಗಸ್ಥನಾಗಲಿ, ಪತ್ರಿಕೆಯನ್ನು ರೆಜಿಸ್ತ್ರಿ ಮಾಡಿಸುವವನಿಗೆ ರಶೀದಿ ಕೊಟ್ಟು, ಚೆಕ್ ಬೂಕಿನ ಅತ್ತಕಡೆಯಲ್ಲಿ ಆ ಬಗ್ಗೆ ಪ್ರತಿಯನ್ನು ಇಟ್ಟುಕೊಳ್ಳುವನು; ತಾರೀಕಿನ ಟಪ್ಪಾಲುಮುದ್ರೆಯನ್ನು ರಶೀದಿಗೂ ಪ್ರತಿಗೂ ಹಚ್ಚ ತಕ್ಕದ್ದು.

ರೆಜಿಸ್ತ್ರಿ ಮಾಡಿದ ಪತ್ರಿಕೆಯನ್ನು ಒಪ್ಪಿಸಿ ಕೊಡುವಾಗ, ಟಪ್ಪಾಲಿನವನು ಪತ್ರಿಕೆ ಹೊಂದಿದವನ ದಸ್ಕತನ್ನು ಹಳದಿ ಬಣ್ಣದ ಸುತ್ತುಕಾಗದದಲ್ಲಿ ಹಾಕಿಸಿ ಕೊಳ್ಳ ಬೇಕು; ಅಸಲು ರಶೀದಿಯನ್ನು ಪತ್ರಿಕೆ ಮುಟ್ಟಿಸಿದ ಟಪ್ಪಾಲುಕಟ್ಟೆಯಲ್ಲಿ ಇಟ್ಟು ಕೊಂಡು, ಅದರ ಜೋಡಿನ ರಶೀದಿಯನ್ನು ಆರಂಭದಲ್ಲಿ ಕಳುಹಿಸಿದ ಟಪ್ಪಾಲುಕಟ್ಟೆಗೆ ಅಂದಿನಿಂದ ಮೊದಲನೇ ಟಪ್ಪಾಲು ಹೋಗುವಾಗ ಕಳುಹಿಸಿ ಕೊಡ ತಕ್ಕದ್ದು.

ಟಪ್ಪಾಲು ಆಕ್ಟಿನ ೪೯ನೇ ಸೆಕ್ಷನಿನ ಪ್ರಕಾರ, ಸರ್ಕಾರದವರು ರೆಜಿಸ್ತ್ರಿ ಮಾಡಿದ ಪತ್ರಿಕೆಯ ಭದ್ರತೆಗೆ ಹೊಣೆಯಲ್ಲಾ, ಜವಾಬುದಾರರೂ ಅಲ್ಲಾ; ಆದಾಗ್ಯೂ, ಯಾವ ಉದ್ಯೋಗಸ್ಥನ ಅಜಾಗ್ರತೆಯಿಂದ ಅದು ಕಳದು ಹೋಗುತ್ತದೋ, ಅಥವಾ ಅಪಹಾರವಾಗುತ್ತದೋ, ಅವನಿಂದ ಖಂಡಿತವಾಗಿ ಉದಾಹರಣೆ ಕೇಳ್ಯಾರು, ಮತ್ತು ಆಗುವ ನಷ್ಟ ಅವನಿಂದ ಕೊಡಿಸ ಬಹುದು.

ರೆಜಿಸ್ತ್ರಿ ಮಾಡಿದ ಪಕ್ಷದಲ್ಲಿ ಒಂದು ಟಪ್ಪಾಲುಕಟ್ಟೆಯಿಂದ ಮತ್ತೊಂದಕ್ಕೆ ಹೆಜ್ಜೆ ಹಿಡಿದು ಹೋಗಲಿಕ್ಕೆ ಆಗುವ ಕಾರಣ, ಪತ್ರಿಕೆ ಕಳುಹಿಸುವದು ಅಧಿಕ ಭದ್ರವಾಗುತ್ತದೆ. ಆದ್ದರಿಂದ, ರೆಜಿಸ್ತ್ರಿ ಮಾಡಿದ ಒಡವೆಯು, ನಿಬಂಧನೆಯ ಪ್ರಕಾರ ಎಚ್ಚರಿಕೆಯಲ್ಲಿ ಅಸಡ್ಡೆ ಮಾ

ಡುವದರಿಂದ ಕಳದು ಹೋದರೆ, ಅಥವಾ ಅಪಹಾರವಾದರೆ, ಟಪ್ಪಾಲಿನ ಉದ್ಯೋಗಸ್ಥರನ್ನು ಅವರ ಅಸಡ್ಡೆಯ ಫಲವಾಗಿ, ಜವಾಬುದಾರರೆಂದು ಮಾಡುವಲ್ಲಿ ಅವರು ಮತ್ತೊಬ್ಬರನ್ನು ದೂರಲಿಕ್ಕೆ ಕಾರಣವಿಲ್ಲ.

ರೆಜಿಸ್ತ್ರಿ ಮಾಡುವದರಿಂದ, ಪತ್ರಿಕೆ ಮುಂತಾದರ ಒಳಗಿರುವ ವಸ್ತುಗಳಿಗೆ ರಶೀದಿ ಕೊಟ್ಟ ಹಾಗೆ ಆಗದಿರುವದರಿಂದಲೂ, ಲಕೋಟೆಯನ್ನು ಟಪ್ಪಾಲುಕಟ್ಟೆಗೆ ಕೊಡುವ ಮುಂಚೆಯೂ ಮತ್ತೆಯೂ, ಹೊಂದುವವನ ಕೈಗೆ ಮುಟ್ಟಿಸಿದ ಮೇಲೆ ಸಹಾ, ಆ ವಸ್ತುಗಳನ್ನು ಅಪಹರಿಸ ಬಹುದಾಗಿರುವದರಿಂದಲೂ, ಬೆಲೆಯುಳ್ಳ ವಸ್ತುಗಳನ್ನು ಗರ್ಭಿತವಾಗಿ ಹೊಂದಲಿಕ್ಕೆ ನಿರೀಕ್ಷಿಸುವವನು, ರಶೀದಿ ಕೊಡುವ ಸಮಯದಲ್ಲಿ, ಟಪ್ಪಾಲಿನವನ ಕಣ್ಣ ಮುಂದೆ ಪತ್ರಿಕೆಯನ್ನು ತೆರೆಯ ತಕ್ಕದ್ದು.

ಹುಂಡಿಗಳೂ, ಟಪ್ಪಾಲುಚೀಟುಗಳೂ, ಬೇರೆ ಬೆಲೆಯುಳ್ಳ ಒಡವೆಗಳೂ ಇರುವ ಪತ್ರಿಕೆಯನ್ನು ಸಾಧಾರಣವಾಗಿ ರೆಜಿಸ್ತ್ರಿ ಮಾಡಿಸಿ, ದಪ್ಪವಾದ ಲಖೋಟೆಯಲ್ಲಿ ಭದ್ರವಾಗಿ ಮಡಿಚಿ ಅಥವಾ ಗರ್ಭಿಸಿ, ಯಾವಾಗಲೂ ಅರಗಿನಿಂದ ಮುದ್ರೆ ಹಾಕ ಬೇಕು. ಈ ಪ್ರಕಾರ, ಸಾಧ್ಯವಾಗುವಷ್ಟು, ಅಪಾಯವಾಗದಂತೆ ಆದೀತು.

ಒಂದು ಪತ್ರಿಕೆಯು, ಹೊಂದ ತಕ್ಕವನಿಗಲ್ಲದೆ, ಯಾರಿಗೂ ಸಾಧಾರಣವಾಗಿ ವಿಶೇಷವಲ್ಲಾ; ಆದರೆ ಬೆಲೆಯುಳ್ಳ ಒಡವೆಗಳು ಗರ್ಭಿಸಿ ಇದ್ದರೆ, ಆ ಸಂಗತಿ ಬೇರೆ. ಟಪ್ಪಾಲುಕಟ್ಟೆಯಲ್ಲಿ ಯಾರ್ಯಾರ ಕೈಯಿಂದ ನಡಿಯುತ್ತದೋ, ಅನೇಕರಾದ ಈ ಜನರಲ್ಲಿ ಆ ಪತ್ರಿಕೆಯಿಂದ ಅಭಿಲಾಷೆಯ ಶೋಧನೆ ಹುಟ್ಟುವದಕ್ಕೆ ಕಾರಣವಾಗುತ್ತದೆ. ಈ ದೆಶೆಯಿಂದ, ಅಂಥಾ ಪತ್ರಿಕೆಗಳನ್ನು ರೆಜಿಸ್ತ್ರಿ ಮಾಡುವ ಮುಂಚಿಂತೆ ಒಳ್ಳೆದೆಂದು ತಿಳಿಸಿಯದೆ.

೬. ಸರ್ವರಿಗೆ ಸೂಚನಾಲೋಚನೆಗಳು.

ಟಪ್ಪಾಲಿನವರಿಗೆ ತಮ್ಮಿಂದಾಗುವಷ್ಟು ಆಧಾರ ಕೊಡುವ ಬಗೈ, ಸರ್ವರು ಕೆಳಗೆ ಬರುವ ಸೂಚನೆಗಳಿಗೂ ಆಲೋಚನೆಗಳಿಗೂ ಲಕ್ಷ ಕೊಟ್ಟರೆ ಆದೀತು.

ಎಲ್ಲಾ ಒಡವೆಗಳನ್ನು, ಮುಖ್ಯವಾಗಿ ವರ್ತಮಾನಕಾಗದಗಳಿಗೆ ಅನೇಕ ಸರ್ತಿ ಸಂಭವಿಸುವ ಪ್ರಕಾರ, ಅವು ಅನೇಕವಾಗಿರುವಾಗೈ, ಆಗುವಷ್ಟು ಬೇಗ ಟಪ್ಪಾಲಿಗೆ ಕಳುಹಿಸಿರಿ.

ಪತ್ರಿಕೆ ಹೊಂದುವವರ ಹೆಸರುಗಳನ್ನು ಸಂಕ್ಷೇಪಿಸದೆ ಪೂರ್ಣವಾಗಿಯೂ, ಸ್ಪಷ್ಟ ಅಕ್ಷರದಿಂದಲೂ ಬರಿಯ ತಕ್ಕದ್ದು.

ಎಲ್ಲಾ ಪತ್ರಿಕೆಗಳನ್ನೂ, ವರ್ತಮಾನಕಾಗದಗಳನ್ನೂ ಬೇರೆ ಕಟ್ಟುಗಳನ್ನೂ ಭದ್ರವಾಗಿ ಮಡಚಿ ಮುದ್ರೆ ಹಾಕ ತಕ್ಕದ್ದು; ಇಲ್ಲದಿದ್ದರೆ, ಅವುಗಳನ್ನು ಅನೇಕ ಸರ್ತಿ ಆಚೆ ಈಚೆ ಹಾಕುತ್ತಿರುವದರಿಂದ ಅವು ತೆರೆದು ಹೋದಾವು; ಇದಲ್ಲದೆ ಟಪ್ಪಾಲಿಗೆ ತಕ್ಕೊಂಡು ಹೋಗುವ ಚಾಕರರು ಅವುಗಳಲ್ಲಿರುವ ಒಡವೆಗಳನ್ನು ಎಬ್ಬಿಸಲಿಕ್ಕೆ ಸಾಕು.

ಟಪ್ಪಾಲಿಗೆ ಕಳುಹಿಸುವ ಸ್ವಲ್ಪ ಕಾಲದ ಮುಂಚೆಯೆ ಚೀಟು ಹಚ್ಚ ತಕ್ಕದ್ದು; ಮತ್ತು ಕಾಗದಗಳಿಗೆ ಹಚ್ಚುವ ಬಗೈ ಚೀಟುಗಳನ್ನು ಕ್ರಯಕ್ಕೆ ಕೊಳ್ಳುವದಕ್ಕೆಂದು ಚಾಕರರ ಕೈಯಲ್ಲಿ ಎಂದಿಗೂ ಹಣ ಕೊಡ ಬಾರದು.

ವರ್ತಮಾನಕಾಗದಗಳನ್ನೂ ಪುಸ್ತಕಗಳನ್ನೂ ಸಂಣ ಕಾಗದಗಳಲ್ಲಿ ಸುತ್ತುವದಾದರೆ,

ಒಡವೆಯು ಜಾರಿ ಬೀಳದಂತೆ, ಆ ಸುತ್ತನ್ನು ಬಿಮ್ಮಗೆ ತಗಲುವ ಹಾಗೆ ಮಾಡ ಬೇಕು. ಮಳಗಾಲದಲ್ಲಿ ಪುಸ್ತಕಗಳನ್ನು, ಆಚೆ ಈಚೆ ಸ್ವಲ್ಪ ಸ್ಥಳ ಬಿಟ್ಟು, ಯಾವಾಗಲೂ ಮೇಣವಸ್ತ್ರದಲ್ಲಿ ಮುಚ್ಚ ತಕ್ಕದ್ದು:

ಒಡವೆಗಳನ್ನು ಟಪ್ಪಾಲುಪೆಟ್ಟಿಗೆಯಲ್ಲಿ ಹಾಕುವಾಗ್ಯೆ, ಬೀಳುವ ಸಮಯದಲ್ಲಿ ಶಿಕ್ಕಿಕೊಂಡವೊ, ಅಥವಾ ಪೆಟ್ಟಿಗೆಯೊಳಗೆ ಬಿದ್ದವೊ ಎಂದು ಚನ್ನಾಗಿ ನೋಡಿ ಕೊಳ್ಳ ತಕ್ಕದ್ದು.

ಹಣವನ್ನಾಗಲಿ ಬೇರೆ ಬೆಲೆಯುಳ್ಳ ಒಡವೆಗಳನ್ನಾಗಲಿ ಟಪ್ಪಾಲಿನಲ್ಲಿ ಕಳುಹಿಸುವದಕ್ಕೆ ಶಿಳಿದು ತಕ್ಕೊಳ್ಳಲಿಕ್ಕಿಲ್ಲಾ; ಆದರೂ ಬೆಂಕ್ ನೋಟ್ ಎಂಬ ಹುಂಡೀ ಚೀಟುಗಳ ಅರ್ಧವನ್ನು ಕಳುಹಿಸುವದಕ್ಕೆ ನಿಷೇಧ ಇಲ್ಲ.

ಏನಾದರೂ ವಿಶೇಷ ಒಡವೆಯನ್ನು ಕಳುಹಿಸುವದಾದರೆ, ಆ ಒಡವೆಯನ್ನು ರೆಜಿಸ್ತ್ರಿ ಮಾಡಿಸುವದು ಒಳ್ಳೇದು; ಯಾಕಂದರೆ, ಆ ಪ್ರಕಾರ ಮಾಡುವದರಿಂದ, ಟಪ್ಪಾಲಿನವರು ಅಂಥಾ ಒಡವೆ ತಪ್ಪಿ ಹೋದ ಪಕ್ಷದಲ್ಲಿ ಎಲ್ಲಿ ಕಾಣದೆ ಹೋಯಿತೊ, ಅಲ್ಲಿ ವರೆಗೆ ಹುಡುಕಿ ನೋಡಲಿಕ್ಕೆ ಆದೀತು.

ಜಂಗೀ ಕಟ್ಟುಗಳನ್ನು ಟಪ್ಪಾಲುಕಚ್ಚೆಯ ಪುಸ್ತಕಗಳಲ್ಲಿ ವಿವರವಾಗಿ ಬರದು ಇಡುವದರಿಂದ, ಅವುಗಳನ್ನು ಪ್ರತ್ಯೇಕ ರೆಜಿಸ್ತ್ರಿ ಮಾಡುವದು ಅಗತ್ಯವಲ್ಲಾ.

ಯಾರಾದರೂ ಬೇರೆ ಕಡೆಗೆ ಹೋಗಿ ಉಳಕೊಂಡರೆ, ಅದನ್ನು ಟಪ್ಪಾಲಿನವರಿಗೆ ಯಾವಾಗಲೂ ತಿಳಿಸ ತಕ್ಕದ್ದು.

ಒಂದು ಒಡವೆಯನ್ನು ಕಳುಹಿಸುವವನ ಹೆಸರು ಯಾವಾಗಲೂ ಪೂರ್ಣವಾಗಿ ಬರಿಯುವದು ಒಳ್ಳೇದು. ಯಾಕಂದರೆ ಆ ಒಡವೆ ಹೊಂದ ತಕ್ಕವನು ಶಿಕ್ಕದಿದ್ದ ಪಕ್ಷದಲ್ಲಿ, ಅದನ್ನು ಕಳುಹಿಸಿದವನಿಗೆ ತಿರಿಗಿ ಮುಟ್ಟಿಸುವದು ಸಾಧ್ಯವಾಗುತ್ತದೆ. ಇದಲ್ಲದೆ ಕಳುಹಿಸಿದವನ ಹೆಸರನ್ನು ಕೂಲಂಕುಶವಾಗಿ ಲಖೋಟೆಯಲ್ಲಿ ಹೊರಗೆ ಬರದರೆ, ಹೊಂದ ತಕ್ಕವನು ಶಿಕ್ಕದಿದ್ದರೂ ಟಪ್ಪಾಲಿನವರು ಲಖೋಟೆಯನ್ನು ಒಡೆಯದೆ, ಕಳುಹಿಸಿದವನಿಗೆ ಕೂಡಲೆ ತಿರಿಗಿ ಮುಟ್ಟಿಸುವರು.

ಕಳುಹಿಸಿದ ಒಡವೆ ನಷ್ಟವಾದರೆ, ತಪ್ಪಿ ಹೋದರೆ, ಅಥವಾ ಮುಟ್ಟುವದಕ್ಕೆ ತಡವಾದರೆ, ಟಪ್ಪಾಲಿಗೆ ಕೊಟ್ಟ ಸಂಗತಿಯ ವಿದ್ಯಮಾನಗಳ ವಿಷಯದಲ್ಲಿ ಆಗುವಷ್ಟು ವರ್ತಮಾನವನ್ನು ಸ್ಪಷ್ಟ ಮಾತುಗಳಿಂದ ಕೊಡ ತಕ್ಕದ್ದು, ಮತ್ತು ಫಿರ್ಯಾದು ಮಾಡುವವನ ಸ್ವಾಧೀನದಲ್ಲಿ ಇರುವಂಥಾ, ಈ ವಿಷಯದಲ್ಲಿ ಆಧಾರ ಕೊಡುವಂಥಾ ಪತ್ರಗಳನ್ನು ಸಹಾ ಕಳುಹಿಸಿ ಕೊಡ ತಕ್ಕದ್ದು.

ಯಾರಾದರೂ ಬೆಲೆಯುಳ್ಳ ಒಡವೆಗಳನ್ನು ಟಪ್ಪಾಲಿನಲ್ಲಿ ಕಳುಹಿಸುವದಾದರೆ, ಬರುವ ನಷ್ಟಕ್ಕೆ ತಾವೆ ಹೊಣೆ ಎಂಬದನ್ನು ಮನಸ್ಸಿನಲ್ಲಿ ಇಡ ಬೇಕು. ಯಾಕಂದರೆ, ಟಪ್ಪಾಲಿಗೆ ಒಪ್ಪಿಸುವ ಯಾವ ವಸ್ತುವಿನ ವಿಷಯದಲ್ಲಿಯಾದರೂ ನಷ್ಟ, ಹಾನಿ ಬಂದರೆ, ಸರ್ಕಾರದವರು ಜವಾಬುದಾರರಲ್ಲಾ.

ಹುಂಡಿಗಳನ್ನೂ ಬೇರೆ ಬೆಲೆಯುಳ್ಳ ವಸ್ತುಗಳನ್ನೂ ರೆಜಿಸ್ತ್ರಿ ಮಾಡದ ಪತ್ರಿಕೆಯಲ್ಲಿ ಎಂದಿಗೂ ಕಳುಹಿಸ ಬಾರದು. ಯಾಕಂದರೆ ಟಪ್ಪಾಲಿಗೆ ವೈಯುವದಕ್ಕೆ ಸಾಧಾರಣವಾಗಿ

ಕಳುಹಿಸುವ ಕೀಲು ಚಾಕರರೂ, ಯಾರ್ಯಾರ ಕೈಯಿಂದ ನಡಿಯುತ್ತದೊ, ಆ ಟಪ್ಪಾಲಿನ ಅನೇಕ ಉದ್ಯೋಗಸ್ಥರೂ ಅಭಿಲಾಷೆಯ ಶೋಧನೆಗೆ ಒಳಗಾಗುತ್ತಾರೆ. ಹಣವಾಗಲಿ ಬೇರೆ ಬೆಲೆಯುಳ್ಳ ವಸ್ತುಗಳಾಗಲಿ ಇರುವ ಪತ್ರಿಕೆಗಳನ್ನು ರೆಜಿಸ್ತ್ರಿ ಮಾಡದೆ ಟಪ್ಪಾಲಿಗೆ ಕೊಟ್ಟರೆ, ಫ್ರೆಂಚು ದೇಶದಲ್ಲಿ ಅದು ಶಿಕ್ಷೆಗೆ ಯೋಗ್ಯವಾದ ಅಪರಾಧವೆಂದು ಮಾಡಿದ್ದಾರೆ.

ಫಿರ್ಯಾದುಗಳನ್ನು ಇನ್ಸ್‌ಪೆಕ್ಟಿಂಗ್ ಪೋಸ್ತ್‌ಮಾಸ್ತರರಿಗೆ ಮಾಡ ತಕ್ಕದ್ದು. ಆಗೈ ವಿಚಾರಿಸುವದಕ್ಕೆ ಬಹಳ ಸರ್ತಿ ಸಮಯವು ಹೆಚ್ಚಾಗಿ ಸಿಕ್ಕುತ್ತದೆ. ಫಿರ್ಯಾದು ಮಾಡುವವರು, ಮನಸ್ಸಿದ್ದರೆ, ಫಿರ್ಯಾದಿಯ ನಕಲು ಪೋಸ್ತ್‌ಮಾಸ್ತರ ಜನರಲನಿಗೆ ಕಳುಹಿಸ ಬಹುದು. ಆದರೆ ಇದು ಅವಶ್ಯವಲ್ಲಾ, ಯಾಕಂದರೆ ಎಲ್ಲಾ ಫಿರ್ಯಾದುಗಳೂ, ಇನ್ಸ್‌ಪೆಕ್ಟಿಂಗ್ ಪೋಸ್ತ್‌ಮಾಸ್ತರನ ರಿಪೋರ್ಟಿನೊಂದಿಗೆ ಆತನಿಗೆ ಕಳುಹಿಸಿ ಕೊಡುತ್ತವೆ.

ನೋಟಿಸು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟಪ್ಪಾಲ್ ಚೀಟುಗಳು ಈ ಕೆಳಗಿನ ಡಿಪೊ ಯಾನೆ ದಾಸ್ತಾನ್ ಸ್ಥಳಗಳಲ್ಲಿ ಆಯಾ ಉದ್ಯೋಗಸ್ಥರಿಂದ ಮಾರಲ್ಪಡುತ್ತವೆ.

ತಾಲೂಕುಗಳು	ಸ್ಥಳದ ಹೆಸರುಗಳು		ಯಾರಿಂದ ಮಾರೋಣಾಗುತ್ತವೆ
ಮಂಗ್ಳೂರು	ಮಂಗ್ಳೂರು	ಟಪ್ಪಾಲ ಆಫೀಸ್	ಪೋಸ್ತಮಾಸ್ತರ್
		ಜಿಲ್ಲಾ ಕೋರ್ಟ್	ಸ್ಟಾಂಪು ವೆಂಡರ್
		ಮುನಶೀಫ ಕೋ.	” ”
		ಹಜೂರ ಖಜಾನೆ	” ”
	ಬಂಟ್ವಾಳ.	ಟಪ್ಪಾಲ್ ಆಫಿಸ್	ಡಿಪ್ಯುಟಿ ಪೋಸ್ತ್‌ಮಾಸ್ತರ್
		ಕಸಬೆಯಲ್ಲಿ . . .	ಸ್ಟಾಂಪು ವೆಂಡರ್
	ಮುಲ್ಕಿ		ಟಪ್ಪಾಲ್ ಗುಮಾಸ್ತ
ಕಾಸರಗೊಡ	ಕಾಸರಗೊಡ	ಟಪ್ಪಾಲ್ ಆಫಿಸ್	ಡಿಪ್ಯುಟಿ ಪೋಸ್ತ್‌ಮಾಸ್ತರ್
		ಕಸಬೆಯಲ್ಲಿ . . .	ತಾಲೂಕ ಸ್ಟಾಂಪು ವೆಂಡರ್
	ನೀಲೇಶ್ವರ		ಡಿಪ್ಯುಟಿ ತಹ್ಸಿಲ್ದಾರ ವ ಸಬ್‌ಮೆಜಿಸ್ಟ್ರೇಟ
			ಸ್ಟಾಂಪು ವೆಂಡರ್
	ಕುಂಬಳೆ		ಸೀಕಸ್ಟಮ್ ಸುಪರಿಂಟೆಂಡೆಂಟ್
	ಮಂಜೇಶ್ವರ		ಸ್ಟಾಂಪು ವೆಂಡರ್
	ವಿಟ್ಲ		ದಸ್ತಾವೇಜುಗಳ ಸಬ್ ರಿಜಿಸ್ತ್ರಾರ್

ತಾಲೂಕುಗಳು	ಸ್ಥಳದ ಹೆಸರುಗಳು	ಯಾರಿಂದ ಮಾರೋಣಾಗುತ್ತವೆ
ಉಪ್ಪಿನಂಗಡಿ	ಉಪ್ಪಿನಂಗಡಿ	ಟಪ್ಪಾಲ ಗುಮಾಸ್ತ ತಾಲೂಕ ಸರಾಪ್
	ಪುತ್ತೂರು	ಟಪ್ಪಾಲ ಗುಮಾಸ್ತ
	ಬೆಳ್ತಂಗಡಿ	ಡಿಪ್ಯುಟಿ ತಹ್ಸೀಲ್ದಾರ ವ ಸಬ್ ಮೆಜಿಸ್ಟ್ರೇಟ
	ಸುಳ್ಯ	ಟಪ್ಪಾಲ ಗುಮಾಸ್ತ
ಉಡುಪಿ	ಉಪ್ಪಿ . . . ಟಪ್ಪಾಲ ಆಫೀಸ್	ಡಿಪ್ಯುಟಿ ಪೋಸ್ಟಮಾಸ್ತರ್
	ಉಪ್ಪಿ . . . ಕಸಬೆಯಲ್ಲಿ . .	ಸ್ಟಾಂಪು ವೆಂಡರ್ ಅಂಗಡಿಗಾರ ಮಹದೇವ ಭಂಡಾರಿ
	ಬಾರ್ಕೂರ	ಟಪ್ಪಾಲ ಗುಮಾಸ್ತ ಸ್ಟಾಂಪು ವೆಂಡರ್
	ಕಾರ್ಕಳ	ಡಿಪ್ಯುಟಿ ತಹ್ಸೀಲ್ದಾರ ವ ಸಬ್ ಮೆಜಿಸ್ಟ್ರೇಟ ಸಾಂಪು ವೆಂಡರ್
ಕುಂದಾಪುರ	ಕುಂದಾಪುರ ಪೋಸ್ಟ್ ಆಫೀಸ್	ಡಿಪ್ಯುಟಿ ಪೋಸ್ಟ್ಮಾಸ್ತರ್
	ಕುಂದಾಪುರ ಕಸಬೆಯಲ್ಲಿ . . .	ಸ್ಟಾಂಪು ವೆಂಡರ್
	ಬೈಂದೂರ್	ಸ್ಟಾಂಪು ವೆಂಡರ್

ಸರಕಾರಿ ಹುಂಡಿಗಳ ಚಲಾವಣೆ.

ಕಳದ ವರುಷದ ಫೆಬ್ರುವರಿ ತಿಂಗಳ ೧ನೇ ತಾರಿಕು ಲಾಗಾಯಿತು ೧೦೦ ರೂಪಾಯಿಗಳಿಗೆ ಮೀರದಂಥ ಹುಂಡಿಗಳನ್ನು ಕೊಡುವ ಬಗ್ಯೆ ಸಲಾಯಿಸುವ ಬಗ್ಯೆ ಮದ್ರಾಸ್ ಎಕೌಂಟಾಂಟ ಜೆನರಲ್‌ರವರ ಆಫೀಸಿನಲ್ಲಿ ಮತ್ತು ಅಂಚಿನಲ್ಲಿ ನಮೂದಿಸಿರುವ ಜಿಲ್ಲೆಗಳ ಹಜೂರಸ್ಟೇಶನ್‌ಗಳಲ್ಲಿ ಸಹ ಆಫೀಸ್‌ಗಳು ಇಡಲ್ಪಟ್ಟಿರುತ್ತವೆ.

ಗಂಜಾಮು	ದಕ್ಷಿಣ ಆರ್ಕಾಟ್
ವಿಶಾಖಪಟ್ಣ	ತಂಜಾವೂರು
ಗೋದಾವರಿ	ತಿರುಚಿನಾಪಳ್ಳಿ
ಕೃಷ್ಣ	ಮಧುರೆ
ನೆಲ್ಲೂರು	ತ್ರಿನವಳ್ಳಿ
ಕಡಪ್ಪಾ	ಸೇಲಂ
ಬಳ್ಳಾರಿ	ಕೊಯಂಬತ್ತೂರ
ಕರ್ನೂಲ	ದಕ್ಷಿಣ ಕನ್ನಡ
ಮದ್ರಾಸ್	ಮಲೆಬಾರ್
ಉತ್ತರ ಆರ್ಕಾಟ್	

ಹುಂಡಿಗಳನ್ನು ಅಪೇಕ್ಷಿಸುವವರು, ರಾಜಧಾನಿಯಲ್ಲಿ ಹುಂಡಿ ಇಲಾಖೆ ಕಂಟ್ರೋಲ್‌ರವರಿಗೆ ಮತ್ತು ಜಿಲ್ಲೆಗಳ ಖಜಾನೆಗಳಲ್ಲಿ ಗವರ್ನಮೆಂಟಿನಿಂದ ಕ್ರಮವಾಗಿ ನೇಮಿಸಲ್ಪಟ್ಟ ಹುಂಡಿ ಏಜೆಂಟರಿಗೆ ಸಹ ಅರಿಕೆ ಮಾಡಿ ಕೊಳ್ಳ ಬೇಕು. ಸದರಿ ಹುಂಡಿಗಳ ಸ್ವಭಾವವನ್ನು ಕುರಿತು ಮತ್ತು ಅವುಗಳನ್ನು ಕೊಡುವ ವಿಷಯದಲ್ಲಿ ವಗೈರೆ ಸಂಬಂಧಿಸಿದ ಕ್ರಮಗಳ ಕುರಿತು ಎಲ್ಲಾ ಅನುಭವ ಸದರಿ ಗೃಹಸ್ಥರು ತಿಳಿಸ್ಯಾರು.

ಹುಂಡಿ ಬಗ್ಯೆ ವಸೂಲು ಮಾಡೋಣಾಗುವ ವಟಾವಿನ ದರ:

						ರೂ.	ಆ.
೧೦ ರೂಪಾಯಿಗೆ ಮೀರದಂಥಾ ಯಾವದೊಂದು ಮೊಬ್ಲಗಿಗೆ						೦	೨
೧೦	„	ಮೀರಿ ೨೫ ರೂಪಾಯಿ ಒಳಗೆ				೦	೪
೨೫	„	„	೫೦	„	„	೦	೮
೫೦	„	„	೭೫	„	„	೦	೧೨
೭೫	„	„				೧	೦

* ನೂರು ರೂಪಾಯಿಗಿಂತ ಹೆಚ್ಚು ಮೊಬ್ಲಗಿಗೆ ಯಾವದೊಂದು ಹುಂಡಿ ಕೊಡೋಣಾಗಲಿಕ್ಕಿಲ್ಲ.

ಹುಂಡಿ ಕೊಡ ಬಹುದಾದ ವ ವಟಾಯಿಸ ಬಹುದಾದ ಆಯಾ ಆಫಿಸುಗಳಲ್ಲಿರುವ ಆಯಾ ಏಜೆಂಟರ ಪಟ್ಟಿ.

ಜಿಲ್ಲೆಗಳು	ಆಫಿಸ್	ಮನಿ ಆರ್ಡರ್ ಏಜೆಂಟಗಳ ಹೆಸರು
ಬಳ್ಳಾರಿ......	ಬಳ್ಳಾರಿ......	ಸುಬ್ರೈಂತೋರ್ ವೆಂಕೋಬರಾವ್
ಕೊಯಂಬತ್ತೂರು	(ಕೊಯಂಬತ್ತೂರು	ಸ. ನರ್ಸಪ್ಪಯ್ಯ
	(ಉಟಕಮಂಡ್..	ಕ. ರಂಗಪ್ಪನಾಯಿಡು
ಕಡಪ್ಪಾ......	ಕಡಪ್ಪಾ......	ಟಿ. ಜಿ. ವಾರ್ಡ್
ಗಂಜಾಮ್	ಶಿಕ್ಕಾಕೋಲ್ ...	ಜಿ. ಸುರಿಯ ನಾಯಿಡು
ಗೋದಾವರಿ ...	ಕೊಕ್ಕನಾಡ	ಕಲಿಂನ್ರ ವೆಂಕಟಸುಬ್ಬರಾವ್
ಕೃಷ್ಣ	ಮಚಲಿಪಟ್ಣ ...	ಞನಪರಟ್ಟಿ ಐಯ್ಯಪ್ಪನಾಯಿಡು
ಕರ್ನೂಲ್	ಕರ್ನೂಲ್	ಮದುರ ಆರಮೊಗಮ್ ಮೊದಲಿ
ಮದ್ರಾಸ್	ಸೈದಪೇಟ್.....	ಪೊಕಲ್ ಬಂಗಾರಿಯ ನಾಯಿಡು
„ (ಚೀಫ್ ಆಫಿಸ್).....	ಎಕೌಂಟಾಂಟ ಜನರಲ್‌ರ ಆಫಿಸ್.	ಏನ್. ಕೃಷ್ಣಸ್ವಾಮಿ ಮೊದಲಿ
ಮಧುರೆ	ಮಧುರೆ	ಮ. ನಾರಾಯಣ ಸ್ವಾಮಿ ನಾಯಿಡು
ಮಲಬಾರ	(ಕಲ್ಲಿಕೋಟ್ ...	ಜೋನ್ ಪೀಟರ್ ಕಾಬ್ರಾಲ್
	(ಕನ್ನನೂರು ...	ಕುಞ್ಞಿ ಕೋಮನ್ ನಾಯರ್
	(ಕೊಚ್ಚಿ......	ಮಾರ್ಕ ಎ. ಪ್ಲತೆಲ್

* ಇಂಡಿಯಾ ಗೌರ್ನಮೆಂಟಿನವರ ೧೮೬೭ನೇ ಇಸವಿ ಏಪ್ರಿಲ್ ೧೭ನೇ ತಾರೀಕಿನ ನಂಬ್ರ ೨೦೧೮ ಫೈನೆನ್ಶಲ್ ನಿರ್ಣಯದ ಪ್ರಕಾರ ೧೫೦ ರೂಪಾಯಿ ವರೆಗೆ ಮನಿ ಆರ್ಡರ್‌ಗಳು ಕೊಡೋಣಾದಾವು.

ಜಿಲ್ಲೆಗಳು	ಆಫಿಸ್	ಮನಿ ಆರ್ಡರ್ ಏಜೆಂಟಗಳ ಹೆಸರು
ನೆಲ್ಲೂರು	ನೆಲ್ಲೂರು	ಮದುಪಳ್ಳಿ ಶೇಷಗಿರಿರಾವ್
ಉತ್ತರ ಆರ್ಕಾಟ್	ಚಿತ್ತೂರ್	ಟಿ. ಇ. ಸ್ಪ್ರೆನ್ಸಿ
ಸೇಲಮ್	ಸೇಲಮ್	ಪ. ನಾಯನ್
ದಕ್ಷಿಣ ಆರ್ಕಾಟ್ .	ಕಡಲೂರು	ಚೊಟಿಲರ್ ವೆಂಕಟರಾಮಯ್ಯರ್
ದಕ್ಷಿಣ ಕನ್ನಡ . . .	ಮಂಗಳೂರು . .	ಸಾಮುವೇಲ್ ಬೊಲ್
	ಉಡುಪಿ	ಗೊ. ನಾರಾಯಣರಾವ್
ತಂಜಾವೂರ್ . . .	ತಂಜಾವೂರ್ . . .	ಸುಂದರಮ್ ಪಿಳ್ಳೆ
ತ್ರಿನವಳ್ಳಿ	ತ್ರಿನವಳ್ಳಿ	ಎಚ್. ಎ. ಗ್ರೆಹೆಮ್
ತಿರುಚಿನಾಪಳ್ಳಿ . .	ತಿರುಚಿನಾಪಳ್ಳಿ . .	ಮು. ಕುಂದಸ್ವಾಮಿ ಪಿಳ್ಳೆ
ತ್ರವಂಕೋರ. . . .	ತ್ರವಂದ್ರಮ್ . . .	ವ. ಪದುಮನಾಭ ಮೊದಲಿ
ವಿಶಾಖಪಟ್ಣ . . .	ವಿಶಾಖಪಟ್ಣ . . .	ತೆಕ್ಕುಮುಲ್ಲ ಶ್ರೀನಿವಾಸ ರಾವ್
ಕಲ್ಕತ್ತ	ಚೀಫ್ ಆಫಿಸ್	
ಮುಂಬಾಯಿ . . .	ಸದರ್	

ಮೇಲಿನ ಪಟ್ಟಿಯಿಂದ ತೋರುವ ಪ್ರಕಾರ ಈ ಜಿಲ್ಲೆಯ ಏಜೆಂಟರಾದ ಮಾಸ್ತರ್ ಬೊಲ್ ಸಾಹೇಬರ ಆಫಿಸಿನಲ್ಲಿ ಖಚೇರಿ ಇರುವ ಪ್ರತಿ ದಿವಸ ಮಧ್ಯಾನ್ನ ೧೧ ಘಂಟೆ ಲಾಗಾಯಿತು ೩ ಘಂಟೆ ವರೆಗೆ ಸದರಿ ಹುಂಡಿಗಳು ಕೊಡೋಣಾದಾವು. ಮತ್ತು ವಟಾಯಿಸುವಣಾದಾವು. (From S. C. Gazette.)

ಒಬ್ಬ ಹಿಂದು ಸನ್ಯಾಸಿಯ ಕಥೆ.

ತಮಿಳ್ ದೇಶದಲ್ಲಿ ಮದೂರ ಎಂಬ ಪಟ್ಣವು ಉಂಟು. ಅದರ ಹತ್ತರ ಇರುವ ಒಂದು ಗ್ರಾಮದಲ್ಲಿ ಜೋಗಪ್ಪನೆಂಬ ಒಬ್ಬ ಗೌಡನು ಇರುತ್ತಿದ್ದನು. ಅವನ ಮತವು ಶೈವಮತವು. ಅವನು ಯೌವನ ಪ್ರಾಯದಲ್ಲಿ ಒಬ್ಬ ಗುರುವಿನ ಶಿಷ್ಯನಾಗಿದ್ದು ರುದ್ರಾಕ್ಷಿಯ ಸರಗಳನ್ನು ತಲೆಗೂ ಕುತ್ತಿಗೆಗೂ ಸೊಂಟಕ್ಕೂ ಹಾಕಿ ಕೊಂಡು ಪರಿಶುದ್ಧನೆಂತಾದನು. ಕೆಲವು ವರುಷಗಳ ಹಿಂದೆ ಪ್ರಖ್ಯಾತಿ ಹೊಂದಿದ ಒಂದು ಪುರಾಣ ಓದುವಾಗ ಅವನಿಗೆ ಕಾಣ ಬಂದದ್ದೇನಂದರೆ: ತನ್ನ ಸ್ವಂತ ಗ್ರಾಮದಲ್ಲಿರುವ ಗುಡಿಯ ಮೂಡ ಬಾಗಲ ಮುಂದೆ ಬಹಳ ಆಳವಾಗಿರುವ ಒಂದು ತೀರ್ಥವಿರುವ ಭಾವಿಯುಂಟು. ಇದರ ನೀರು ಪಾಪ ತೊಳದು ತೆಗಿಯುವದಕ್ಕೆ ಬಹಳ ಶಕ್ತಿಯುಳ್ಳದ್ದು ಎಂದು, ಅಂಥಾ ದೊಡ್ಡ ಉಪಕಾರ ಬ್ರಾಹ್ಮಣರು ಮೊದ

ಲಾದವರಿಗೆ ದೊರಕ ಬೇಕೆಂದು ನಿರ್ಣಯ ಮಾಡಿ, ಆ ಸ್ಥಳದಲ್ಲಿ ೩೫ ಮೊಳ ಉದ್ದ ೩೫ ಮೊಳ ಅಗಲವಾಗಿ ಒಂದು ಕೆರೆಯನ್ನು ಅಗಿಸ ತೊಡಗಿದನು. ಅವನ ಸ್ವಂತ ಆಸ್ತಿ ಖರ್ಚಿಗೆ ಸಾಲದೆಂದು ನೋಡಿ ತನ್ನ ಪುಣ್ಯಕೃತ್ಯವನ್ನು ಪೂರೈಸುವದಕ್ಕಾಗಿ ಹಣವನ್ನು ಬೇಡುವ ಬಗ್ಯೆ ಅನೇಕ ತರದ ದೇಹದಂಡಣೆಯನ್ನು ನಡಿಸುವದಕ್ಕೆ ಆರಂಭಿಸಿದನು. ಕಾವಿಶಾಟಿ ತೊಟ್ಟು ಕೊಂಡು, ಹೆಂಡತಿಯನ್ನು ತಳ್ಳಿ ಬಿಟ್ಟು, ದಿನಕ್ಕೆ ಒಪ್ಪತ್ತುಕದನ್ನ ಭೋಜನ ಮಾಡುತ್ತಿದ್ದನು. ಸುತ್ತಲೂ ಮೊನೆಗಳ ಮೊಳೆಯಿರುವ ಕಬ್ಬಿಣದ ಗೂಡು ಮಾಡಿಸಿ, ದಂಡಣೆಗಾಗಿ ಕುತ್ತಿಗೆಯ ಸುತ್ತಲೂ ತಲೆಯ ಮೇಲೆ ಸಹಾ ತೊಡ ಕೊಂಡನು. ಪುಣ್ಯ ತೀರ್ಥ ಸ್ಥಳಗಳಿಗೆ ಯಾತ್ರೆ ಮಾಡಿ ಎಲ್ಲಿಯಾದರೂ ತೇರು ಎಳಿಯುವಾಗ ಅದರ ಹಿಂದಕಡೆ ಹೊರಳಾಡಿ, ಮೈಮೇಲೆ ವಿಭೂತಿ ಧರಿಸಿ, ಈ ಪ್ರಕಾರ ಎಲ್ಲಾ ತರದ ಪುಣ್ಯಕೃತ್ಯಗಳನ್ನು ನಡಿಸುತ್ತಾ ಬಂದನು. ಜನರು ಅವನಿಗೆ ದೇವರೆಂದು ಪೂಜ್ಯತ್ವ ಕೊಟ್ಟರು. ಹೀಗೆಯೇ ಬೇಡುತ್ತಾ ಯಾತ್ರೆ ಮಾಡುತ್ತಾ ಇರುವಾಗ ಒಂದಾನೊಂದು ದಿವಸ ಬಹಳ ಕೀರ್ತಿ ಹೊಂದಿದ ಒಬ್ಬ ಪಂಡಿತನು ರಚಿಸಿದ ಪದವನ್ನು ಕೇಳುವ ಹಾಗೆ ಆಯಿತು. ಧರ್ಮ ಹೊಂದುವವನಿಗಿಂತ ಕೊಡುವವನು ಪುಣ್ಯ ಕಟ್ಟಿ ಕೊಳ್ಳುತ್ತಾನೆ ಎಂದು ಆ ಪದದ ತಾತ್ಪರ್ಯವಿತ್ತು. ಅದನ್ನು ಮನಸ್ಸಿಗೆ ತಂದು ಇನ್ನು ಮುಂದೆ ಬೇರೊಬ್ಬರ ಧರ್ಮವಿಲ್ಲದೆ ಸ್ವಂತ ಖರ್ಚು ಮಾಡಿ ಈ ಕೆರೆಯನ್ನು ಕಟ್ಟಿಸುತ್ತೇನೆ. ಮತ್ತೆ ಪುಣ್ಯವೆಲ್ಲಾ ತನ್ನದಾಗಿರುವದೆಂತ ಹೇಳಿದನು. ಅವನ ಹತ್ತರ ಹಣ ಬಹಳವಿಲ್ಲದಿದ್ದರೂ ಪ್ರಯತ್ನ ಮಾಡದೆ ಬಿಡಲಿಲ್ಲ.

ತದನಂತರ ಜೋಗಪ್ಪನು ಒಂದು ದಿನ ತನ್ನ ಕಬ್ಬಿನ ತೋಟದ ಪ್ರಥಮ ಫಲದ ರಸವನ್ನು ಕುದಿಸಿ ಬತ್ತಿಸಿ, ಅದು ವಿಶೇಷ ಕಾಣಿಕೆಯಾಗಿ ಗುಡಿಗೆ ತರುವಾಗ, ಅಲ್ಲಿರುವ ಅರ್ಚಕನು ಆ ರಸದಿಂದ ಕೆಲವು ವಿಗ್ರಹದ ತಲೆಯ ಮೇಲೆ ಹೊಯಿದು ಮಿಕ್ಕಾದ್ದೆಲ್ಲಾ ತಾನು ಕುಡಿದು, ಬ್ರಾಹ್ಮಣರು ನಿಜವಾಗಿ ದೇವರುಗಳೇ ಎಂದು ಹೇಳಿದನು. ಇದರಿಂದ ವಿಗ್ರಹಗಳ ಮೇಲಿರುವ ಅವನ ನಂಬಿಕೆ ಬಹಳ ಕಡಿಮೆಯಾಯಿತು. ಆ ದಿನ ವರೆಗೆ ಮಾಡಿ ಬಂದ ಕರ್ಮಗಳನ್ನೆಲ್ಲಾ ಬಿಟ್ಟು ಬಿಟ್ಟು ರುದ್ರಾಕ್ಷೆಮಣಿಗಳ ಸರಗಳನ್ನು ತೆಗದು ಹಾಕಿ, ಕಾವಿಬಟ್ಟೆಯನ್ನು ಹರದು ಬಿಸಾಡಿದನು. ಈ ಮೇರೆಗೆ ಆ ಪರಿಯಂತ್ರ ತಾನು ನಡದು ಬಂದ ಕೃತ್ಯಗಳೆಂಬ ಕತ್ತಲೆಯೊಳಗೆ ಮೊದಲನೇ ಸಾರಿ ಬೆಳಕಿನ ಕಿರಣ ಬಂತು. ಆ ತರುವಾಯ ತನ್ನ ಗ್ರಾಮದಲ್ಲಿರುವ ಉಪದೇಶಕನ ಪರಿಚಿತಿ ಮಾಡಿ ಕೊಂಡು ಅವನಿಂದ ಕ್ರೈಸ್ತಪುಸ್ತಕಗಳನ್ನು ಹೊಂದಿ ಓದಲಾರಂಭಿಸಿದನು. ಕ್ರಮೇಣವಾಗಿ ತನ್ನ ಮುಂಚಿನ ಮತದ ಮೇಲಿರುವ ವಿಶ್ವಾಸ ಕುಂದುತ್ತಾ ಕುಂದುತ್ತಾ ಬಂತು. ಆದಾಗ್ಯು ತಾನು ಮಾಡುವ ಕೆಲಸದ ವಿಷಯವಾಗಿ ದೇವರ ಮುಂದೆಯೂ ಮನುಷ್ಯರ ಮುಂದೆಯೂ ಆಚರಿಸಿದ ವ್ರತ ಭಂಗಿಸಿದರೆ, ದೊಡ್ಡ ಪಾಪ ಬಂದೀತು, ಕೆರೆಯನ್ನು ಕಟ್ಟಿಸುವದು ಮುಗಿಸುವದಕ್ಕಿಂತ ಮುಂಚೆ ಕಬ್ಬಿಣದ ಗೂಡನ್ನು ತಲೆಯಿಂದಲೂ ಕುತ್ತಿಗೆಯಿಂದಲೂ ತೆಗಿಯುವದಿಲ್ಲ ಎಂತ ಹೇಳಿ ಕೆರೆ ಕಟ್ಟಿಸುವದನ್ನು ಬಿಡಲಿಲ್ಲ. ಇದನ್ನು ತೀರಿಸುವ ಬಗ್ಯೆ ಕೆಲವು ಆಸ್ತಿಯನ್ನು ಮಾರಿ ಬಿಟ್ಟು ಸಾಲವನ್ನು ತೆಗದು ಕೊಂಡನು. ಆದಾಗ್ಯೂ ಅದನ್ನು ಮುಗಿಸುವದಕ್ಕಿಂತ ಮುಂಚೆ ಬಹಳ ಹೊತ್ತು ಅದರಿಂದ ತನಗೆ ಬರುವ ಪುಣ್ಯವು ಏನಿಲ್ಲ ಎಂದು ತಿಳ ಕೊಂಡನು. ಹೊಸ ಒಡಂಬಡಿಕೆಯನ್ನು ಫಳಿಸಿ ಕೊಂಡು ಅದನ್ನು ಬಹಳ ಪ್ರೀತಿ ಮಾಡಿ ಜಾಗ್ರತೆಯಾಗಿ ಓದುತ್ತಾ ಬಂದನು. ಯೇಸು

ಕ್ರಿಸ್ತನು ಮನುಷ್ಯರಿಗೋಸ್ಕರ ಅರ್ಪಿಸಿದ ಬಲಿಯ ವಿಷಯವನ್ನು ಹೆಚ್ಚು ಸ್ಪಷ್ಟವಾಗಿ ತಿಳಿಯ ಮಾಡುವ ಹಾಗೆ ಪಾದ್ರಿಗಳ ಹತ್ತರ ಹೋಗಿ ಮಧ್ಯರಾತ್ರೆ ತನಕ ಅವರ ಮಾತು ಆಲೈಸಿದನು. ಈಗ ದೇವರ ವಾಕ್ಯದ ಪೂರ್ಣ ಪುಸ್ತಕ ತನಗೆ ಬೇಕೆಂದು ಹೇಳಿ ಒಂದು ಪ್ರತಿ ಕೊಂಡು ಕೊಂಡು ಕಣ್ಣೀರು ಸುರಿಸುತ್ತಾ ಯೇಸು ಕ್ರಿಸ್ತನ ಕಥೆಯನ್ನು ಓದಿದನು. ಹೆಚ್ಚು ಬೋಧನೆ ಹೊಂದುವ ಹಾಗೆ ಉಪದೇಶಕರ ಹತ್ತರ ಬರುತ್ತಾ ದೇವರ ವಾಕ್ಯದ ಆಜ್ಞೆಯ ಮೇರೆಗೆ ಸಬ್ಬತು ದಿವಸವನ್ನು ಪರಿಶುದ್ಧ ದಿನದಂತೆ ಆಚರಿಸುತ್ತಾ ಇದ್ದನು. ಆದರೆ ದಂಡಣೆಯ ಕರಣವಾಗಿರುವ ಗೂಡು ಇನ್ನೂ ತಲೆಯ ಮೇಲೆ ಇತ್ತು. ಸನ್ ೧೮೬೬ನೇ ಇಸವಿಯ ಮೇ ತಿಂಗಳಲ್ಲಿ ಕೆರೆಯ ದಂಡೆಯನ್ನು ಕಡೆದ ಕಲ್ಲುಗಳಿಂದ ಕಟ್ಟಿಸಿ ಸುತ್ತಲೂ ಗೋಡೆಯನ್ನು ಹಾಕಿಸಿ ಪವಿತ್ರ ನೀರಿಗೆ ಇಳಿದು ಹೋಗುವ ಪಾವಟಿಗೆಗಳನ್ನು ಇಡಿಸಿ ಕೆರೆಯ ಕೆಲಸವನ್ನು ಮುಗಿಸಿದನು.

ಬ್ರಾಹ್ಮಣರು ಮುಂಚೆ ನಿಶ್ಚೈಸಿದ್ದು ಈ ಕೆಲಸ ತೀರುವಾಗ ಜೋಗಪ್ಪನ ಹೆಸರಿಗಾಗಿ ಒಂದು ಉತ್ಸಹ ಮಾಡಿ, ಅವನನ್ನು ಹೂಗಳಿಂದ ಅಲಂಕರಿಸಿ ಪಾಲಕಿಯಲ್ಲಿ ಕುಂಡ್ರಿಸಿ, ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ, ತರುವಾಯ ಕಬ್ಬಿಣದ ಪಿಂಜರವನ್ನು ತೆಗಸಿ ಅದನ್ನು ಪರಿಶುದ್ಧ ವಸ್ತುವಿನಂತೆ ಭಂಡಾರದಲ್ಲಿ ಇಟ್ಟು ಕೊಳ್ಳ ಬೇಕು ಎಂದು ನಿರ್ಣಯ ಮಾಡಿದರು. ಆದರೆ ಇವನು ಇಂಥಾ ಮಾನಗಳನ್ನು ತ್ಯಜಿಸಿ ಮರೆಯಾಗಿ ಒಬ್ಬ ಕಮ್ಮಾರನ ಹತ್ತರ ಹೋಗಿ ಎಂಟು ವರುಷಗಳ ಪರಿಯಂತರ ತನ್ನ ತಲೆಯನ್ನು ಮುಚ್ಚಿ ಕೊಂಡ ಆ ಗೂಡನ್ನು ಬಿಚ್ಚಿಸಿ ಒಂದು ಪೆಟ್ಟಿಗೆಯಲ್ಲಿ ಇಟ್ಟು ಕೊಂಡು, ಪಾದ್ರಿ ಸಾಹೇಬರ ಹತ್ತರ ಹೋಗಿ ಕೊಟ್ಟು, ತಾನು ಈಗ ಕ್ರೈಸ್ತನೆಂದು ಎಲ್ಲರ ಮುಂದೆ ಪ್ರಕಟವಾಗಿ ಅರಿಕೆ ಮಾಡಿದನು. ನೆಂಟರೂ ಬೇರೆ ಬ್ರಾಹ್ಮಣರೂ ಹೆಸರು ಹೊಂದಿದ ಒಬ್ಬ ಗುರು ಸಹಾ ಇದನ್ನು ಕೇಳುವಾಗ ಅವನನ್ನು ಬೆದರಿಸಿ, ಶಪಿಸಿ, ಬೈದು, ಅವನ ಬುದ್ಧಿಯನ್ನು ತಿರಿಗಿಸುವದಕ್ಕೆ ಪ್ರಯತ್ನ ಮಾಡಿದರು. ಆದರೆ ಇವನು ಬಂಡೆಯ ಹಾಗೆ ನಿಶ್ಚಲನಾಗಿ ಇದ್ದಾನೆ. ೨-೩ ವರುಷಗಳ ಹಿಂದೆ ಹಿಂದು ಜನರೊಳಗೆ ಸುವಾರ್ತೆಗೆ ವಿರೋಧವಾಗಿ ಕಠಿಣವಾದ ಶತ್ರುವಾಗಿದ್ದು, ಈಗ ಘಟ್ಟಿಗನಾದ ಸಹಾಯಕನಾಗಿ, ಮುಂಚೆ ತಾನು ಕೆಡಿಸಿ ಕೊಂಡ ವಿಶ್ವಾಸವನ್ನು ತಾನೇ ಸಾರುತ್ತಾನೆ. ಅದು ಅವನು ಹೆಚ್ಚು ಪ್ರೀತಿ ಮಾಡುವ ದಿನಾಲೂ ಓದುತ್ತಿರುವ ಗ್ರಂಥವು ಸುವಾರ್ತೆಯ ಪುಸ್ತಕವೇ. ಪಾದ್ರಿಗಳಿಂದ ಹಣವನ್ನು ಹೊಂದದೆಯೂ ಬಯಸದೆಯೂ ಇರುವದರಿಂದ ಹೊಟ್ಟೆಗೋಸ್ಕರ ಕ್ರೈಸ್ತನಾದನೆಂತ ಹಿಂದು ಜನರು ಮನಃಪೂರ್ವಕ ಹೇಳಲಾರರು.

---

೧. ನಾನೀಗ ಭದ್ರರೇವಿನಲ್ಲಿ
ತಂದಿಟ್ಟೆ ನನ್ನ ಹಡಗ;
ಕ್ರಿಸ್ತೇಸುರಕ್ತಛಾಯದಲ್ಲಿ
ಹಾಕಿಟ್ಟೆ ನನ್ನ ಲಂಗರ.
ಭೂಪರಲೋಕ ಬಿದ್ದರು,
ನಾನೇನು ಭಯ ಪಡೆನು.

೨. ಯೆಹೋವನನುಗ್ರಹವನ್ನು
ಯಾರಾರು ಶೋಧಿಸಾರರು;
ಆ ಅನುಗ್ರಹ ಪಾಪಿಯನ್ನು
ಕಟಾಕ್ಷಿಸೋದು ನಿತ್ಯಕು.
ಪಾಪಿಷ್ಠನೆಡವಿದರು,
ದಿವ್ಯಾನುಗ್ರಹ ತೀರದು.

ಪಂಚಾಂಗ ಓದುವವರಿಗೆ.

ಹೊಸ ವರ್ಷವು ತನ್ನ ಸಂಗಡ ಪಾಪಿಷ್ಠನಿಗೆ ಒಂದು ಮಾತನ್ನು ತರುತ್ತದೆ, ಅದೇನಂದರೆ, "ಓ ಮಲಗುವವನೇ, ಏಳು, ಮರಣದಿಂದೇಳು." ಆಹಾ! ಪಾಪಿಯೇ, ಅಜಾಗ್ರತೆಯುಳ್ಳ ಪಾಪಿಯೇ, ನಿನ್ನ ಸ್ಥಿತಿಯು ಎಷ್ಟೋ ಭಯಂಕರವಾಗಿದೆ! ನೀನು ನಿನಗೆ ಬರುವ ಮೋಸವೇನೂ ತಿಳಿಯದೆ ನಿದ್ರೆ ಹೋಗಿದ್ದೀ. ದೇವರನ್ನು ನೆನಸದೆ ವಿಷಯಲಂಪಟನಾಗಿ ಹೋದ ವರ್ಷವನ್ನು ಕಳೆದಿದ್ದೀ. ಆ ವರ್ಷದಲ್ಲಿ ನಿನ್ನ ಕಣ್ಣು ಮುಂದೆ ತೀರಿ ಹೋದ ಎಷ್ಟೋ ಜನರಲ್ಲಿ ಒಬ್ಬನ ಮರಣವನ್ನು ಕುರಿತಾದರೂ ಆಲೋಚಿಸಿ ಸ್ವಲ್ಪವಾದರೂ ಬುದ್ಧಿ ತಂದು ಕೊಳ್ಳಲಿಲ್ಲ. ಆದರೂ ಈಗ ಈ ಪಂಚಾಂಗ ಓದುವಾಗ ಅದರ ವಿಷಯ ಚಿಂತಿಸು. ಮರಣಕ್ಕೆ ಸ್ವಲ್ಪವಾದರೂ ಸಿದ್ಧವಾಗದೆ ಅದನ್ನು ಕುರಿತು ಸ್ವಲ್ಪವಾದರೂ ಚಿಂತಿಸದೆ ಇರುವ ಎಷ್ಟೋ ಮಂದಿಯ ಮೇಲೆ ಅದು ಆಕಸ್ಮಿತವಾಗಿ ಬಂದು, ತನ್ನ ಕೆಲಸವನ್ನು ತೀರಿಸುತ್ತಿರುವಾಗ ನಿನ್ನನ್ನು ಮುಟ್ಟದೆ ಸುರಕ್ಷಿತವಾಗಿ ಬಿಟ್ಟಿತು. ಆತ್ಮಿಕ ವಿಷಯಗಳನ್ನು ಕುರಿತು ಚಿಂತಿಸದ ಅದೇ ತರದ ನಿದ್ರೆಯಲ್ಲಿ ಈ ವರ್ಷವು ಸಹ ಕಳೆದು ಹೋಗ ಬಿಡುವದೇನು? ನೀನು ಏನು ನೆನಸುತ್ತೀ, ಓ ನಿದ್ರೆಗಾರನೇ? ದೇವರ ಕೋಪಾಗ್ನಿಯು ನಿನಗೆ ವಿರೋಧವಾಗಿ ಉರಿಯುತ್ತದೆ, ನೀನು ನಿತ್ಯಮರಣಕ್ಕೆ ಒಂದೇ ಹೆಜ್ಜೆ ದೂರ ಇದ್ದೀ. "ಸಮಯ ಇನ್ನು ಸಾಕು" ಎಂತ ಹೇಳಿ ಮೋಸ ಹೋಗುತ್ತೀಯಾ? ಹೋದ ವರ್ಷದಲ್ಲಿ ದೇವರು ನಿನಗೆ ಪಾಲಿಸಿದ ಕೃಪೆಗಳಿಗೂ ಬೇರೆ ಬೇರೆ ಗಂಡಾಂತರಗಳಿಂದ ನಿನ್ನನ್ನು ತಪ್ಪಿಸಿದ ಆತನ ದಯೆಗೂ ಬದಲಾಗಿ ನೀನು ತೋರಿಸುವ ಕೃತಜ್ಞತೆಯು ಇದೇನು? ನೀನು ಅವನ ದೀರ್ಘಶಾಂತಿಯನ್ನು ನಿನ್ನ ಸ್ವಪ್ರಯೋಜನಕ್ಕೆ ಉಪಯೋಗಿಸಿ ಕೊಳ್ಳದೆ ಮೋಸ ಮಾಡಿ ಕೊಳ್ಳುತ್ತೀಯೋ? ಈಗ ನಿನಗಿರುವ ಕೃಪೆಯ ದಿವಸಗಳು ಇನ್ನು ಸ್ವಲ್ಪ ಕಾಲದಲ್ಲಿ ತೀರಿ ಹೋಗ ಬಹುದು. ಮತ್ತು ಆಗ ನಿನ್ನ ಸ್ಥಿತಿಯು ಬಹು ದುಖ್ಖಕರವಾಗುವದು. ಹ್ಯಾಗಂದರೆ,

ತನ್ನ ಆತ್ಮದ ರಕ್ಷಣ್ಯವನ್ನು ಅಲಕ್ಷೆ ಮಾಡಿದವನೊಬ್ಬನು ಕೆಲವು ತಿಂಗಳ ಹಿಂದೆ ಒಂದು ಕೆಟ್ಟ ರೋಗದಲ್ಲಿ ಬಿದ್ದು ಸಾಯುವ ಸಮಯದಲ್ಲಿ ಬಹು ಭೀತಿಯುಳ್ಳವನಾಗಿ ಎಲ್ಲಿ ಸಹಾಯ ಹುಡುಕ ಬೇಕೆಂದು ತಿಳಿಯದೆ ಯಾರಾದರೂ ಒಬ್ಬ ದೇವವಾಕ್ಯಪ್ರಸಂಗಿಯನ್ನು ತಾನಿದ್ದಲ್ಲಿಗೆ ಕರತರಿಸ ಬೇಕೆಂದು ತನ್ನ ನೆಂಟರನ್ನು ಬಿನ್ನೈಸಿ ಕೊಳ್ಳಲು, ಅವರು ಆ ಪ್ರಕಾರ ಮಾಡಿದರು. ಪ್ರಸಂಗಿಯು ಬಂದು, ಇವನ ಸಂಗಡ ಸ್ವಲ್ಪ ಮಾತಾಡಲು ಪ್ರತ್ಯುತ್ತರ ಶಿಕ್ಕದ್ದು ನೋಡಿ ವ್ಯಸನ ಪಟ್ಟು, ಹೇಳಿದ್ದೇನಂದರೆ: "ನೀನು ಬಹು ದೊಡ್ಡ ಪಾಪಿಯು, ಆದರೆ ಯೇಸು ಪಾಪಿಷ್ಠರಿಗೋಸ್ಕರ ಸತ್ತನು, ಆತನಲ್ಲಿ ನೀನು ವಿಶ್ವಾಸಿಸುವಿಯಾ? ಇದಕ್ಕೂ ಪ್ರತ್ಯುತ್ತರವಿಲ್ಲ, ಯಾಕಂದರೆ ಅವನಿಗೆ ಆಗ ಬಾಯಿ ಬರುತ್ತಿದ್ದಿಲ್ಲ. ಪ್ರಸಂಗಿಯು ಆಗ ತನ್ನ ಬಾಯಿಯನ್ನು ಆ ಸಾಯುವವನ ಕಿವಿಯ ಹತ್ತರಕ್ಕೆ ತಕ್ಕೊಂಡು ಹೋಗಿ ಪಾಪವನ್ನೂ ರಕ್ಷಣೆಯನ್ನೂ ಕುರಿತು ಮಾತಾಡಿದನು; ಆದರೂ ಪ್ರಯೋಜನಕ್ಕೆ ಬೀಳಲಿಲ್ಲ, ಯಾಕಂದರೆ ಆಗ ಆ ಬಡ ಪ್ರಾಣಿಗೆ ಶ್ರೋತ್ರೇಂದ್ರಿಯದ ಸಹಾಯವು ಇದ್ದಿಲ್ಲ. ಇದಕ್ಕೆ ಪ್ರಸಂಗಿಯು ಬ


ಹು ವಿಸ್ಮಯ ಪಟ್ಟು, ದೇವರ ವಾಕ್ಯದ ಪುಸ್ತಕವನ್ನು ತೆರದು ದೇವರು ಯೇಸು ಕ್ರಿಸ್ತನ ಮುಖಾಂತ್ರವಾಗಿ ನಮಗೆ ಮಾಡಿದ ಕೃಪೆಯ ವಾಗ್ದತ್ತಗಳಲ್ಲಿ ಒಂದರ ಹಿಂದೆ ಒಂದನ್ನು ತೋರಿಸುವಷ್ಟರಲ್ಲಿ ಅವನು ಪ್ರಾಣ ಬಿಟ್ಟನು. ಈ ಮರಣವು ಪೂರ್ಣ ದುಖ್ಖಕರವಾದದ್ದೇ.

ಆದ್ದರಿಂದ ಅಜಾಗ್ರತೆಯುಳ್ಳ, ತಡ ಮಾಡುವ ದುಷ್ಟ ಪ್ರಾಣವೇ, ಇನ್ನೂ ಸಮಯವಿರುವಾಗಲೆ ಎದ್ದು ನಾಶವಾಗದಂತೆ ನೋಡಿಕೊ. ಕ್ರಿಸ್ತನು ನಿನಗಾಗಿ ಕಾದು ಕೊಂಡು ಇದ್ದಾನೆ. ಪರಿಶುದ್ಧ ಆತ್ಮನು ನಿನ್ನನ್ನು ಉಜ್ಜೀವಿಸುವದಕ್ಕೂ ನಿನ್ನ ಹೃದಯವನ್ನು ಬೆಳಗಿಸುವದಕ್ಕೂ ಸಿದ್ಧವಾಗಿದ್ದಾನೆ. ಯೇಸುವಿನ ಕೃಪೆಯನ್ನು ಹುಡುಕು, ಪರಿಶುದ್ಧಾತ್ಮವನ್ನು ಈಗಲೇ ಬೇಡಿಕೊ. ಮಾನಸಾಂತರ ಪಟ್ಟು ವಿಶ್ವಾಸಿಸಿ ಎಂದೆಂದಿಗೂ ಬಾಳು. ಮನಃಪೂರ್ವಕವಾಗಿ ರಕ್ಷಣ್ಯವನ್ನು ಹುಡುಕುತ್ತಾ ಈ ಹೊಸ ವರ್ಷವನ್ನು ಆರಂಭಿಸು. ನಿತ್ಯಜೀವವನ್ನು ಹುಡುಕುವದಕ್ಕೆ ಇದು ತಕ್ಕ ಸಮಯವೇ. ಇನ್ನು ನಿದ್ರೆ ಮಾಡ ಬೇಡ. ಅಂಧಕಾರದಿಂದ ಬೇಗ ಪ್ರತ್ಯೇಕವಾಗು.

ದೊಡ್ಡವರು ಚಿಕ್ಕವರಿಂದ ಬುದ್ಧಿ ಕಲಿಯುತ್ತಾರೆ.

"ಬಾಲಕರ ಪೊಲೆ ಕೂಸುಗಳ ಬಾಯಿಯೊಳಗಿಂದ ಹೊಗಳಿಕೆಯನ್ನು ಸಿದ್ಧ ಮಾಡಿ ಕೊಂಡಿ." ಮತ್ತಾ. ೨೧, ೧೬.

ಜರ್ಮನೀ ದೇಶದಲ್ಲಿರುವ ಒಬ್ಬ ಐಶ್ವರ್ಯವಂತನ ತೋಟದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಬಡ ಆಳಿಗೆ ಒಬ್ಬ ಮಗಳಿದ್ದಳು. ಈ ಚಿಕ್ಕ ಕೂಸನ್ನು ದೇವವಾಕ್ಯದಲ್ಲಿ ಬೋಧಿಸುವದರಲ್ಲಿ ಅವಳ ತಂದೆಯು ಬಹಳ ಪ್ರಯತ್ನ ಪಡುತ್ತಿದ್ದನು. ಇವಳಿಗೆ ಸುಮಾರು ೫ ವರ್ಷವಾದಾಗ ಆ ಆಳಿನ ಧನಿಯು ಒಂದು ದಿವಸ ನೋಡಿ ಬಹಳ ಸಂತೋಷ ಪಟ್ಟು, ಇನ್ನೊಂದು ಸಾರಿ ತಾನು ಆ ಹುಡುಗಿಯನ್ನು ನೋಡ ಬೇಕೆಂದು ಹೇಳಲು, ಒಂದು ದಿವಸ ಮಗುವನ್ನು ಕರಕೊಂಡು ಆ ಆಳು ತನ್ನ ಧನಿಯ ಮನೆಗೆ ಬಂದನು. ಆಗ ಆ ಐಶ್ವರ್ಯವಂತ ಧೊರೆಯು ತನ್ನ ಸ್ನೇಹಿತರನ್ನು ಕೂಡಿ ಕೊಂಡು ಊಟ ಮಾಡುತ್ತಿದ್ದನು. ಹುಡುಗಿಯು ಆ ಕೋಣೆಗೆ ಬಂದದ್ದನ್ನು ನೋಡಿ ಧೊರೆಯೂ ಅವನ ಸ್ನೇಹಿತರೂ ಮೇಜಿನ ಮೇಲಿರುವ ಚಿನ್ನದ ಪಾತ್ರಗಳನ್ನೂ ಬೇರೆ ಬಹು ಬಗೆಯ ವಿಚಿತ್ರವಾದ ಒಡವೆಗಳನ್ನು ನೋಡಿ ಇವಳು ಏನು ಹೇಳುವಳೋ ಎಂದು ಆತುರದಿಂದ ಕಾದು ಕೊಂಡಿರಲು, ಮಗುವು ಆ ಒಡವೆಗಳೆಲ್ಲಾದರ ಮೇಲೆಯೂ ಬಹು ಅಲಕ್ಷೆಯಿಂದ ನೋಡಿ "ಯೇಸುವೇ, ನಿನ್ನ ರಕ್ತವೂ ನೀತಿಯೂ ನನಗೆ ಆಭರಣವೂ ವಸ್ತ್ರಭೂಷಣವೂ ಆಗಿವೆ; ಶುದ್ಧವಾದ ಇವನ್ನು ನನ್ನ ಮೇಲೆ ತಕ್ಕೊಂಡು, ನಿರ್ಭೀತಿಯಿಂದ ನಿನ್ನ ಸಿಂಹಾಸನದ ತೇಜಸ್ಸನ್ನು ನೋಡುವೆನು" ಎಂದು ಹೇಳಲು, ಅಲ್ಲಿ ಕೂಡಿದವರೆಲ್ಲರೂ ಇಷ್ಟು ಚಿಕ್ಕ ಕೂಸಿನಲ್ಲಿ ಇಷ್ಟು ಭಕ್ತಿ ವಿಶ್ವಾಸವನ್ನು ಕಂಡದ್ದಕ್ಕಾಗಿ ಆಶ್ಚರ್ಯ ಪಟ್ಟು ನಾಚಿ ಕೊಂಡು ಮೌನವಾದರು. ಆಗ ಆ ಮನೆಯ ಯಜಮಾನನು ಹೇಳಿದ್ದೇನಂದರೆ: "ಆಹಾ! ಭಾಗ್ಯವುಳ್ಳ ಮಗುವೇ! ನಿನಗಿಂತಲೂ ನಾವು ಎಷ್ಟೋ ಕೆಳಗೆ ಇದ್ದೇವೆ!"



ಆನೆಯು.


ಆನೆಯು ಎಲ್ಲ ಮೃಗಗಳಲ್ಲಿ ಬಲವೂ ಬುದ್ಧಿಯೂ ಉಳ್ಳದ್ದು. ಹಿಂದುಸ್ಥಾನದಲ್ಲಿ ಮುಂಚೆ ಬಹಳವಾಗಿದ್ದು ಈಗ ಕಡಿಮೆಯಾಗುತ್ತಾ ಬರುತ್ತವೆ. ಅವು ಗುಂಪಾಗಿ ಅಡವಿಗಳಲ್ಲಿ ಸಂಚರಿಸಿ ಎಲೆ ಹುಲ್ಲುಗಳಿಂದ ಬದುಕುವವು. ಆನೆಗಳನ್ನು ಹಿಡಿದು ಸಾಧು ಮಾಡಿದರೆ, ಅವು ಮನುಷ್ಯನಿಗೆ ಬಹು ಸಹಾಯಕ್ಕೆ ಬೀಳುತ್ತವೆ. ಅವು ದೊಡ್ಡ ಹೊರೆಗಳನ್ನು ಹೊತ್ತು ಕೊಂಡು, ಮಾರ್ಗವಿಲ್ಲದ ಅಡವಿಯಿಂದ ಮರಗಳನ್ನು ನದೀ ತೀರಕ್ಕೆ ವೈದು ತಮ್ಮ ಕೆಲಸವೆಲ್ಲ ಬುದ್ಧಿಯಿಂದ ಮಾಡುವವು. ಮುಂಚಿನ ಕಾಲದಲ್ಲಿ ಅವುಗಳನ್ನು ಯುದ್ಧಕ್ಕೆ ಸಹ ಪ್ರಯೋಗಿಸಿದರು. ಈಗಲೂ ಹಿಂದುಸ್ಥಾನದ ಅರಸರೂ ಐಶ್ವರ್ಯವಂತ ಪ್ರಭುಗಳೂ ಅವುಗಳಲ್ಲಿ ಸವಾರಿ ಮಾಡುವ ಪದ್ಧತಿ ಉಂಟು.

ಆನೆಯ ಜಾಯಮಾನದ ಬುದ್ಧಿಯನ್ನು ಕುರಿತು ಕೆಲವು ಸಂಗತಿಗಳನ್ನು ಕೇಳುವಾ. ಬಂಗಾಳದಲ್ಲಿ ಅನೇಕ ಧೊರೆಗಳು ಊಟಕ್ಕೆ ಕೂತಿದ್ದರು. ಊಟ ಆದನಂತರ ಮನೇ ಯಜಮಾನನ ಎಳೆ ಆನೆ ಒಳಗೆ ಬಂದು, ಮೇಜಿನಲ್ಲಿ ಕೂತವರ ಕೈಯಿಂದ ಮಿಠಾಯಿ ತಿನ್ನುತ್ತಿತ್ತು. ಅವರಲ್ಲಿ ಒಬ್ಬನು ಅದಕ್ಕೆ ಏನೂ ಕೊಡದೇ ಮೂಗು ಹೊಡೆದನು. ಆನೆ ಸುಮ್ಮಗೆ ಹೊರಗೆ ಹೋಗಿ, ಕಠಿಣವಾಗಿ ಕಚ್ಚುವಂಥಾ ಕಪ್ಪು ಇರುವೆಗಳಿಂದ ತುಂಬಿದ ಒಂದು ಮರದ ಗೆಲ್ಲು ಮುರಿದು, ತಿರಿಗಿ ಬಂದು ಗೆಲ್ಲು ಆ ಧೊರೆಯ ತಲೇ ಮೇಲೆ ಅಲ್ಲಾಡಿಸಿ ಪುಷ್ಕಲ ಇರುವೆಗಳು ಅವನ ಮೇಲೆ ಬೀಳುವ ಹಾಗೆ ಮಾಡಿತು.

ಬೇರೊಂದು ಊರಲ್ಲಿ ಒಂದು ಆನೆ ದಿನಾಲು ನೀರಿಗೆ ಹೋಗುವಾಗ ದಾರಿಯಲ್ಲಿ ಜನರ ಕೈಯಿಂದ ತೆಂಗಿನ ಕಾಯಿಯಾಗಲೀ ಬೇರೆ ಯಾವ ಪದಾರ್ಥವಾಗಲೀ ಶಿಕ್ಕುವ ಹಾಗೆ

ನೋಡಿ. ಒಬ್ಬ ದರ್ಜೀ ಹತ್ತರ ಸಹ ಬಂತು. ಇವನು ಏನೂ ಕೊಡದೆ, ಆನೆಯ ಸೊಂಡಿಲನ್ನು ಚುಚ್ಚಿದನು. ಆನೆ ನೀರಿಗೆ ಹೋಗಿ ಬರುವಾಗ, ಅಲ್ಲಿ ಸೊಂಡಿಲಲ್ಲಿ ಹೀರಿ ತಂದ ನೀರನ್ನು ದರ್ಜಿಯ ಮೇಲೆ ಹೊಯ್ದು, ಅವನನ್ನು ಈ ಪ್ರಕಾರ ಶಿಕ್ಷಿಸಿತು.

ಒಮ್ಮೆ ಜಾತ್ರೆಯ ಸಮಯದಲ್ಲಿ ಒಂದು ಕೂಸು ಮಾರ್ಗದ ಹತ್ತರ ಬಿಡಲ್ಪಟ್ಟಿತ್ತು. ಬಿಸಲು ತಾಗಿ ಹುಳಗಳು ಬಹಳವಾಗಿ ಕಚ್ಚುವದರಿಂದ ಅದು ಘಟ್ಟಿಯಾಗಿ ಕೂಗುತ್ತಿತ್ತು. ಆಗ ಆ ದಾರಿಯಲ್ಲಿ ಬರುವ ಒಂದು ಆನೆಯು ಕೂಸಿನ ಕೂಗನ್ನು ಕೇಳಿ, ಹತ್ತರ ಹೋಗಿ,



ಒಂದು ಗೆಲ್ಲು ಮುರಿದು, ಹುಳಗಳನ್ನು ಓಡಿಸಿ, ಕೂಸಿನ ತಾಯಿ ಬಂದು ಅದನ್ನು ಪರಾಮರಿಸುವ ತನಕ ಅಲ್ಲೇ ನಿಂತಿತು.

ಲಂಕ ದ್ವೀಪದಲ್ಲಿ ಅಪರೂಪವಾದ ಒಂದು ತರದ ಆನೆಗಳು ಅವೆ. ಅವು ಯಾವ ಕಾರಣದಿಂದಾದರೂ ತಮ್ಮ ಗುಂಪನ್ನು ಬಿಟ್ಟು ಒಂಟಿಯಾಗಿ ಸಂಚರಿಸಿ ಜನರಿಗೆ ಬಹು ಉಪದ್ರ ಕೊಡುವವು. ಅವು ಭಯವಿಲ್ಲದೆ ಮನೆಗಳ ಸಮೀಪಕ್ಕೆ ಸಹ ಬಂದು, ಹೊಲ ತೋಟಗಳನ್ನು ತಮ್ಮ ಪರಾಕ್ರಮವುಳ್ಳ ಕಾಲುಗಳಿಂದ ತುಳಿದು ಬಿಟ್ಟು, ಮನುಷ್ಯರ ಮೇಲೆ ಸಹ ಬೀಳುತ್ತವೆ. ಈ ತರದ ಆನೆ "ಕಳ್ಳಾನೆ" ಎಂದೆನ್ನಿಸಿ ಕೊಳ್ಳುತ್ತದೆ. ಇಂಥಾದ್ದು ಗುಂಪಿನಲ್ಲಿ ಸಂಚರಿಸುವ ಆನೆಗಳ ಸಂಗಡ ಸ್ವಲ್ಪವಾದರೂ ಸ್ನೇಹ ಮಾಡದೆ, ಇವುಗಳ ಮಧ್ಯಕ್ಕೆ ಬಂದರೆ, ಅವು ಅದನ್ನು ಹೊಡೆದು ಓಡಿಸುತ್ತವೆ.

(ಭಕ್ತೀ ಸಾರ.)

ಸ್ನಾನ, ಸಂಧ್ಯಾದಿಗಳ ಜಪ, ತಪ,
ದಾನ-ಧರ್ಮ-ಪರೋಪಕಾರದಿ
ಹೀನ ಭಾವದೊಳುಳಿವರಲ್ಲದೆ ಬೇರೆ ಗತಿಯುಂಟೇ? ||
ಏನು ಮಾಡಿದಡೇನು, ಮುಕ್ತಿಗೆ
ಜ್ಞಾನವಿಲ್ಲದೆ? ಸತ್ಯ-ಭಕ್ತಿಗೆ
ನೀನೆ ಕಾರಣನಾಗಿ, ರಕ್ಷಿಸು ನಮ್ಮನನವರತಾ! ||

ಠಸ್ಸೆತೀರ್ವೆ.

ಹುಂಡಿ ವ ಬಿಲ್ ಒಫ್ ಎಕ್ಸ್‌ಚೇಂಜ್‌ಗಳು (on demand) ಕೇಳಿದಾಗಲೇ ಹಣ ಪಾವತಿ ಮಾಡ ಬೇಕಾಗಿ ಬರೆದಿರುವ ಪಕ್ಷದಲ್ಲಿ ೨೦ ರೂಪಾಯಿಯ ಕೆಳಗೆ ಮಾಫು ಅಂದರೆ ಸ್ಟಂಪ ಹಚ್ಚ ಬೇಕೆಂಬ ಅವಶ್ಯವಿಲ್ಲ. ೨೦ ರೂಪಾಯಿಯ ಮೇಲೆ ಆದರೆ ೧ ಆಣೆ ಬಾಬತು ಮುದ್ರೆಯುಳ್ಳ ಠಸ್ಸೆಗಳಾಗಿರ ಬೇಕು.

ಆದರೆ ಒಂದು ವರ್ಷಕ್ಕೆ ಮೀರದೆ ಇರುವಂಥ ವಾಯಿದೆ ಕಾಣಿಸುವಂಥ ಹುಂಡಿಗಳಿಗೆ ಕೆಳಗೆ ಬರೆದಿರುವ ಪ್ರಕಾರವಾಗಿ ಸ್ಟಂಪ್ ಹಚ್ಚ ಬೇಕು.

					ರೂ.	ಆ.
		೧೦೦ ರೂಪಾಯಿಗೆ ಮೀರದಿದ್ದರೆ			”	೧
೧೦೦ ಕ್ಕೆ ಮೀರಿ		೨೫೦	”	”	”	೩
೨೫೦	”	೫೦೦	”	”	”	೬
೫೦೦	”	೧೦೦೦	”	”	”	೧೨
೧೦೦೦	”	೨೫೦೦	”	”	೧	೮
೨೫೦೦	”	೫೦೦೦	”	”	೩	”
೫೦೦೦	”	೧೦೦೦೦	”	”	೬	”
೧೦೦೦೦	”	೨೦೦೦೦	”	”	೧೨	”
೨೦೦೦೦	”	೩೦೦೦೦	”	”	೧೮	”
೩೦೦೦೦ಕ್ಕೆ ಮೀರಿ ಇರುವ ಪಕ್ಷದಲ್ಲಿ					೨೪	”

ಅಡವು ಮುಂತಾದ ಪತ್ರಗಳ ಠಸ್ಸೆಕಾಗದಗಳ ವಿಷಯ ಕೆಳಗೆ ಕಾಣಿಸಿ ಅದೆ.

					ರೂ.	ಆ.
		೫೦ ರೂಪಾಯಿಗೆ ಮೀರದಿದ್ದರೆ			”	೪
೫೦ ರೂಪಾಯಿಗೆ ಮೀರಿ		೧೦೦	”	”	”	೮
೧೦೦	”	೨೦೦	”	”	೧	”
೨೦೦	”	೩೦೦	”	”	೨	”
೩೦೦	”	೫೦೦	”	”	೪	”
೫೦೦	”	೭೦೦	”	”	೫	”
೭೦೦	”	೧೦೦೦	”	”	೬	”
೧೦೦೦	”	೨೦೦೦	”	”	೧೦	”
೨೦೦೦	”	೩೦೦೦	”	”	೧೫	”
೩೦೦೦	”	೫೦೦೦	”	”	೨೫	”
೫೦೦೦	”	೧೦೦೦೦	”	”	೩೫	”
೧೦೦೦೦	”	೨೦೦೦೦	”	”	೬೦	”
೨೦೦೦೦	”	೪೦೦೦೦	”	”	೧೦೦	”
೪೦೦೦೦	”	೬೦೦೦೦	”	”	೧೨೫	”
೬೦೦೦೦	”	೮೦೦೦೦	”	”	೧೫೦	”
೮೦೦೦೦	”	೧೦೦೦೦೦	”	”	೨೦೦	”

ಮತ್ತು ಮುಂದಕ್ಕೆ ಒಂದೊಂದು ಲಕ್ಷದ ಅಂಶಕ್ಕಾಗಿ ೧೦೦ ರೂಪಾಯಿ ಹೆಚ್ಚು, ಒಂದೊಂದು ಲಕ್ಷಕ್ಕಾಗಿ ೨೦೦ ರೂಪಾಯಿ ಹೆಚ್ಚು ಇತ್ಯಾದಿ.

ಕ್ರಯಚೀಟುಗಳು. ಅವುಗಳಲ್ಲಿ ಮೌಲ್ಯದ ಹಣ — ಅಥವಾ ಕೊಟ್ಟ ಹಣ

						ರೂ.	ಸ್ಟಾಂಪ್	ಬೇಕು.
			೧೦೦ ರೂಪಾಯಿಗೆ ಮೀರದಿದ್ದರೆ			೧	„	„
೧೦೦ ರೂಪಾಯಿಗೆ ಮೀರಿ			೨೦೦	„	„	೨	„	„
೨೦೦	„	„	೪೦೦	„	„	೪	„	„
೪೦೦	„	„	೮೦೦	„	„	೮	„	„
೮೦೦	„	„	೧೨೦೦	„	„	೧೨	„	„
೧೨೦೦	„	„	೨೦೦೦	„	„	೨೦	„	„
೨೦೦೦	„	„	೩೦೦೦	„	„	೩೦	„	„
೩೦೦೦	„	„	೪೦೦೦	„	„	೪೦	„	„
೪೦೦೦	„	„	೫೦೦೦	„	„	೫೦	„	„
೫೦೦೦	„	„	೭೫೦೦	„	„	೭೫	„	„
೭೫೦೦	„	„	೧೦೦೦೦	„	„	೧೦೦	„	„
೧೦೦೦೦	„	„	೨೦೦೦೦	„	„	೧೫೦	„	„
೨೦೦೦೦	„	„	೪೦೦೦೦	„	„	೨೦೦	„	„
೪೦೦೦೦	„	„	೬೦೦೦೦	„	„	೩೦೦	„	„
೬೦೦೦೦	„	„	೮೦೦೦೦	„	„	೪೦೦	„	„
೮೦೦೦೦	„	„	೧೦೦೦೦೦	„	„	೫೦೦	„	„

ಮತ್ತು ಮುಂದಕ್ಕೆ ಐವತ್ತೈವತ್ತು ಸಾವಿರ ರೂಪಾಯಿಗಾಗಿ ೨೦೦ ರೂಪಾಯಿ ಹೆಚ್ಚು. ೫೦೦೦೦ ರೂಪಾಯಿಯ ಒಂದೊಂದು ಅಂಶಕ್ಕಾಗಿ ೧೦೦ ರೂಪಾಯಿ ಹೆಚ್ಚಿನ ಸ್ಟಾಂಪ್ ಬೇಕು. ಬಿಲ್ ಒಫ್ ಲೇಡಿಂಗ್ ಎಂಬ ಪತೆಮಾರಿ ವ ಹಡಗಗಳಿಗೆ ಸಾಮಾನು ಹತ್ತಿಸಿ, ತಂಡೇಲನಿಂದ ತೆಗದು ಕೊಂಡ ರಸೀದಿಯಾದರೆ, ಒಂದೊಂದಕ್ಕೆ ೪ ಆಣೇ ಸ್ಟಾಂಪ್ ಹಚ್ಚಬೇಕು.

ಮುಬಾದಲೆ ತೆಗದು ಕೊಂಡು ವ್ಯಾಪಾರದ ಜೀನಸುಗಳನ್ನು ಸಾಗುವಳಿ ಮಾಡಲಿಕ್ಕೆ ಆಗಲಿ, ಉತ್ಪತ್ತಿ ಮಾಡಲಿಕ್ಕೆ ಆಗಲಿ, ಸಂಗ್ರಹಿಸಿ ಕೊಡಲಿಕ್ಕೆ ಆಗಲಿ, ಸಂಪಾದಿಸಿ ಕೊಡಲಿಕ್ಕೆ ಆಗಲಿ ಮಾಡುವ ಕರಾರುಗಳು ಆ ಮುಬಾದಲೆ ಕೊಟ್ಟ ಹಣಕ್ಕೆ ಅನುಸಾರವಾಗಿ ಮೇಲೆ ಅಡವು ಮುಂತಾದ ಪತ್ರಗಳ ಪಟ್ಟಿಯಲ್ಲಿ ತೋರಿಸಿದ ರೀತಿಯಾಗಿ ತಸ್ಸೆಕಾಗದದಲ್ಲಿ ಬರಿಯಬೇಕು.

ಜುರುಮಾನೆ ಆಗಲಿ ಇನಾಮು ಆಗಲಿ ಇಲ್ಲದೆ, ಬರೆ ಬಾಡಿಗೆಯ ವಿಷಯವಾದ ಭೂಮಿ ಮನೆ ಸ್ಥಿರಾಸ್ತಿಗಳ ಗೇಣಿಚೀಟುಗಳಿಗೆ ತಸ್ಸೆ ಹಚ್ಚುವ ಕ್ರಮ ಯಾವದಂದರೆ:

೧ ವರುಷದ ಬಾಬಿಗೆ			೧ ವರುಷದೊಳಗಿನ ಗೇಣಿಚೀಟಿಗೆ		೧ ವರುಷದ ಮೇಲಿನ ಗೇಣಿಚೀಟಿಗೆ	
ರೂ.		ರೂ.	ರೂ.	ಆ.	ರೂ.	ಆ.
		೨೪ಕ್ಕೆ ಮೀರದಿದ್ದರೆ	,,	೪	,,	೮
೨೪ಕ್ಕೆ ಮೀರಿ		೫೦	,, ,,	೮	,,	೧೨
೫೦	,,	೧೦೦	,, ,,	೧೨	೧	,,
೧೦೦	,,	೨೫೦	,, ೧	,,	೨	,,
೨೫೦	,,	೫೦೦	,, ೨	,,	೪	,,
೫೦೦	,,	೧೦೦೦	,, ೪	,,	೮	,,
೧೦೦೦	,,	೨೦೦೦	,, ೮	,,	೧೬	,,
೨೦೦೦	,,	೪೦೦೦	,, ೧೬	,,	೩೨	,,
೪೦೦೦	,,	೬೦೦೦	,, ೨೪	,,	೪೮	,,
೬೦೦೦	,,	೧೦೦೦೦	,, ೪೦	,,	೮೦	,,
೧೦೦೦೦	,,	೨೫೦೦೦	,, ೧೦೦	,,	೨೦೦	,,
೨೫೦೦೦	,,	೫೦೦೦೦	,, ೨೦೦	,,	೪೦೦	,,

ಮತ್ತು ಮುಂದಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಾಗಿ ಅಥವಾ ಅಂಶಕ್ಕಾಗಿ ಒಂದು ವರುಷದ ಗೇಣಿಚೀಟಾದರೆ ೧೦೦ ರೂಪಾಯಿ ಹೆಚ್ಚು, ಒಂದು ವರುಷದ ಮೇಲಿನ ಗೇಣಿಚೀಟಾದರೆ ೨೦೦ ರೂಪಾಯಿ ಹೆಚ್ಚು. ಆದರೆ ಭೂಮಿಯ ಧನಿಯೂ ಒಕ್ಕಲೂ ತಮ್ಮೊಳಗೆ ಮಾಡಿ ಕೊಂಡ ಗೇಣಿಚೀಟು ಯಥ್ರವಳ್ಳಿ ಮುಂತಾದ ಕರಾರುಗಳು ಸರಕಾರದ ಶೀರ್ವೆ ಕೊಡುವ ಭೂಮಿಯ ವಿಷಯವಾದರೆ ಠಸ್ಸೆ ಅವಶ್ಯವಿಲ್ಲ; ಆದ್ದರಿಂದ ಇಲ್ಲಿ ಮಾಮೂಲಾಗಿ ನಡಿಯುವಂಥ ಗೇಣಿಚೀಟುಗಳಿಗೆ ಠಸ್ಸೆಕಾಗದ ಬೇಡ. ಈ ಕಡೆಯಲ್ಲಿ ಭೂಮಿ ಅನುಭವಿಸುವ ಮತ್ತು ಸಾಗುವಳಿ ಮಾಡುವ ಜನರಿಗೆ ತಿಳಿಯ ಅಗತ್ಯವಾದದ್ದು ಇದೇ.

ಇತ್ಲಾಗೆ ಜಾರಿಯಲ್ಲಿ ಬಂದ ಠಸ್ಸೆ ಕಾನೂನು ಸಂಬಂಧವಾದ 1867ನೆ ಇಸವಿ XXVIನೆ ಆಕ್ಟನ್ನು ಕುರಿತು ನಮ್ಮ ಪಂಚಾಂಗ ಓದುವವರಿಗೆ ಪ್ರಯೋಜನಕರವಾದೀತೆಂಬದರಿಂದ ಅದರ ಸಾರಾಂಶವನ್ನು ಈ ಕೆಳಗೆ ಛಾಪಿಸಿ ಅದೆ.

1867ನೆ ಇಸವಿ XXVIನೆ ಆಕ್ಟಿನಿಂದ ತೆಗದ್ದು.

	ಸ್ಟಾಂಪು ಹಾಸಲು. ರೂ.	ಆ.
ಕ್ರಿಮಿನಾಲ್ ಪ್ರೊಶಿಡ್ಯೂರಿನ ಶೆಡ್ಯೂಲ್ ಪ್ರಕಾರ ಪೋಲೀಸ ಆಫೀಸರು ವಾರಾಂಟು ಶಿವಾಯಿ ಹಿಡಿಯ ಕೂಡದ ತಕ್ಷೀರುಗಳನ್ನು ಕುರಿತು ಯಾವದೊಂದು ಕ್ರಿಮಿನಾಲ್ ಕೋರ್ಟಿಗೆ ಬರ ಕೊಳ್ಳುವ ಫಿರ್ಯಾದು, ಯಾ ಅಂಥಾ ಫಿರ್ಯಾದು ಮಾಡುವ ಮನುಷ್ಯನಿಗೆ ಬರಹ ಮೂಲಕ ಮಾಡೋಣಾಗುವ ಮೊದಲನೆ ದರ್ಯಾಪ್ತಿಯು	೧	೦
೫೦ರೂಪಾಯಿ ಮೊಬಲಗಿಗಿಂತ ಕಮ್ಮಿ ಆದ ವ್ಯಾಜ್ಯದ ಬಾಬಿನಲ್ಲಿ ಪ್ರಧಾನ ಶಿವೀಲ್ ಕೋರ್ಟಲ್ಲಿದ ಯಾವ ಶಿವಿಲ್ ಕೋರ್ಟಿಗಾಗಲೀ ಸ್ಮಾಲ್ ಕೋಜ ಕೋರ್ಟಿಗಾಗಲೀ ದಾಖಲ್ ಮಾಡುವ ಯಾವದೊಂದು ಅರ್ಜಿ .	೦	೧
ಶಿವಿಲ್, ಕ್ರಿಮಿನಾಲ್, ಯಾ ರೇವನಿ ಕೋರ್ಟುಗಳಲ್ಲಿ ಬರೆದಿಡೋಣಾಗುವ ಪೈಸ್ಲೆಯ ಯಾ ಹುಕುಮಿನ ಯಾ ದಸ್ತೈವಜಿನ ಯಾ ಇವುಗಳಲ್ಲಿ ಯಾವದೊಂದರ ತರ್ಜುಮೆಯ ನಕ್ಲು ಆಪೇಕ್ಷಿಸಿ ಬರ ಕೊಳ್ಳುವ ಅರ್ಜಿ .		

	ಸ್ಟಾಂಪು ಹಾಸಲು ರೂ.	ಆ.
ಹಣವನ್ನು ವಸೂಲು ಮಾಡೋ ನಿಮಿತ್ತ ಅಥವಾ ಬಾಧ್ಯತೆಯನ್ನಾಗಲಿ ಇತರ ಪದಾರ್ಥವನ್ನಾಗಲಿ ಸ್ವಾಧೀನ ಪಡ ಕೊಳ್ಳುವ ನಿಮಿತ್ತ ಶಿವೀಲ ಕೋರ್ಟಗಳಿಗೆ ಬರ ಕೊಳ್ಳುವ ಪ್ಲೆಯಿಂಟ್ ಎಂಬ ದಾವಾ ಅರ್ಜಿ ಅಥವಾ ಅಪ್ಪಿಲ್ ಅರ್ಜಿ:		
ದಾವೇ ಮೊಬಲಗು ೧೦ ರೂಪಾಯಿಗೆ ಮೀರದಿದ್ದರೆ.......	೧	೦
" " ೧೦ ರೂಪಾಯಿಗೆ ಮೀರಿ ೧೦೦ಕ್ಕೆ ಮೀರದಿದ್ದರೆ	೧೦ ರೂಪಾಯಿಗೆ ೧ ರೂ. ಶಿವಾ್ಯ ಹೆಚ್ಚಿನ ಪ್ರತಿ ೫ ರೂಪಾ್ಯ ಯಾ ಅದರ ಅಂಶಕ್ಕೆ ೮ ಆಣೆ ಮೇರಿಗೆ.	
" " ೧೦೦ " ೧೦೦೦ "	ಪ್ರತಿ ೧೦ ರೂ. ಯಾ ಅದರ ಅಂಶಕ್ಕೆ ೧ ರೂ. ಮೇರಿಗೆ.	
" " ೧೦೦೦ " ೨೦೦೦೦ "	೧೦೦೦ರೂಪಾಯಿಗೆ ೧೦೦ ರೂ. ಶಿವಾ್ಯ ಹೆಚ್ಚಿನ ಪ್ರತಿ ೧೦೦ ರೂ. ಯಾ ಅದ್ರ ಅಂಶಕ್ಕೆ ೫ ರೂ. ಮೇರಿಗೆ.	
" " ೨೦೦೦೦ " ೧೦೦೦೦೦ "	೨೦೦೦೦ ರೂಪಾಯಿಗೆ ೧೦೫೦ ರೂ. ಶಿವಾ್ಯ, ಹೆಚ್ಚಿನ ಪ್ರತಿ ೧೦೦ ರೂ. ಯಾ ಅದರ ಅಂಶಕ್ಕೆ ೧ ರೂ. ಮೇರಿಗೆ.	
" " ೧೦೦೦೦೦ " ಮೀರಿದರೆ	೧೦೦೦೦೦ ರೂಪಾಯಿಗೆ ೧೮೫೦ ರೂಪಾ್ಯ ಶಿವಾಯಿ, ಹೆಚ್ಚಿನ ಪ್ರತಿ ೧೦೦ ರೂ. ಯಾ ಅದರ ಅಂಶಕ್ಕೆ ೮ ಆಣೆ ಮೇರಿಗೆ.	

ಮೂಲದಲ್ಲಿ ಪೈಸ್ಲೆ ಆದ ವ್ಯಾಜ್ಯದ ಸ್ವಲ್ಪ ಅಂಶಕ್ಕೆ ಮಾತ್ರ ಶಿವೀಲ್ ಕೋರ್ಟಿನಲ್ಲಿ ಅಪ್ಪಿಲ್ ದಾಖಲ್ ಮಾಡಲ್ಪಟ್ಟಲ್ಲಿ, ರಸಪಾಂಡೆಂಟನು ಸದರಿ ಅಪ್ಪೀಲ್ ಅರ್ಜಿಯನ್ನು ಓದಿ ಕೇಳಿದ ಮೇಲೆ ಸದರಿ ಪೈಸಲೆ ಪೈಕಿ ಅಪ್ಪೀಲ್ ಮಾಡದೆ ಇರುವ ಅಂಶದಲ್ಲಿ ಏನೊಂದು ಆಕ್ಷೇಪಣೆಯನ್ನು ಎತ್ತಿದರೆ, ಆ ಆಕ್ಷೇಪಿಸಲ್ಪಟ್ಟ ಪೈಸಲೆ ಬಾಗ ಅಪ್ಪೀಲಿನಲ್ಲಿ ಶೇರಿಸಿದರೆ ಎಷ್ಟು ತಸ್ತೆ ಅವಶ್ಯವಾಗುತಿತ್ತೋ, ಅಷ್ಟು ಹೆಚ್ಚಾಗಿ ಪಾವತಿ ಆಗುವ ವರೆಗೆ ಕೋರ್ಟಿನವರು ಸದರಿ ಆಕ್ಷೇಪಣೆ ಕೇಳ ಕೂಡದು.

ಈ ಕೆಳಗಿನ ಸಂಗತಿಗಳಲ್ಲಿ ತಸ್ತೆ ಅವಶ್ಯವಿಲ್ಲ.

ಮೇಜಸ್ಟ್ರೇಟ ಮೊಕದಮೆಯಲ್ಲಿ ಬರ ಕೊಡೋಣಾಗುವ ಜಾಮೀನುಗಳೂ, ಹೋಣೆ ಚೀಟುಗಳೂ, ಅಥವಾ ಹಾಜರಾಗುವದಾಗಿ ಯಾ ಪ್ರಕಾರಾಂತರವಾಗಿ ಕೊಡುವ ಸ್ವಂತ ಮುಚ್ಚಳಿಕೆಗಳೂ.

ಫಿರ್ಯಾದಿ ಕೊಡುವ ಮನುಷ್ಯನು ಸಂಕಟ ಪಟ್ಟವನಾಗಿದ್ದು ತಸ್ತೆ ಮೇಲೆ ಫಿರ್ಯಾದು ಕೊಡುವರೆ ಸಾಮರ್ಥ್ಯವಿಲ್ಲದವನೆಂತ ತೋರಿದರೆ, ಮೇಜಸ್ಟ್ರೇಟರು ಅಂಥವನಿಂದ ಬಾಶಿ ಕಾಗದದ ಮೇಲೆ ಫಿರ್ಯಾದು ತೆಕ್ಕೊಳ್ಳ ಬಹುದು.

ಯಾವದೊಂದು ವೆವಹಾರ್ಣೆಯಲ್ಲಿ ಸಾಕ್ಷಿಗಾರರಿಗೆ ಸಮ್ಮನು ಹುಟ್ಟಿಸುವ ಯಾ ದಸ್ತೈವಜು ಹಾಜರು ಪಡಿಸುವ ನಿಮಿತ್ತ ಕೊಡೋಣಾಗುವ ಅರ್ಜಿ.

ಜಮೀನು ಶಿಸ್ತು ಠರಾವು ಬಾಬ್ತು ಸಂಗತಿಗಳನ್ನು ಕುರಿತು ಆ ಠರಾವು ಮಾಡುವಂಥಾ ಕಲ್ಲೆಕ್ಟರಿಗೆ, ಅಂಥಾ ಠರಾವು ಮಾರ್ಪಡುವ ಕಾಲದಲ್ಲಿ, ಬರ ಕೊಳ್ಳುವ ಯಾ ಅದನ್ನು ಕುರಿತು ರೇವನಿ ಬೋರ್ಡಿಗೆ ಕೊಡುವ ಅರ್ಜಿ.

ಸರಕಾರಿ ಅಡವಿಗಳಲ್ಲಿ ಮರಗಳನ್ನು ಕಡಿಯುವದಕ್ಕೆ ಹುಕುಂ ಪಡ ಕೊಳ್ಳುವಂತೆ ಕೊಡುವ ಅರ್ಜಿ.

ಕ್ರಿಮಿನಾಲ್ ಕೋರ್ಟಿನವರು ತಸ್ತೆ ಹಾಸಲನ್ನು ಮಾಫು ಮಾಡ ತಕ್ಕದ್ದೆಂದು ಯೋಚಿಸಿದಾಗ ಅಂಥಾ ಕೋರ್ಟ ಮುಂದೆ ದಾಖಲ್ ಮಾಡಲ್ಪಡುವ ಅರ್ಜಿ, ಅಪಾದನೆ ಇತ್ಯಾದಿಗಳು.

*ಸರಕಾರಿ ಸ್ಥಳ ದರಖಾಸ್ತಿಗೆ ಬಂದ ಸಮ್ಮಂಥ ಬೇರೇಜು ಮೊಕರೂರು ಆದ ಮೇಲೆ ಬರ ಕೊಡುವ ತಾಜಾ ಮುಚ್ಚಳಿಕೆ.

*ಮೇಜಸ್ಟ್ರೇಟ ಮೊಕದಮೆಗಳಲ್ಲಿ ಹಾಜರಾದ ಜಿಂದಗಿ ವಗೈರೆಯನ್ನು ವಾಪಸು ಪಡ ಕೊಳ್ಳುವಾಗ್ಯೆ ಕಕ್ಷಿಗಾರರು ಬರ ಕೊಡುವ ರಶೀದಿ.

ಹಣ ತೂಕ ಅಳತೆಗಳ ಕೋಷ್ಟಕ.

೧. ಹಣಪಟ್ಟಿ

೧. ಮುಂಚೆ ರೂಢಿ ಇದ್ದ ಯೆಣಿಕೆ

೨ ಕಾಣಿ. ೧ ಅರವೀಸ.

೪ „ ೨ „ ೧ ವೀಸ.

೮ „ ೪ „ ೨ „ ೧ ಬೇಳೆ.

೧೬ „ ೮ „ ೪ „ ೨ „ ೧ ಹಾಗ.

೩೨ „ ೧೬ „ ೮ „ ೪ „ ೨ „ ೧ ಅಡ್ಡ.

೬೪ „ ೩೨ „ ೧೬ „ ೮ „ ೪ „ ೨ „ ೧ ಹಣ.

೩೨೦ „ ೧೬೦ „ ೮೦ „ ೪೦ „ ೨೦ „ ೧೦ „ ೫ „ ೧ ಹೊನ್ನು.

೬೪೦ „ ೩೨೦ „ ೧೬೦ „ ೮೦ „ ೪೦ „ ೨೦ „ ೧೦ „ ೨ „ ೧ ವರಹ.

* ಇವು ದಕ್ಷಿಣ ಕನ್ನಡ ಗಜೆಟಿನಲ್ಲಿ ಪ್ರಕಟಿಸೋಣಾದ ಸರ್ಕಾರ ಹುಕುಮಿನಿಂದ ತೆಗದ್ದು.

೨. ಮುಂಚೆ ನಡದ ಹಣ

ಕಾಸು.						
೨	೧ ರುಪ್ಪಿ.					
೪	೨ ,,	೧ ದುಗ್ಗಾಣಿ.				
೮	೪ ,,	೨ ,,	೧ ದುಡ್ಡು.			
೧೦೦	೫೦ ,,	೨೫ ,,	೧೨½ ,,	೧ ಪಾವಲಿ.		
೪೦೦	೨೦೦ ,,	೧೦೦ ,,	೫೦ ,,	೪ ,,	೧ ರೂಪಾಯಿ.	
೧೬೦೦	೮೦೦ ,,	೪೦೦ ,,	೨೦೦ ,,	೧೬ ,,	೪ ,,	೧ ವರಹ.

೩. ಈಗ ನಡೆಯುವ ಹಣ

ಪೈ.		
೧೨	೧ ಆಣೆ.	
೧೯೨	೧೬ ,,	೧ ರೂಪಾಯಿ.

೪. ಇಂಗ್ಲಿಷ್ ಹಣ

ಫಾರ್ದಿಂಗ್. (f.)			
೪	೧ ಪೆನ್ನಿ. (d.)		
೪೮	೧೨ ,,	೧ ಶಿಲ್ಲಿಂಗ್. (s.)	
೯೬೦	೨೪೦ ,,	೨೦ ,,	೧ ಪೌಂಡ್. (£)

೨. ತೂಕಗಳು

೧. ಚಿನ್ನ ಬೆಳ್ಳಿಗಳ ತೂಕ

ವೀಸ.				
೪	೧ ಹಾಗ.			
೮	೨ ,,	೧ ಅಡ್ಡ.		
೧೬	೪ ,,	೨ ,,	೧ ಹಣ.	
೧೪೪	೩೬ ,,	೧೮ ,,	೯ ,,	೧ ವರಹ.

೩ ವರಹ ೩ ಹಣತೂಕ ಅಂದರೆ—೧ ರೂಪಾಯಿ; ಆದರೆ ಬಹಳ ತೂಕವುಳ್ಳದ್ದನ್ನು ಒಂದೇ ಸಾರಿ ಕೊಂಡು ಕೊಳ್ಳುವದರಲ್ಲಿಯೂ ಮಾರುವದರಲ್ಲಿಯೂ ೩ ವರಹ ೩ ಹಣ ತೂಕ ೩ ಹಾಗ ಅಂದರೆ—೧ ರೂಪಾಯಿ ಆಗುವದು.

೨. ಮುಂಚಿನ ತೂಕ

ವರಹ ತೂಕ.					
೮೦	೧ ಸೇರು.				
೪೮೦	೬ ,,	೧ ಪಂಚಸೇರು.			
೯೬೦	೧೨ ,,	೨ ,,	೧ ಧಡೆ.		
೩೮೪೦	೪೮ ,,	೮ ,,	೪ ,,	೧ ಮಣ.	
೭೬೮೦೦	೯೬೦ ,,	೧೬೦ ,,	೮೦ ,,	೨೦ ,,	೧ ಖಂಡಿ.

೩. ಬೆಲ್ಲದ ತೂಕ

ರೂಪಾಯಿ ತೂಕ.				
೨೪	೧ ಸೇರು.			
೯೬೦	೪೦ „	೧ ಮಣ.		
೧೯೨೦೦	೮೦೦ „	೨೦ „	೧ ಖಂಡಿ.	

೪. ಸಾಧಾರಣ ತೂಕ

ಅ. ಸೇರು ಲೆಕ್ಖ

ರೂಪಾಯಿ ತೂಕ.			
೨೪	೧ ಸೇರು.		
೧೧೨೦	೪೬ ೨/೩ „	೧ ಮಣ.	
೨೨೪೦೦	೯೩೩ ೧/೩ „	೨೦ „	೧ ಖಂಡಿ.

ಇ. ರಾತಲು ಲೆಕ್ಖ

ರೂಪಾಯಿ ತೂಕ.			
೪೦	೧ ರಾತಲು.		
೧೧೨೦	೨೮ „	೧ ಮಣ.	
೨೨೪೦೦	೫೬೦ „	೨೦ „	೧ ಖಂಡಿ.

೫. ಅಂಗ್ಲ ತೂಕ

ಅಂಗ್ಲ ದೇಶದಲ್ಲಿ ನಡಿಯುವಂಥಾ ಭಾರವಾದ ಜೀನಸುಗಳ ತೂಕ.

ಡ್ರಮ್.					
೧೬	೧ ಔನ್ಸ್.				
೨೫೬	೧೬ „	೧ lb. ಪೌಂಡ್ (ಅಂದರೆ ರಾತಲು).			
೭೧೬೮	೪೪೮ „	೨೮ „	೧ qr. ಕ್ವಾರ್ಟರ್ (ಅಂದರೆ ಮಣ).		
೨೮೬೭೨	೧೭೯೨ „	೧೧೨ „	೪ „	೧ cwt. ಹಂಡ್ರೆಡ್‌ವೇಟ್.	
೫೭೩೪೪೦	೩೫೮೪೦ „	೨೨೪೦ „	೮೦ „	೨೦ „	೧ ಟನ್.

೧೪ ಪೌಂಡುಗಳಿಗೆ ಒಂದು ಕಲ್ಲು ಎಂತ ಹೇಳುವದುಂಟು. ಹಿಂದುಸ್ಥಾನದಲ್ಲಿ ೧ ರಾತಲು ೪೦ ರೂಪಾಯಿ ತೂಕವಾಗಿ ವಿಭಾಗಿಸುತ್ತಾರೆ, ಮತ್ತು ೨೦ ಮಣ ೧ ಖಂಡಿ ಆಗುತ್ತದೆ.

೧ ಪೌಂಡ್ ಭಾರವಾದ ಜೀನಸುಗಳ ತೂಕ=೭೦೦೦ ಗ್ರೇನ್.

ಔಷಧಕ್ಕೆ

ಗ್ರೇನ್.				
೨೦	೧ ಸ್ಕ್ರುಪೆಲ್.			
೬೦	೩ „	೧ ಡ್ರಮ್.		
೪೮೦	೨೪ „	೮ „	೧ ಔನ್ಸ್.	
೫೭೬೦	೨೮೮ „	೯೬ „	೧೨ „	೧ ಪೌಂಡ್.

೩. ಅಳತೆಗಳು

೧. ಅಕ್ಕೀ ಅಳತೆ

ರೂಪಾಯಿ ತೂಕ.				
೮೦	೧ ಸೇರು.			
೧೧೨೦	೧೪ „	೧ ಕಳಸೆ.		
೩೩೬೦	೪೨ „	೩ „	೧ ಮುಡಿ.	
೧೪೧೧೨೦	೧೭೬೪ „	೧೨೬ „	೪೨ „	೧ ಕೋರ್ಜಿ.

೨. ಕುಮಟೆಯ ಧಾನ್ಯ ಅಳತೆ

ರೂಪಾಯಿ ತೂಕ.			
೨೪	೧ ಸೇರು.		
೧೧೫೨	೪೮ „	೧ ಮಣ.	
೨೩೦೪೦	೯೬೦ „	೨೦ „	೧ ಖಂಡಿ.

೩. ತೆಳು ಜೀನಸಿನ ಅಳತೆ

ರೂಪಾಯಿ ತೂಕ.						
೧೨	೧ ಕುಡುತೆ.					
೨೪	೨ „	೧ ಸೇರು.				
೧೧೨	೯⅓ „	೪⅔ „	೧ ಕುತ್ತಿ.			
೪೪೮	೩೭⅓ „	೧೮⅔ „	೪ „	೧ ಕಾಲಾಡ.		
೧೧೨೦	೯೩⅓ „	೪೬⅔ „	೧೦ „	೨½ „	೧ ಮಣ.	
೧೧೨೦೦	೯೩೩⅓ „	೪೬೬⅔ „	೧೦೦ „	೨೫ „	೧೦ „	೧ ಖಂಡಿ.

೪. ಉಪ್ಪಿನ ಅಳತೆ

ಮುಂಚೆ ಮಂಗಳೂರಿನಲ್ಲಿ ನಡೆದಂಥಾದ್ದು.

ರೂಪಾಯಿ ತೂಕ.				
೧೫	೧ ಅಳಕ.			
೧೨೦	೮ „	೧ ಪಡಿ.		
೯೬೦	೬೪ „	೮ „	೧ ಮುರಕಾಲು.	
೩೮೪೦೦೦	೨೫೬೦೦ „	೩೨೦೦ „	೪೦೦ ”	೧ ಗಾರಸು.

ಈಗ ನಡೆಯುವಂಥಾ ಮುಂಬಾಯಿಯ ಅಳತೆ.

ರೂಪಾಯಿ ತೂಕ.			
೮೦	೧ ಸೇರು.		
೩೨೦೦	೪೦ „	೧ ಮಣ.	
೩೮೪೦೦೦	೪೮೦೦ „	೧೨೦ „	೧ ಗಾರಸು.

ಸರಕಾರ ಕೋಠಿಗಳಲ್ಲಿ ಉಪ್ಪು ಮಾರುವ ರೀತಿ ಇದೇ. ಆದರೆ ಅಂಗಡಿಗಳಲ್ಲಿ ಉಪ್ಪನ್ನು ಸೇರಿನ ಪ್ರಕಾರ ಮಾರುತ್ತಾರೆ.

೫. ಮರಗಳ ಅಳತೆ

ವೀಸ.			
೧೬	೧ ಅಂಗುಲ.		
೩೮೪	೨೪	„	೧ ಗಜ ಯಾನೆ ಕೋಲು.

ಕಟ್ಟಿಗೆಯ ಖಂಡಿ ಅಂದರೆ — ೨೪ ಕೋಲು ಉದ್ದವೂ, ೧೨ ಅಂಗುಲ ಅಗಲವೂ, ೧ ಅಂಗುಲ ದಪ್ಪವೂ ಆಗಿರುವಂಥಾದ್ದು. ಆದರೆ ಬೇರೆ ಶೀಮೆಗಳಲ್ಲಿ ಖಂಡಿ ಎರಡಷ್ಟು ದೊಡ್ಡದಾಗಿ, ಉದ್ದದಲ್ಲಿಯೂ ಅಗಲದಲ್ಲಿಯೂ ದಪ್ಪದಲ್ಲಿಯೂ ಒಂದು ಕೋಲಿನ ಪ್ರಮಾಣವುಳ್ಳದ್ದಾಗಿದೆ.

ಮುಂಬಾಯಿಯಲ್ಲಿ ನಡಿಯುವಂಥಾದ್ದು.

ಕಡೆದ ಮರಗಳನ್ನು ಕೋಡಿಯ ಪ್ರಕಾರ ಮಾರುವ ಪದ್ಧತಿ ಉಂಟು.

ಒಂದು ಕೋಡಿ ಅಂದರೆ — ೨೪೦ ಗಜ ಉದ್ದವೂ, ೧೨ ಅಂಗುಲ ಅಗಲವೂ, ೨ ಅಂಗುಲ ದಪ್ಪವೂ ಇರುವಂಥಾದ್ದು.

ಗರಗಸದವರಿಗೆ ೨೪೦ ಗಜ ಉದ್ದವೂ ೧೨ ಅಂಗುಲ ಅಗಲವೂ ಆಗಿರುವ ಕೋಡಿಯ ಪ್ರಕಾರ ಕೂಲಿ ಸಲ್ಲುತ್ತದೆ.

೬. ಉದ್ದದ ಅಳತೆ

ಇಂಚ್‍ಗಳು. (″)						
೧೨	೧ ಫೂಟ್. (′)					
೩೬	೩ „	೧ ಯಾರ್ಡ್.				
೭೨	೬ „	೨ „	೧ ಫದಮ್.			
೧೯೮	೧೬½ „	೫½ „	೨¾ „	೧ ಪೋಲ್.		
೭೯೨೦	೬೬೦ „	೨೨೦ „	೧೧೦ „	೪೦ „	೧ ಫೊರ್ಲೊಂಗ್.	
೬೩೩೬೦	೫೨೮೦ „	೧೭೬೦ „	೮೮೦ „	೩೨೦ „	೮ „	೧ ಮೈಲ್.

೭. ಚಚ್ಚೌಕಳತೆ

ಇಂಚ್‍ಗಳು.					
೧೪೪	೧ ಫೂಟ್.				
೧೨೯೬	೯ „	೧ ಗಜ.			
೯೮೦೧	೬೮ ೧/೧೬ „	೭ ೯/೧೬ „	೧ ಆಣೆ.		
೧೫೬೮೧೬	೧೦೮೯ „	೧೨೧ „	೧೬ „	೧ ಗುಂಟೆ.	
೬೨೭೨೬೪೦	೪೩೫೬೦ „	೪೮೪೦ „	೬೪೦ „	೪೦ „	೧ ಯೆಕ್ಕರೆ.

೬೪೦ ಯೆಕ್ಕರೆಗಳು ಅಂದರೆ — ೧ ಚಚ್ಚೌಕ ಮೈಲ್.

೮. ಚಕ್ರದ ಅಳತೆ

ಸೆಕೊಂಡ.				
೬೦	೧ ಮಿನಿಟ.			
೩೬೦೦	೬೦ „	೧ ಡಿಗ್ರೀ.		
೩೨೪೦೦೦	೫೪೦೦ „	೯೦ „	೧ ಕ್ವಾಡ್ರಂಟ್.	
೧೨೯೬೦೦೦	೨೧೬೦೦ „	೩೬೦ „	೪ „	೧ ಮಂಡಲ.

೯. ಕಾಲಪ್ರಮಾಣ.

೧. ಹಿಂದು ರೀತಿ.	೨. ಇಂಗ್ಲಿಷ್ ರೀತಿ.
೧ ವರುಷಕ್ಕೆ = ೧೨ ತಿಂಗಳು.	೧ ವರುಷಕ್ಕೆ = ೧೨ ತಿಂಗಳು* = ೫೨
೧ ತಿಂಗಳಿಗೆ = ೩೦ ದಿವಸ.	ವಾರ = ೩೬೫¼ ದಿವಸ.
೧ ದಿವಸಕ್ಕೆ = ೮ ಝಾಮು.	೧ ದಿವಸಕ್ಕೆ = ೨೪ ತಾಸು.
೧ ಝಾಮಕ್ಕೆ = ೭½ ಘಳಿಗೆ.	೧ ತಾಸಿಗೆ = ೬೦ ಮಿನಿಟ.
೧ ಘಳಿಗೆಗೆ = ೬೦ ವಿಘಳಿಗೆ.	೧ ಮಿನಿಟಿಗೆ = ೬೦ ಸೆಕೊಂಡ.

*ಕೆಲವು ತಿಂಗಳಿಗೆ ೩೦, ಕೆಲವಕ್ಕೆ ೩೧ ದಿವಸ ಉಂಟು; ೧ ತಿಂಗಳಿಗೆ ೪ ವಾರ ಲೆಖ್ಖಿಸುತ್ತಾರೆ. ೧ವಾರಕ್ಕೆ ೭ ದಿವಸ ಉಂಟು.

೧೮೬೮ರಲ್ಲು ಬರುವ
ಗ್ರಹಣಗಳು.

೧೮೬೮ನೆ ವರ್ಷವು ಅಪರೂಪವಾಗಿರುವ ವರ್ಷಗಳ ತರದ್ದು. ಅದರಲ್ಲಿ ಚಂದ್ರಗ್ರಹಣ ಇಲ್ಲಾ, ಸೂರ್ಯನಿಗೆ ಮಾತ್ರವೆ ಎರಡು ಗ್ರಹಣಗಳು ಪ್ರಾಪ್ತಿಯಾಗುತ್ತವೆ, ಮತ್ತು ಈ ಎರಡು ಗ್ರಹಣಕಾಲಗಳಲ್ಲಿ ಚಂದ್ರವು ಭೂಕ್ರಾಂತಿಯನ್ನು ದಾಟುವಾಗಲೆ ಚಂದ್ರಕ್ರಾಂತಿಯಲ್ಲಿ ಅಮವಾಸೆ ಆಗುವದರಿಂದ, ಅಂದರೆ ಕ್ರಾಂತಿಸಂಧಿಯಲ್ಲಿ ಅಮವಾಸೆ ಬರುವದರಿಂದ, ಈ ಎರಡು ಗ್ರಹಣಗಳೂ ಬಹಳ ದೊಡ್ಡವಾಗಿರುತ್ತವೆ.

ಈ ವರ್ಷದ ಫೆಬ್ರುವರಿ ೨೩ರಲ್ಲು ಸೂರ್ಯಕ್ಕೆ ಕಂಕಣಗ್ರಹಣವೂ, ಅಗೊಸ್ತು ೧೮ರಲ್ಲು ಪೂರ್ಣಗ್ರಹಣವೂ ಬರುವದು. ಇವುಗಳಲ್ಲಿ ಪೂರ್ಣಗ್ರಹಣ ಮಾತ್ರವೆ ಈ ಹಿಂದೂ ದೇಶಲ್ಲಿ ಕಾಣುವದು. ಅಂಥಾ ಅಮವಾಸೆ ದಿನ ಚಂದ್ರವು ಭೂಮಿಗೆ ಸಮೀಪ ಅಥವಾ ದೂರ ಆಗಿರುವದರಿಂಗಲೂ, ಭೂಮಿ ಸಹಾ ಆ ಕಾಲದಲ್ಲಿ ಸೂರ್ಯಕ್ಕೆ ಸಮೀಪ ಅಥವಾ ದೂರ ಆಗಿರುವದರಿಂದಲೂ, ಸೂರ್ಯಕ್ಕೆ ಕಂಕಣಗ್ರಹಣ ಅಥವಾ ಪೂರ್ಣಗ್ರಹಣ ಆಗುತ್ತದೆ. ಭೂಮಿಯಿಂದ ನೋಡುವಾಗ್ಯೆ ಸೂರ್ಯದ ವ್ಯಾಸವೂ ಚಂದ್ರದ ವ್ಯಾಸವೂ ಶುಮಾರು ಸಮಾನವಾಗಿ ತೋರುತ್ತವೆ. ಆದರೆ ಬಂದು ವರ್ಷ ಗತಿಸುವಷ್ಟರಲ್ಲಿ ಅವುಗಳ ಪರಸ್ಪರ ದೂರತ್ವವು ಬಿಡದೆ ಹೆಚ್ಚುಕಡಿಮೆ ಆಗುತ್ತಾ ಇರಲಾಗಿ, ನಮಗೆ ಬಂದೊಂದು ಸರ್ತಿ ಸೂರ್ಯವು ಚಂದ್ರಕ್ಕಿಂತ ಸಣ್ಣದಾಗಿ, ಅಥವಾ ಚಂದ್ರವು ಸೂರ್ಯಕ್ಕಿಂತ ಸಣ್ಣದಾಗಿ ತೋರುವದು. ಗ್ರಹಣ ಕಾಲದಲ್ಲಿ ಸೂರ್ಯವು ಚಂದ್ರಕ್ಕಿಂತ ಸಣ್ಣದಾಗಿ ತೋರುವ ಪಕ್ಷದಲ್ಲಿ ಚಂದ್ರವು ಸೂರ್ಯವನ್ನು ಪೂರ್ಣವಾಗಿ ಆಛ್ಛಾದಿಸ (ಮುಚ್ಚ) ಬಹುದು, ಆಗ್ಯೆ ಗ್ರಹಣವು ಪೂರ್ಣಗ್ರಹಣ. ಆದರೆ ಆ ಕಾಲದಲ್ಲಿ ಚಂದ್ರವು ಸೂರ್ಯಕ್ಕಿಂತ ಸಣ್ಣದಾಗಿ ತೋರುವ ಪಕ್ಷದಲ್ಲಿ, ಚಂದ್ರವು ಸೂರ್ಯವನ್ನು ಪೂರ್ಣವಾಗಿ ಆಛ್ಛಾದಿಸಲಾರದು, ಸೂರ್ಯದ ಸುತ್ತಲು ಕಂಕಣದಂತೆ ಬೆಳಕಿನ ಬಳೆ ಉಳಿಯುವದು, ಆದ್ದರಿಂದ ಅದಕ್ಕೆ ಕಂಕಣಗ್ರಹಣವೆಂದನ್ನುತ್ತಾರೆ.

ಚಂದ್ರವು ೨೭ ದಿನ, ೭ ತಾಸು, ೪೩ ಮಿನಿಟು ೧೧½ ಸೆಕುಂದಗಳಲ್ಲಿ ಭೂಮಿಯು ಬಂದು ಸುತ್ತು ತೆಗಿಯುತ್ತದೆ. ಅಷ್ಟು ದಿನ ತಾಸು ಮುಂತಾದ ಕಾಲಾವಧಿಯಲ್ಲಿ, ಭೂಮಿಯಿಂದ ನೋಡುವಾಗ್ಯೆ ಚಂದ್ರವು ಆರಂಭದಲ್ಲಿ ಹ್ಯಾಗೊ ಹಾಗೆಯೆ ತಿರಿಗಿ ಅದೆ ನಕ್ಷತ್ರದಲ್ಲಿ ಕಾಣುತ್ತದೆ. ಪರಿವ

ರ್ತನದಲ್ಲಿ ಚಂದ್ರವು ನಡಿಯುವ ಮಾರ್ಗವು ಪೂರ್ಣ ಚಕ್ರಾಕಾರವಲ್ಲ, ಅಂಡಾಕಾರವಾಗಿರುತ್ತದೆ. ಈ ಅಂಡಾಕಾರದ ಒಂದು ಅಗ್ರಾಂಶುವಿನಲ್ಲಿ (ಅಂದರೆ ಅಂಡಾಕಾರದಿಂದ ಹೊರಡ ಬಹುದಾದ ಪ್ರಕಾಶವು ಯಾವ ಸ್ಥಳದಲ್ಲಿ ಅತ್ಯಂತ ಬಲವಾಗಿ ಬೀಳ ಬಹುದೊ, ಆ ಸ್ಥಳದಲ್ಲಿ) ಭೂಮಿಯು ಇರುತ್ತದೆ. ಹೀಗಿರಲಾಗಿ, ಭೂಮಿಯಿಂದ ಚಂದ್ರಕ್ಕೆ ಲಂಬವು ಯಾವಾಗಲೂ ಏಕಪ್ರಕಾರವಾಗಿರುವದಿಲ್ಲ; ಚಂದ್ರವು ಭೂಸಾಮಿಪ್ಯದಲ್ಲಿದ್ದು, ಅಂದರೆ ಲಂಬವು ೪೮೯೬೧ ಮೈಲು* ಆಗಿದ್ದರೆ, ೧೪ ದಿನಗಳ ಮೇಲೆ ಅದು ಭೂದೂರತ್ವದಲ್ಲಿ ಇರುವದು, ಆಗ್ಯೆ ಅದು ಭೂಮಿಗೆ ೫೪೬೪೪ ಮೈಲು ದೂರವಾಗಿರುವದು. ಈ ಪ್ರಕಾರ ಚಂದ್ರವು ಪರಿಚಲನದಲ್ಲಿ ಒಂದು ಸಾರಿ ಹತ್ರ ಒಂದು ಸಾರಿ ದೂರ ಇದ್ದು, ಇದರಿಂದ ಅದಕ್ಕೆ ಲಂಬವು ವಿವಿಧವಾಗಿರುತ್ತಿರಲಾಗಿ, ಚಂದ್ರವು ನಮಗೆ ಒಂದು ಸಾರಿ ದೊಡ್ಡದು, ಒಂದು ಸಾರಿ ಸಣ್ಣದು ಕಾಣುತ್ತದೆ. ಚಂದ್ರದ ಸರಾಸರಿ ದೂರತ್ವವು ೫೧೮೦೩ ಮೈಲು ಆಗುತ್ತದೆ. ಆಕಾಶದಲ್ಲಿ ಕಾಣುವ ಗೋಳಗಳು ಇಂತಿಷ್ಟೆ ಅಂತ ಹೇಳ ಬೇಕಾದರೆ, ರೇಖಾಗಣಿತದಲ್ಲಿ ಕೋಣಗಳ ಪರಿಮಾಣದ ಪ್ರಕಾರ, ಆ ಗೋಳಗಳು ನಮ್ಮ ಕಣ್ಣಿಗೆ ಕಾಣುವ ರೀತಿಯಾಗಿ, ಇಂಥಾ ಗೋಳದ ಅರ್ಧವ್ಯಾಸವು ಚಕ್ರದ ಇಂತಿಷ್ಟು ಅಂಶಗಳೂ (ಡಿಗ್ರಿಗಳೂ) ಕಲೆಗಳೂ (ಮಿನಿಟುಗಳೂ) ಅಂತ ಹೇಳುವ ಪದ್ಧತಿಯುಂಟು. ಹಾಗೆ ಚಂದ್ರವು, ಅಂದರೆ ಅದರ ಅರ್ಧವ್ಯಾಸವು ಎಷ್ಟಾಗಿ ಕಾಣುತ್ತದಂದರೆ:

ಅತ್ಯಂತ ಸಾಮಿಪ್ಯದಲ್ಲಿ	೧೬	ಮಿನಿಟು	೮	ದಶಮಾಂಶ
ಮಧ್ಯಮ ದೂರತ್ವದಲ್ಲಿ	೧೫	,,	೬	,,
ಅತ್ಯಂತ ,,	೧೪	,,	೪	,,

ಆದರೆ ಭೂಮಿಯಿಂದ ಚಂದ್ರಕ್ಕಿರುವ ಲಂಬದ ಹೊರ್ತು, ಸೂರ್ಯದಿಂದ ಚಂದ್ರಕ್ಕಿರುವ ಲಂಬದ ದೆಶೆಯಿಂದ ಸಹಾ ಗ್ರಹಣಗಳಲ್ಲಿ ಹೆಚ್ಚು ಕಡಿಮೆ ಆಗುತ್ತದೆ. ಸೂರ್ಯವನ್ನು ಸುತ್ತಿಕೊಂಡು ಬರುವ ಭೂಮಾರ್ಗ ಸಹಾ ಅಂಡಾಕಾರವಾಗಿರುತ್ತದೆ; ಹೀಗಿರಲಾಗಿ ಭೂಮಿಯು ಸೂರ್ಯಕ್ಕೆ ಒಂದು ಸಾರಿ ಅಧಿಕ ಸಮಿಪವಾಗಿಯೂ ಮತ್ತೊಂದು ಸಾರಿ ಅಧಿಕ ದೂರವಾಗಿಯೂ ಇರುತ್ತದೆ. ಈ ಕಾರಣದಿಂದ ಸೂರ್ಯ ಸಹಾ ಒಂದು ಕಾಲದಲ್ಲಿ ಸಣ್ಣದಾಗಿಯೂ, ಒಂದು ಕಾಲದಲ್ಲಿ ದೊಡ್ಡದಾಗಿಯೂ ಕಾಣುತ್ತದೆ. ವರ್ಷದ ಆರಂಭದಲ್ಲಿ ಅಂದರೆ ಜನವರಿ ೧ರಲ್ಲಿ ಭೂಮಿಯು ಸೂರ್ಯಸಾಮಿಪ್ಯದಲ್ಲಿ ಇರುತ್ತದೆ, ಆಗ್ಯೆ ಇಲ್ಲಿಂದ ಅಲ್ಲಿಗೆ ಲಂಬವು ೨೦,೩೩೪,೮೨೫ ಮೈಲು; ಜೂಲೈ ೨ರಲ್ಲಿ ಭೂಮಿಯು ಸೂರ್ಯದೂರತ್ವದಲ್ಲಿ ಇರುತ್ತದೆ, ಆಗ್ಯೆ ಇಲ್ಲಿಂದ ಅಲ್ಲಿಗೆ ಲಂಬವು ೨೧,೦೩೦,೦೫೫ ಮೈಲು. ಮಧ್ಯಮ ಲಂಬವು ೨೦,೬೮೨,೪೪೦ ಮೈಲು. ಭೂಮಿಯಿಂದ ನೋಡುವಾಗ್ಯೆ ಸೂರ್ಯದ ಅರ್ಧವ್ಯಾಸವು ಹ್ಯಾಗೆ ಕಾಣುತ್ತದಂದರೆ:

ಅತ್ಯಂತ ಸಾಮಿಪ್ಯದಲ್ಲಿ	೧೬	ಮಿನಿಟು	೩	ದಶಮಾಂಶ
ಮಧ್ಯಮ ದೂರತ್ವದಲ್ಲಿ	೧೬	,,	೦	,,
ಅತ್ಯಂತ ,,	೧೫	,,	೭	,,

ಈ ಬೇರೆ ಬೇರೆ ಪರಿಮಾಣಗಳನ್ನು ಜೋಡಿಸಿಟ್ಟ ಪಕ್ಷದಲ್ಲಿ ನಮಗೆ ತೋರುವ ಅರ್ಧವ್ಯಾಸಗಳು ಹ್ಯಾಗೆ ಇದ್ದಾವು ಅಂದರೆ:

* ಇದರಲ್ಲಿ ಮೈಲು ಅಂದರೆ ಸಾಧಾರಣವಾದ ೪ ೨/೩ ಮೈಲುಗಳಿಗೆ ಸಮ.

	ಸೂರ್ಯಕ್ಕೆ				ಚಂದ್ರಕ್ಕೆ			
ಅಂತ್ಯಂತ ಸಾಮಿಪ್ಯದಲ್ಲಿ	೧೬	ಮಿನಿಟು	೩	ದಶಮಾಂಶ	೧೬	ಮಿನಿಟು	೮	ದಶಮಾಂಶ
ಮಧ್ಯಮ ದೂರತ್ವದಲ್ಲಿ	೧೬	,,	೦	,,	೧೫	,,	೬	,,
ಅತ್ಯಂತ ,,	೧೫	,,	೭	,,	೧೪	,,	೪	,,

ಈ ಅರ್ಧವ್ಯಾಸಗಳ ಪರಿಮಾಣಗಳಿಂದ ಪ್ರಾಪ್ತವಾಗುವದೇನಂದರೆ:

೧. ಚಂದ್ರವು ಗ್ರಹಣಕಾಲದಲ್ಲಿ ಭೂಮಿಗೆ ದೂರವಾಗಿ ಇದ್ದರೆ, ಸೂರ್ಯಕ್ಕೆ ಪೂರ್ಣಗ್ರಹಣ ಆಗುವದು ಅಸಾಧ್ಯ; ಯಾಕಂದರೆ, ೧೪ ಮಿನಿಟು ೪ ದಶಮಾಂಶವು, ೧೫ ಮಿನಿಟು ೭ ದಶಮಾಂಶಕ್ಕಿಂತ ಸಣ್ಣದು, ಹೀಗಿರಲಾಗಿ ಚಂದ್ರವು ಸೂರ್ಯವನ್ನು ಪೂರ್ಣವಾಗಿ ಮುಚ್ಚಲಾರದು, ಗ್ರಹಣವು ಕಂಕಣಾಕಾರವಾಗುವದು.

೨. ಚಂದ್ರವು ಗ್ರಹಣಕಾಲದಲ್ಲಿ ಭೂಮಿಗೆ ಹತ್ರವಾಗಿದ್ದರೆ, ಕಂಕಣಗ್ರಹಣ ಆಗುವದು ಅಸಾಧ್ಯ; ಯಾಕಂದರೆ ೧೬ ಮಿನಿಟು ೮ ದಶಮಾಂಶವು, ೧೬ ಮಿನಿಟು ೩ ದಶಮಾಂಶಕ್ಕಿಂತ ದೊಡ್ಡದು, ಹೀಗಿರಲಾಗಿ ಚಂದ್ರವು ಸೂರ್ಯವನ್ನು ಪೂರ್ಣವಾಗಿ ಮುಚ್ಚುವದು, ಗ್ರಹಣ ಸಹ ಪೂರ್ಣಗ್ರಹಣವಾಗುವದು.

೩. ಚಂದ್ರವು ಗ್ರಹಣಕಾಲದಲ್ಲಿ ಭೂಮಿಗೆ ಹತ್ರವಾಗಿದ್ದು, ಭೂಮಿಯು ಸೂರ್ಯಕ್ಕೆ ದೂರವಾಗಿರುವ ಪಕ್ಷದಲ್ಲಿ, ಸೂರ್ಯಗ್ರಹಣವು ಅಧಿಕಾಧ್ಯಾದವಾಗುವದು, ಈ ಅಧಿಕ ಪರಿಮಾಣವು ಬಹಳ ದೊಡ್ಡದಾಗಿರುತ್ತದೆ, ಹ್ಯಾಗಂದರೆ ೧೬ ಮಿನಿಟು ೮ ದಶಮಾಂಶದಿಂದ ೧೫ ಮಿನಿಟು ೭ ದಶಮಾಂಶ ಕಳೆದರೆ, ೧ ಮಿನಿಟು ೧ ದಶಮಾಂಶ ಉಳಿಯುವದು. ಆಗ್ಯೆ ನಮ್ಮ ಕಣ್ಣಿಗೆ ಚಂದ್ರಪರಿಮಾಣವು ಸೂರ್ಯಪರಿಮಾಣವನ್ನು ಆಚೆ ಈಚೆ ದಾಟುವ ಹಾಗೆ ತೋರುತ್ತದೆ.

೪. ಸೂರ್ಯಗ್ರಹಣಕಾಲದಲ್ಲಿ ಚಂದ್ರವು ಭೂಮಿಗೆ ದೂರವಾಗಿಯೂ, ಭೂಮಿಯು ಸೂರ್ಯಕ್ಕೆ ಹತ್ರವಾಗಿಯೂ ಇರುವ ಪಕ್ಷದಲ್ಲಿ, ಸೂರ್ಯಗ್ರಹಣವು ಕಂಕಣಾಕಾರವಾಗುತ್ತದೆ, ಮತ್ತು ಆ ಕಂಕಣವು ಆಗ್ಯೆ ಅತ್ಯಂತ ಅಗಲವಾಗಿರುವದು. ಹ್ಯಾಗಂದರೆ, ೧೬ ಮಿನಿಟು ೩ ದಶಮಾಂಶದಿಂದ ೧೪ ಮಿನಿಟು ೪ ದಶಮಾಂಶ ಕಳೆದರೆ, ೧ ಮಿನಿಟು ೯ ದಶಮಾಂಶ ಉಳಿಯುತ್ತದೆ. ಅಷ್ಟಕ್ಕೆ ಸೂರ್ಯವು ಚಂದ್ರವನ್ನು ಆಚೆ ಈಚೆ ದಾಟುತ್ತದೆ.

೫. ಹೆಚ್ಚು ಕಮ್ಮಿ ಆಗದೆ ಸಮವಾದ ಪೂರ್ಣಗ್ರಹಣವು ಸೂರ್ಯಕ್ಕೆ ಬರ ಬೇಕಾದರೆ, ಅಮವಾಸೆ ದಿವಸ ಚಂದ್ರವು ಭೂಮಿಯಿಂದ ಅತ್ಯಂತ ಸಾಮಿಪ್ಯಕ್ಕೂ ಮಧ್ಯಮ ದೂರತ್ವಕ್ಕೂ ನಡುವೆ ಇರ ಬೇಕು. ಭೂಮಿಯಿಂದ ಸೂರ್ಯವು ಅತ್ಯಂತ ದೂರದಲ್ಲಿ ೧೫ ಮಿನಿಟು ೭ ದಶಮಾಂಶವಾಗಿಯೂ, ಚಂದ್ರವು ಮಧ್ಯಮ ದೂರತ್ವದಲ್ಲಿ ೧೫ ಮಿನಿಟು ೬ ದಶಮಾಂಶವಾಗಿಯೂ ಇರುವಾಗ ಸೂರ್ಯಕ್ಕೆ ಸ್ವಲ್ಪ ಕಡಿಮೆ ಪೂರ್ಣಗ್ರಹಣ ಬರುತ್ತದೆ.

ಇದನ್ನೆಲ್ಲಾ ನಾವು ಈ ವರ್ಷದಲ್ಲಿ ಬರುವಂಥಾ ಗ್ರಹಣಗಳ ಸಂಗತಿಯನ್ನು ವಿಚಾರಿಸುವದಕ್ಕೆ ಉಪಯೋಗಿಸಿ ಕೊಳ್ಳೋಣ!

ಫೆಬ್ರುವರಿ ೨೩ರಲ್ಲಿ ಚಂದ್ರವು ಭೂಮಿಗೆ ದೂರವಾಗಿದ್ದು, ಅದರ ಅರ್ಧವ್ಯಾಸವು ೧೪ ಮಿನಿಟು ೫೪ ಸೆಕುಂದಗಳಾಗಿ ನಮಗೆ ಕಾಣುತ್ತದೆ. ಭೂಮಿಯು ಜನವರಿ ೧ನೆಯಿಂದ ಹಿಡಿದು ಸೂರ್ಯಸಾಮಿಪ್ಯದಿಂದ ಸೂರ್ಯದೂರತ್ವದ ಕಡೆಗೆ ನಡಿಯುತ್ತದೆ; ಫೆಬ್ರುವರಿ ೨೩ರಲ್ಲಿ ಸೂರ್ಯದ ಅರ್ಧವ್ಯಾಸವು ೧೬ ಮಿನಿಟು ೧೧ ಸೆಕುಂದಗಳಾಗಿ, ಚಂದ್ರದ ಅರ್ಧವ್ಯಾಸಕ್ಕಿಂತ

೧ ಮಿನಿಟು ೧೭ ಸೆಕುಂದಕ್ಕೆ ದೊಡ್ಡದು; ಹ್ಯಾಗಂದರೆ ೧೧ ಮಿನಿಟು ೫೪ ಸೆಕುಂದವನ್ನು ೧೬ ಮಿನಿಟು ೧೧ ಸೆಕುಂದದಿಂದ ಕಳೆದರೆ, ೧ ಮಿನಿಟು ೧೭ ಸೆಕುಂದ ಉಳಿಯುತ್ತದೆ. ಹೀಗಿರುವದರಿಂದ ಫೆಬ್ರುವರಿ ೨೩ನೆಯ ಸೂರ್ಯಗ್ರಹಣವು ಕಂಕಣಾಕಾರವಾಗಿರುತ್ತದೆ.

ಅಗೊಸ್ತು ೧೮ರಲ್ಲಿ ಚಂದ್ರವು ಭೂಸಾಮೀಪ್ಯದಲ್ಲಿದ್ದು, ಅದರ ಅರ್ಧವ್ಯಾಸವು ೧೬ ಮಿನಿಟು ೪೪ ಸೆಕುಂದ ಆಗಿ ತೋರುತ್ತದೆ. ಆದರೆ ಭೂಮಿಯು ಜೂಲೈ ೨ರಲ್ಲಿ ಸೂರ್ಯದೂರತ್ವದಲ್ಲಿದ್ದು, ಅಗೊಸ್ತು ೧೮ರಲ್ಲಿ ಅಲ್ಲಿಂದ ಬಹಳ ಆಚೆಗೆ ಹೋಗಿರುವದಿಲ್ಲ. ಹೀಗಾಗಿ ಸೂರ್ಯವು ಚಂದ್ರಕ್ಕಿಂತ ಸಣ್ಣದಾಗಿ ನಮಗೆ ಕಾಣುತ್ತದೆ. ಸೂರ್ಯದ ಅರ್ಧವ್ಯಾಸವು ಅಗೊಸ್ತು ೧೮ರಲ್ಲಿ ೧೫ ಮಿನಿಟು ೫೦ ಸೆಕುಂದ ಆಗಿರುವದರಿಂದ, ೫೪ ಸೆಕುಂದಕ್ಕೆ ಚಂದ್ರಕ್ಕಿಂತ ಸಣ್ಣದಾಗಿ ಕಾಣುತ್ತದೆ. ಹ್ಯಾಗಂದರೆ ೧೫ ಮಿನಿಟು ೫೦ ಸೆಕುಂದವನ್ನು ೧೬ ಮಿನಿಟು ೪೪ ಸೆಕುಂದದಿಂದ ಕಳೆದರೆ, ೫೪ ಸೆಕುಂದ ಉಳಿಯುತ್ತದೆ. ಹೀಗಿರಲಾಗಿ ಅಗೊಸ್ತು ೧೮ನೆಯ ಸೂರ್ಯಗ್ರಹಣವು ಪೂರ್ಣಗ್ರಹಣವಾಗಿರುವದು ಮಾತ್ರವಲ್ಲ, ಚಂದ್ರವು ಸೂರ್ಯವನ್ನು ಮುಚ್ಚಿ ಹೆಚ್ಚುಳಿಯುವದು, ಅಂದರೆ ಪೂರ್ಣಗ್ರಾಸದ ಸಮಯದಲ್ಲಿ ಸೂರ್ಯದ ಸುತ್ತಲು ಚಂದ್ರವು ೫೪ ಸೆಕುಂದಕ್ಕೆ ಮಿಕ್ಕಿರುವದು.

ಇಷ್ಟು ಹೇಳಿದ ಮೇಲೆ, ಈಗ ಈ ಎರಡು ಗ್ರಹಣಗಳನ್ನು ಸ್ವಲ್ಪ ಹೆಚ್ಚಾಗಿ ವಿವರಿಸುವಾ!

I. ಫೆಬ್ರುವರಿ ೨೩ರಲ್ಲಿ ಸೂರ್ಯಕ್ಕೆ ಬರುವ ಕಂಕಣಗ್ರಹಣವು ಹಿಂದು ದೇಶದಲ್ಲಿ ಅಪ್ರತ್ಯಕ್ಷ.

ಗ್ರಹಣಾರಂಭವು (ಸ್ಪರ್ಶ) ಭೂಮಿಯಲ್ಲಿ ಫೆಬ್ರುವರಿ ೨೩ರಲ್ಲಿ ಮಧ್ಯಾಹ್ನದ ಮೇಲೆ ೪ ಘಂಟೆ ೧೬ ಮಿನಿಟಿಗೆ, ರೇಖೆಯಿಂದ ಪಶ್ಚಿಮ ೮೦ ಅಂಶ ೨೮ ಕಳೆ, ಅಕ್ಷದಿಂದ ದಕ್ಷಿಣ ೧೨ ಅಂಶ ೫೪ ಕಳೆ.

ಗ್ರಹಣಮಧ್ಯವು ಸಾಯಂಕಾಲ ೭ ಘಂಟೆ ೨೦ ಮಿನಿಟಿಗೆ, ರೇಖಾಪಶ್ಚಿಮ ೩೪ ಅಂಶ ೪೯ ಕಳೆ, ಅಕ್ಷದಕ್ಷಿಣ ೫ ಅಂಶ ೪೭ ಕಳೆ.

ಗ್ರಹಣಾಂತವು ಸಾಯಂಕಾಲ ೧೦ ಘಂಟೆ ೨೪ ಮಿನಿಟಿಗೆ, ರೇಖಾಪೂರ್ವ ೬ ಅಂಶ ೨೯ ಕಳೆ, ಮತ್ತು ಅಕ್ಷೋತ್ತರ ೧೭ ಅಂಶ ೫೯ ಕಳೆ. ಗ್ರಹಣದ ಉತ್ತರ ಪ್ರಾಂತವು ಮೆಕ್ಸಿಕೊ ಕೊಲ್ಲಿಯಲ್ಲಿ ಆರಂಭವಾಗಿ, ಉತ್ತರ ಪೂರ್ವಕ್ಕಾಗಿ ಅತ್ಲಂತ ಸಾಗರವನ್ನೂ ಅಂಗ್ಲ ಸಮುದ್ರಕಂಠವನ್ನೂ ದಾಟಿ, ರುಸ್ಸ್ಯ ದೇಶದ ಬಡಗು ಕಡೆಯಲ್ಲಿ ತೀರುತ್ತದೆ.

ಗ್ರಹಣದ ದಕ್ಷಿಣ ಪ್ರಾಂತವು ಮಹಾಸಾಗರದಲ್ಲಿ ಆರಂಭವಾಗಿ, ಪೂರ್ವಕ್ಕಾಗಿ ದಕ್ಷಿಣ ಅಮೆರಿಕದ ದಕ್ಷಿಣ ತುದಿಯನ್ನೂ, ಉತ್ತರ ಪೂರ್ವಕ್ಕಾಗಿ ಅತ್ಲಂತ ಸಾಗರವನ್ನೂ ದಕ್ಷಿಣ ಅಫ್ರಿಕವನ್ನೂ ದಾಟಿ, ಮೊಸಂಬಿಕದಲ್ಲಿ ತೀರುತ್ತದೆ.

ಈ ಗ್ರಹಣವು ದಕ್ಷಿಣ ಅಮೆರಿಕ ಖಂಡವನ್ನು ಲೀಮದಲ್ಲಿ ಮುಟ್ಟಿ, ಪ್ರಿಯೊಮುಂಮಲೆಯಿಂದ ಅದನ್ನು ಬಿಟ್ಟು, ಅಫ್ರಿಕ ಖಂಡವನ್ನು ಗಿನಿ ತೀರದಲ್ಲಿ ಮುಟ್ಟಿ, ಉತ್ತರ ನುಬ್ಯದಲ್ಲಿ ತೀರುವ ಪ್ರದೇಶಗಳಲ್ಲಿ ಕಂಕಣಾಕಾರವಾಗಿ ಕಾಣುವದು.

ಹಾಗಾದರೆ ಈ ಗ್ರಹಣವು ನಮ್ಮ ಭರತ ಖಂಡದಲ್ಲಿ ಕಾಣದು. ವಿಲಾಯತಿಯಲ್ಲಿ ಸಹ ಅದರ ಸಂಣ ಭಾಗ ಮಾತ್ರವೆ ಪ್ರತ್ಯಕ್ಷವಾಗುವದು. ರುಸ್ಸ್ಯ ರಾಜ್ಯದ ರಾಜಧಾನಿಯಾ

ಗಿರುವ ಬೆರ್ಲೀನದಲ್ಲಿ ೨/೩ ಅಂಗುಲದಷ್ಟು, ಫ್ರೆಂಚು ಮಹಾರಾಜ್ಯದ ರಾಜಧಾನಿ ಪರಿಸದಲ್ಲಿ ೩/೪ ಅಂಗುಲದಷ್ಟು, ಔಸ್ತ್ರಿಯ ಮಹಾರಾಜ್ಯದ ರಾಜಧಾನಿ ವಿಯೆನ್ನದಲ್ಲಿ ೧ ೩/೪ ಅಂಗುಲದಷ್ಟು, ಇತಲಿ ದೇಶದ ರೋಮಪುರದಲ್ಲಿ ೩ ೧/೨ ಅಂಗುಲದಷ್ಟು ತೋರುವದು.

II. ಆಗೋಸ್ತು ೧೮ರಲ್ಲು ಪೂರ್ಣ ಸೂರ್ಯಗ್ರಹಣ. ಇದು ನಮ್ಮ ಭರತಖಂಡದಲ್ಲಿ ಪ್ರತ್ಯಕ್ಷ.

ಗ್ರಹಣಾರಂಭವು ಭೂಮಿಯಲ್ಲಿ ಒಟ್ಟಾರೆ ೧೮ರಲ್ಲು ಬೆಳಿಗ್ಯೆ ೭ ಘಂಟೆ ೩೪ ಮಿನಿಟಿಗೆ, ರೇಖಾಪೂರ್ವ ೪೭ ಅಂಶ ೪ ಕಲೆ, ಅಕ್ಷೋತ್ತರ ೧೨ ಅಂಶ ೬ ಕಲೆಯಲ್ಲಿ.

ಗ್ರಹಣ ಮಧ್ಯವು ೧೦ ಘಂಟೆ ೧೨ ಮಿನಿಟಿಗೆ.

ರೇಖಾಪೂರ್ವ ೧೦೦ ಅಂಶ ೧೮ ಕಲೆ, ಅಕ್ಷೋತ್ತರ ೧೦ ಅಂಶ ೨೭ ಕಲೆಯಲ್ಲಿ.

ಗ್ರಹಣಾಂತವು ೧೨ ಘಂಟೆ ೪೮ ಮಿನಿಟಿಗೆ.

ರೇಖಾಪೂರ್ವ ೧೪೭ ಅಂಶ ೩೭ ಕಲೆ, ಅಕ್ಷದಕ್ಷಿಣ ೧೫ ಅಂಶ ೨೩ ಕಲೆಯಲ್ಲಿ.

ಭೂಮಿಯಲ್ಲಿ ಒಟ್ಟಾರೆ ಮೇಲಿನ ಲೆಖ್ಖ ಸರಿಯಾಗಿದ್ದಾಗ್ಯೂ, ಮಂಗಳೂರಿನಲ್ಲಿ ಗ್ರಹಣಕಾಲವು ಬೇರೆ ಆಗುತ್ತದೆ. ಹ್ಯಾಗಂದರೆ ಮಂಗಳೂರಿನಲ್ಲಿ ಗ್ರಹಣಾರಂಭವು ಬೆಳಿಗ್ಯೆ ೮ ಘಂಟೆ ೧೦ ಮಿನಿಟಿಗೆ, ಮಧ್ಯವು ೧೦ ಘಂಟೆ ೩೮ ಮಿನಿಟಿಗೆ, ಅಂತ್ಯವು ೧೨ ಘಂಟೆ ೪೦ ಮಿನಿಟಿಗೆ ಆಗುತ್ತದೆ.

ಈ ಗ್ರಹಣವು ಪೂರ್ವ ಅಫ್ರಿಕದಲ್ಲಿಯೂ ಹಿಂದೂ ಸಮುದ್ರದಲ್ಲಿಯೂ ದೊಡ್ಡ ಭಾಗವನ್ನೂ, ದಕ್ಷಿಣ ಆಸ್ಯಖಂಡವನ್ನೂ ಪೂರ್ಣ ಔಸ್ತ್ರಾಲ್ಯಖಂಡವನ್ನೂ, ಮಹಾಸಾಗರದ ಒಂದು ಭಾಗವನ್ನೂ ಆವರಿಸುತ್ತದೆ. ಚಂದ್ರದ ನೆರಳು ಭೂಮಿಯಲ್ಲಿ ೧೦೦ ಅಂಶಗಳ ವರೆಗೆ, ಅಂದರೆ ರೇಖಾಪೂರ್ವ ೪೭ ಅಂಶ ೪ ಕಲೆಯಿಂದ ೧೪೭ ಅಂಶ ೩೮ ಕಲೆ ವರೆಗೂ ಉದ್ದವಾಗಿಯೂ, ನಿರಕ್ಷದೇಶದಿಂದ (equator) ಉತ್ತರಕ್ಕೂ ದಕ್ಷಿಣಕ್ಕೂ ಒಟ್ಟಿಗೆ ಶುಮಾರು ೩೦ ಅಂಶಗಳಷ್ಟಕ್ಕೂ ವಿಸ್ತರಿಸುತ್ತದೆ. ಗ್ರಹಣಾರಂಭದಲ್ಲಿ ಚಂದ್ರದ ನೆರಳು ಭೂಮಿಯಲ್ಲಿ ಅಂಡಾಕಾರವಾಗಿದೆ; ಆದರೆ ಚಂದ್ರವು ಸಂಧಿಸ್ಥಾನಕ್ಕೆ ಸಮೀಪಿಸುವಾಗ್ಯೆ, ಅದರ ನೆರಳು ಚಕ್ರಾಕಾರವಾಗುತ್ತದೆ; ಮತ್ತು ಅಮವಾಸೆ ಶಾಗುವಾಗ್ಯೆ, ಅಂದರೆ ೧೦ ಘಂಟೆ ೧೧ ಮಿನಿಟಿಗೆ ಸಂಪೂರ್ಣ ಚಕ್ರಾಕಾರವಾಗುತ್ತದೆ. ಆ ಕಾಲದಲ್ಲಿ ನೆರಳು ಶುಮಾರು ೧೪೦ ಮೈಲು ಅಗಲವಾಗಿರುವದರಿಂದ, ಅದರೊಳಗೆ ಶೇರುವ ದೇಶಗಳಲ್ಲೆಲ್ಲಾ ಪೂರ್ಣಗ್ರಹಣವಾಗುತ್ತದೆ. ಆದರೂ ಚಂದ್ರದ ಅರೆನೆರಳು ಎರಡೂವರೆ ಸಾವಿರ (೨೫೦೦) ಮೈಲಿನಷ್ಟು ಪ್ರದೇಶದ ಮೇಲೆ ಬೀಳುತ್ತದೆ.

ಸ್ವಲ್ಪ ಹತ್ರ ಬರುತ್ತಿದ್ದರೆ, ಮಧ್ಯ ಮತ್ತು ಪೂರ್ಣಗ್ರಹಣದ ರೇಖೆಯು ಮಂಗಳೂರಿಗೆ ಸರಿಯಾಗಿ ದಾಟ ಬಹುದಿತ್ತು. ಹ್ಯಾಗಂದರೆ ಗ್ರಹಣಕಾಲದಲ್ಲಿ ಚಂದ್ರವು ೧೨ ಅಂಶ ೫೯ ಕಲೆಯಷ್ಟೂ, ಸೂರ್ಯವು ೧೩ ಅಂಶ ೨ ಕಲೆಯಷ್ಟೂ ತೋರುತ್ತಿರಲಾಗಿ, ಮಂಗಳೂರು ಸಹ ಅಕ್ಷೋತ್ತರ ೧೨ ಅಂಶ ೫೨ ಕಲೆ ಆಗಿರುವದರಿಂದ, ಮಂಗಳೂರು ಸೂರ್ಯಚಂದ್ರಗಳಿಗೆ ಸ್ವಲ್ಪ ಕಡಿಮೆ ಏಕಸೂತ್ರದಲ್ಲಿ ಇರುತ್ತದೆ. ಆದಾಗ್ಯೂ ಸೂರ್ಯಚಂದ್ರಗಳು ಸ್ವಲ್ಪ ಉತ್ತರಕ್ಕೆ ನಿಲ್ಲುವದರಿಂದ, ಪೂರ್ಣಗ್ರಹಣದ ರೇಖೆಯು ಮಂಗಳೂರಿನಿಂದ ಸ್ವಲ್ಪ ಉತ್ತರಕ್ಕಾಗಿ ದಾಟುತ್ತದೆ.

ಗ್ರಹಣ ಮಧ್ಯದ ಅಂದರೆ ಕೇಂದ್ರಗ್ರಹಣದ ರೇಷೆಯು ಅಫ್ರಿಕದ ಪೂರ್ವದಲ್ಲಿ ಆರಂಭವಾಗಿ, ಹಿಂದೂ ಸಮುದ್ರವನ್ನು ದಾಟಿ, ಭರತಖಂಡವೆಂಬ ನಮ್ಮ ಅರ್ಧದ್ವೀಪದಲ್ಲಿ ಮೊದಲು ರತ್ನಗಿರಿಯ ಹತ್ರ ಮುಟ್ಟಿ, ಬಿಜಾಪುರವನ್ನೂ ನಿಜಾಮಲ್ಲಿಖಾನರ ಸೀಮೆಯ ದಕ್ಷಿಣಭಾಗವನ್ನೂ ದಾಟಿ, ಮಚ್ಲೀಬಂದ್ರದ ಹತ್ರ ಭರತಖಂಡವನ್ನು ಬಿಡುತ್ತದೆ. ಅಲ್ಲಿಂದ ಆ ರೇಷೆಯು ಬಂಗಾಳ ಕೊಲ್ಲಿಯನ್ನೂ, ಬ್ರಹ್ಮೀ ದೇಶವನ್ನೂ, ಚೀನ ಸಮುದ್ರವನ್ನೂ, ಬೊರ್ನಿಯೊ ಸೆಲೆಬೆಸ್ ದ್ವೀಪಗಳನ್ನೂ, ಔಸ್ತ್ರಾಲ್ಯ ನವಗಿನಿಗಳ ನಡುವೆ ದಾಟಿ, ಮಹಾಸಾಗರದ ದಕ್ಷಿಣ ಭಾಗದಲ್ಲಿ ತೀರುತ್ತದೆ.

ಕೇಂದ್ರಗ್ರಹಣದ ಭಾಗ.

ರೇಷೆ.	ಅಕ್ಷ.	ರೇಷೆ.	ಅಕ್ಷ.	ರೇಷೆ.	ಅಕ್ಷ.
ಪೂರ್ವ	ಉತ್ತರ	ಪೂರ್ವ	ಉತ್ತರ	ಪೂರ್ವ	ದಕ್ಷಿಣ
೩೪° ೪೬' „	೧೧° ೧೩' „	೮೬° ೧೫' „	೧೫° ೦' „	೧೨೬° ೧೩' „	೩° ೨೫' „
೪೫° ೪೨' „	೧೩° ೪೮' „	೯೬° ೫೪' „	೧೧° ೪೪' „	೧೩೨° ೧೫' „	೬° ೨೭' „
೫೪° ೧' „	೧೫° ೧೩' „	೧೦೦° ೧೮' „	೧೦° ೨೭' „	೧೪೧° ೧೧' „	೧೦° ೧೩' „
೬೩° ೪೮' „	೧೬° ೧೮' „	೧೦೨° ೫೭' „	೯° ೧೧' „	೧೪೯° ೪' „	೧೨° ೫೮' „
೭೦° ೪೦' „	೧೬° ೩೪' „	೧೧೨° ೧೨' „	೪° ೧೪' „	೧೬೧° ೬' „	೧೬° ೧೫' „
೮೦° ೪೯' „	೧೬° ೧' „	೧೧೭° ೨೭' „	೧° ೧೩' „		

ಈ ಭಾಗದಲ್ಲಿರುವ ಸ್ಥಳಗಳಲ್ಲೆಲ್ಲಾ ಕೇಂದ್ರಗ್ರಹಣ ಆಗುತ್ತದೆ. ಮೇಲೆ ಹೇಳಿದ ಅಂಶಗಳ ದಕ್ಷಿಣಕ್ಕೂ ಉತ್ತರಕ್ಕೂ ಇರುವ ಸ್ಥಳಗಳಲ್ಲಿ ಅಪೂರ್ಣಗ್ರಹಣ ಆಗುತ್ತದೆ. ಒಂದು ಸ್ಥಳವು ಈ ಭಾಗಕ್ಕೆ ಎಷ್ಟು ಹತ್ರವಾಗಿರುತ್ತದೊ, ಅಷ್ಟಕ್ಕೆ ಗ್ರಹಣವು ದೊಡ್ಡದಾಗಿ ಕಾಣುವದು; ಎಷ್ಟು ದೂರವಾಗಿರುತ್ತದೊ, ಅಷ್ಟಕ್ಕೆ ಅದು ಸಣ್ಣದಾಗಿ ಕಾಣುವದು. ಮಂಗಳೂರು ಈ ಭಾಗದಿಂದ ಕೆಲವು ಅಂಶಕ್ಕೆ ಮಾತ್ರವೆ ದಕ್ಷಿಣದಲ್ಲಿ ಇರುವದರಿಂದ, ಗ್ರಹಣವು ಇಲ್ಲಿಯೂ ಬಹಳ ದೊಡ್ಡದಾಗಿ, ಪೂರ್ಣಗ್ರಹಣಕ್ಕೆ ಸ್ವಲ್ಪ ಕಡಿಮೆಯಾಗಿ ಕಾಣುವದು; ಸೂರ್ಯನ ದಕ್ಷಿಣ ಅಂಚಿನಲ್ಲಿ ಸಣ್ಣ ಸಣ್ಣ ಬೆಳಕಿನ ಗೆರೆ ಕಾಣುವದು.

ಈ ಗ್ರಹಣದ ಉತ್ತರ ಪ್ರಾಂತವು ಆಸ್ಯ ಖಂಡದ ಮೇಲ್ಬೈಲನ್ನೆಲ್ಲಾ ಆವರಿಸಿ ಕೊಂಡು, ಮಹಾ ಸಾಗರದಲ್ಲಿ ಮುಗಿಯುವದು. ಅದರ ಆರಂಭವು ರೇಷೆಯಿಂದ ಪೂರ್ವ ೩೪ ಅಂಶ ೪೬ ಕಳೆ, ಅಕ್ಷದಿಂದ ಉತ್ತರ ೧೧ ಅಂಶ ೧೩ ಕಳೆ; ಅದರ ಅಂತ್ಯವು ರೇಷೆಯಿಂದ ಪೂರ್ವ ೧೩೨ ಅಂಶ ೧೫ ಕಳೆ, ಅಕ್ಷದಿಂದ ದಕ್ಷಿಣ ೬ ಅಂಶ ೨೭ ಕಳೆಯಲ್ಲಿ.

ಅದರ ದಕ್ಷಿಣ ಪ್ರಾಂತವು ಮೊಜಂಬಿಕ ಸಮುದ್ರದಲ್ಲಿ ಆರಂಭವಾಗಿ, ಮದಗಸ್ಕರ್ ದ್ವೀಪದ ನಡುವಿನಿಂದ ಹಿಂದೂ ಸಮುದ್ರವನ್ನು ದಾಟಿ, ಔಸ್ತ್ರಾಲ್ಯದ ದಕ್ಷಿಣ ಪಶ್ಚಿಮ ಭಾಗವನ್ನು ಮುಟ್ಟಿ, ನ್ಯೂಜೀಲಂದದ ಪಶ್ಚಿಮದಲ್ಲಿ ಮುಗಿಯುವದು. ಅದರ ಆರಂಭವು ರೇಷೆಯಿಂದ ಪೂರ್ವ ೩೭ ಅಂಶ ೩೩ ಕಳೆ, ಅಕ್ಷದಿಂದ ದಕ್ಷಿಣ ೨೦ ಅಂಶ ೫೦ ಕಳೆ; ಅದರ ಅಂತ್ಯವು ರೇಷೆಯಿಂದ ಪೂರ್ವ ೧೧೯ ಅಂಶ ೩೮ ಕಳೆ, ಅಕ್ಷದಿಂದ ದಕ್ಷಿಣ ೩೫ ಅಂಶ ೨೦ ಕಳೆಯಲ್ಲಿ.

೧೮೬೮ನೆ ನವಂಬರ ೫ರಲ್ಲಿ ಸೂರ್ಯಮಂಡಲಕ್ಕೆ ಸಮವಾಗಿ ಬುಧ ದಾಟಿ ಹೋಗುವದು.

ಭೂಮಿಗೂ ಸೂರ್ಯಕ್ಕೂ ಮಧ್ಯದಲ್ಲಿ ಎರಡು ಗ್ರಹಗಳು, ಶುಕ್ರ ಮತ್ತು ಬುಧ, ಸಂಚರಿಸುತ್ತವೆ. ಅವುಗಳ ಕ್ರಾಂತಿಯೂ ಭೂಕ್ರಾಂತಿಯೂ ಏಕಸೂತ್ರವಾಗಿ ಒಂದೆ ಬೈಲಿನಲ್ಲಿ ಇರದೆ, ಸ್ವಲ್ಪ ಓರೆಯಾಗಿ ಇರುವದರಿಂದ, ಅವು ಭೂಕ್ರಾಂತಿವೀಧಿಯನ್ನು ದಾಟಬೇಕಾಗುತ್ತದೆ. ಆ ದಾಟುವ ಸ್ಥಳಗಳು, ಅಂದರೆ ಕ್ರಾಂತಿಸಂಧಿಗಳು ಭೂಮಿಗೂ ಸೂರ್ಯಕ್ಕೂ ಸಮವಾಗಿ ಸಂಭವಿಸಲಾಗಿ, ಆ ಗ್ರಹಗಳು ಸೂರ್ಯಮಂಡಲಕ್ಕೆ ಎದುರಾಗಿ ನಮ್ಮ ಮುಂದೆ ದಾಟಬೇಕಾಗುತ್ತದೆ. ಇಂಥಾ ಕ್ರಾಂತಿಸಂಧಿಯು ಈ ವರ್ಷ ನವಂಬರ ೫ರಲ್ಲಿ ಪ್ರಾಪ್ತಿಯಾಗುತ್ತದೆ.

ಅದರ ಮೊದಲನೆ ಸ್ಪರ್ಶ ಅಂದರೆ ಸೂರ್ಯಮಂಡಲದೊಳಗೆ ಪ್ರವೇಶಿಸುವದು ಪ್ರಾತಃಕಾಲ ೧೦ ಘಂಟೆ ೨೪ ಮಿನಿಟಿಗೆ.

ಕಡೆ ಸ್ಪರ್ಶ ಅಂದರೆ ಬಿಡುವದು ಮಧ್ಯಾನ್ಹದ ಮೇಲೆ ೨ ಘಂಟೆ ೨ ಮಿನಿಟಿಗೆ.

ಒಂದು ಶತಮಾನದಲ್ಲಿ ಬುಧ ಗ್ರಹವು ೧೩ ಸರ್ತಿ ಸೂರ್ಯಮಂಡಲವನ್ನು ದಾಟುತ್ತದೆ. ಇನ್ನೂ ಮುಂದೆ ಯಾವಾಗ ಅಂದರೆ: ೧೮೭೮ನೆ ಮೇ ೬ರಲ್ಲಿ ಸಾಯಂಕಾಲ; ೧೮೮೧ನೆ ನವಂಬರ ೮ರಲ್ಲಿ ಮಧ್ಯಾನ್ಹದ ಮೇಲೆ; ೧೮೯೧ನೆ ಮೇ ೧೦ರಲ್ಲಿ ಪ್ರಾತಃಕಾಲ; ೧೮೯೪ನೆ ನವಂಬರ ೧೦ನೆ ಮಧ್ಯಾನ್ಹದ ಮುಂಚೆ.

ಶುಕ್ರವು ಸೂರ್ಯಮಂಡಲವನ್ನು ದಾಟುವದು ಅಪರೂಪ. ಎಂಟು ವರ್ಷಗಳೊಳಗೆ ಎರಡು ಶುಕ್ರಸಂಕ್ರಮಣಗಳು ಸಂಭವಿಸಿದ ಮೇಲೆ, ತಿರಿಗಿ ಶುಕ್ರಸಂಕ್ರಮಣ ಬರುವದಕ್ಕೆ ಸಾಧಾರಣವಾಗಿ ೧೦೫ ವರ್ಷಗಳು ಬೇಕಾಗುತ್ತವೆ.

ಮುಂದೆ ಬರುವ ಶುಕ್ರಸಂಕ್ರಮಣಗಳು ಯಾವಾಗ ಅಂದರೆ:

೧೮೭೪ರಲ್ಲಿ ದಶಂಬರ ೧೦ ನೆ ಮಧ್ಯಾನ್ಹದ ಮುಂಚೆ.
೧೮೮೨ „ „ ೬ „ ಮಧ್ಯಾನ್ಹ.
೨೦೦೪ „ ಜೂನ್ ೯ „ „
೨೦೧೨ „ „ ೭ „ ಮಧ್ಯಾನ್ಹದ ಮೇಲೆ.
೨೧೧೭ ” ದಶಂಬರ ೧೨ „ ಸಾಯಂಕಾಲ.
೨೧೨೫ „ „ ೮ „ ಪ್ರಾತಃಕಾಲ.
೨೨೪೭ „ ಜೂನ್ ೧೨ „ ಮಧ್ಯಾನ್ಹದ ಮುಂಚೆ.
೨೨೫೫ „ „ ೧೦ „ „ „
೨೩೬೦ „ ದಶಂಬರ ೧೪ „ „ ಮೇಲೆ.
೨೩೬೮ „ „ ೧೦ „ ಪ್ರಾತಃಕಾಲ.

೧೮೬೮ನೇ ವರುಷದಲ್ಲಿ ಬರುವ ಹಬ್ಬಗಳು.

ನಕ್ಷತ್ರಾಕಾರವು (ಅಂದರೆ ಈ * ಚಿಹ್ನೆಯು) ಸುವಾರ್ತಾಪಕ್ಷದವರಿಗೂ ರೋಮಾಯರಿಗೂ ಕೂಡ ಇರುವ ಹಬ್ಬಗಳನ್ನು ತೋರಿಸುತ್ತದೆ; ಕ್ರೂಜಿಯಾಕಾರವು (ಅಂದರೆ ಈ † ಚಿಹ್ನೆಯು) ರೋಮಾಯರಿಗೆ ಪ್ರತ್ಯೇಕವಾಗಿ ಇರುವ ಹಬ್ಬಗಳನ್ನು ತೋರಿಸುತ್ತದೆ.

ಕ್ರೈಸ್ತರ ಹಬ್ಬಗಳು.

CHRISTIAN FESTIVALS.

ಜನವರಿ ೧ * ನವಸಂವತ್ಸರದ ಹಬ್ಬ (New year's day)
,, ೬ * ಪ್ರತ್ಯಕ್ಷತೆಯ ಹಬ್ಬ (Epiphany)
ಫೆಬ್ರುವರಿ ೨ † ಮರೀಯಳ ಶುದ್ಧೀಕರಣ.
,, ೨೬ † ಉಪೋಸ್ತ್ಯದ ಮೊದಲನೇ ದಿನ.
,, ೨೫ † ಕ್ರಿಸ್ತನ ತಾಯಿ ಮರೀಯಳಿಗಾದ ಶುಭವಾರ್ತೆ.
ಎಪ್ರಿಲ್ ೩ † ಮರೀಯಳ ಸಪ್ತ ವ್ಯಥೆಗಳ ಹಬ್ಬ.
,, ೫ † ಪಾಮ್ ಸಂಡೆ ಹಬ್ಬ.
,, ೯ † ಮುಂಡೆ ಥರ್ಸ್ಡೆ ಹಬ್ಬ.
,, ೧೦ * ಕ್ರಿಸ್ತನ ಮರಣದಿನ (Good Friday)
,, ೧೧ † ಪರಿಶುದ್ಧ ಶನಿವಾರ.
,, ೧೨ * ಪಸ್ಕದ ಹಬ್ಬ (Easter-day)
,, ೧೩ † ಪಸ್ಕದ ಮೇಲಿನ ಸೋಮವಾರ.
,, ೧೪ † ಪಸ್ಕದ ಮೇಲಿನ ಮಂಗಳವಾರ.
ಮೇ ೨೧ * ದಿವಾರೋಹಣದ ಹಬ್ಬ (Ascension day)
,, ೩೧ * ಪಂಚಾಶತ್ತಿನ ಹಬ್ಬ (Pentecost)
ಜೂನ್ ೭ * ತ್ರಿಯೇಕತ್ವದ ಹಬ್ಬ (Trinity)
,, ೧೧ † ಕೊರ್ಪುಸ್ ಕ್ರಿಸ್ತೀ ಹಬ್ಬ.
ಜೂನ್ ೨೪ † ಸ್ನಾನಿಕನಾದ ಯೋಹಾನನ ಜನ್ಮದಿನ.
,, ೨೯ † ಪೇತ್ರನ ಮತ್ತು ಪೌಲನ ದಿನ.
ಜುಲೈ ೨ † ಮರೀಯಳ ಸಂದರ್ಶನ.
,, ೧೬ † ನೊಸ್ಸಾ ಸೆಞ್ಯೋರಾ ದೆಕಾರ್ಮೊ.
ಅಗೊಸ್ತು ೧೦ † ರಕ್ತಸಾಕ್ಷಿಯಾದ ಲಾರೆನ್ಸನ ದಿನ.
,, ೧೫ † ಮರೀಯಳ ಸ್ವರ್ಗಾರೋಹಣ.
ಸಪ್ತಂಬರ ೮ † ಮರೀಯಳ ಜನ್ಮದಿನ.
ಒಕ್ಟೋಬರ ೪ † ಸನ್ ಫ್ರಾನ್ಸಿಸ್ ದೆ ಅಸ್ಸೀಸ್.
ನವಂಬರ ೧ † ಸಮಸ್ತ ಪರಿಶುದ್ಧರ ದಿನ.
,, ೨ † ಸಮಸ್ತ ಪ್ರಾಣಿಗಳ ದಿನ.
,, ೨೯ * ಕ್ರಿಸ್ತನ ಆಗಮ (Advent)
ದಶಂಬರ ೩ † ಸನ್ ಫ್ರಾನ್ಸಿಸ್ ಕ್ಸವೀರ್.
,, ೮ † ಮರೀಯಳ ಶುದ್ಧೋತ್ಪತ್ತಿ.
,, ೨೧ † ಅಪೊಸ್ತಲನಾದ ತೋಮನ ದಿನ
,, ೨೫ * ಕ್ರಿಸ್ತನ ಜನನದ ಹಬ್ಬ (Nativity of our Lord Jesus Christ)
,, ೨೬ † ರಕ್ತಸಾಕ್ಷಿಯಾದ ಸ್ತೆಫನನ ದಿನ.

ಮುಹಮ್ಮದೀ ಹಬ್ಬಗಳು.

MAHOMMEDAN HOLIDAYS.

ಜನವರಿ ೨೬ ರಮ್‌ಜಾನ್ ತಿಂಗಳಿನ ಕಡೇ ದಿನ.
ಫೆಬ್ರುವರಿ ೨೬ ಜಿಲ್ಹಾಯದ್.

ಮಾರ್ಚ್	೨೬	ಜಿಲ್‌ಹಜ್.
ಎಪ್ರಿಲ್	೨೫	ಮೊಹರಮ್ ಹಬ್ಬದ ಆರಂಭ.
ಮೇ	೪	ಮೊಹರಂ ಹಬ್ಬದ ಕಡೇ ದಿನ.
,,	೨೪	ಸಫರ್ ಹಬ್ಬ.
ಜೂನ್	೧೭	ಆಖರ್ ಚಾರ್‌ಶುಂಭ.
,,	೨೩	ರಬಿಲಾವಲ್.
ಜುಲೈ	೨೨	ರಬಿಲಾಖರ್.
ಅಗೊಸ್ತು	೪	ಶಬೀಬರಾತ್.
,,	೨೦	ಜಮಾದಿಲಾವಲ್.
ಸಪ್ತಂಬರ	೧೮	ಜಮಾದಿಲಾಖರ್.
ಒಕ್ತೋಬರ	೧೮	ರಜಬ್.
ನವಂಬರ	೧೬	ಶಾಬಾನ್.
ದಶಂಬರ	೧೬	ರಮ್‌ಜಾನ್ ಹಬ್ಬದ ಆರಂಭ.

ಹಿಂದು ಹಬ್ಬಗಳು.

Hindoo Holidays.

ಜನವರಿ	೧೨	ಮಕರಸಂಕ್ರಮಣ.
ಫೆಬ್ರುವರಿ	೧	ರಥಸಪ್ತಮಿ.
,,	೨೧	ಶಿವರಾತ್ರಿ.
ಮಾರ್ಚ್	೮	ಹೋಳಿಹಬ್ಬ, ಕಾಮದಹನ.
,,	೯	ಹೋಳಿ ಹಬ್ಬದ ಕಡೆ ದಿನ.
,,	೨೫	ಚಾಂದ್ರಮಾನ ಯುಗಾದಿ.
ಎಪ್ರಿಲ್	೧	ರಾಮಜಯಂತಿ.
,,	೧೨	ಸೌರಮಾನ ಯುಗಾದಿ.
,,	೨೫	ಅಕ್ಷತೃತೀಯು.
,,	,,	ಪರಶುರಾಮಜಯಂತಿ.
ಜೂನ್	೩೦	ಪ್ರಥಮೇಕಾದಶಿ.
ಜುಲೈ	೧	ಪ್ರಥಮ ದ್ವಾದಶಿ.
,,	೧೪	ಕರ್ಕಾಟಕ ಸಂಕ್ರಮಣ.
,,	೧೫	ದಕ್ಷಿಣಾಯನಾರಂಭ.
,,	೨೪	ನಾಗರ ಪಂಚಮಿ, ಸಾಮವೇದಿಗಳಿಗೆ ಉಪಾಕರ್ಮ.
ಅಗೊಸ್ತು	೩	ಉಪಾಕರ್ಮ (ಋಗ್ವೇದಿಗಳಿಗೆ).
,,	,,	ಸಮುದ್ರಪೂಜೆ.
,,	೧೧	ಕೃಷ್ಣಾಷ್ಟಮಿ.
,,	೨೦	ಗೌರಿ ತೃತೀಯು.
ಅಗೊಸ್ತು	೨೧	ವಿನಾಯಕ ಚತುರ್ಥಿ.
,,	೨೨	ಋಷಿಪಂಚಮಿ.
,,	೨೫	ಯೆಳೇ ಅಷ್ಟಮಿ.
,,	೩೧	ಅನಂತ ಚತುರ್ದಶಿ.
ಸಪ್ತಂಬರ	೧೬	ಮಹಾಲಯ ಅಮವಾಸೆ (ರಾತ್ರೆ ೫ ಘಳಿಗೆನಂತರ ನವರಾತ್ರಿ ಪ್ರಾರಂಭ.)
,,	೧೭	ನವರಾತ್ರಿ ಪ್ರಥಮಾದಿನ.
,,	೨೩	ಮೂಲನಕ್ಷತ್ರ, ಶಾರದಾ ಪೂಜೆ.
,,	೨೪	ಮಹಾನವಮಿ.
,,	೨೫	ವಿಜಯದಶಮಿ, ಶಮಿಾಪೂಜೆ.
,,	೨೬	ವಿದ್ಯಾದಶಮಿ.
ಅಕ್ತೋಬರ	೧೪	ನರಕಚತುರ್ದಶಿ, ದೀಪಾವಳಿ ಪ್ರಾರಂಭ.
,,	೧೫	ಕಾವೇರಿ ಸಂಕ್ರಮಣ, ದಂಪತಿ ಪೂಜೆ.
,,	೧೬	ಬಲಿಪಾಡ್ಯ ಗೋಪೂಜೆ.
,,	೨೮	ಉತ್ಥಾನ ದ್ವಾದಶಿ, ತುಲಸೀ ಪೂಜೆ.
ನವಂಬರ	೨೦	ಸುಬ್ರಹ್ಮಣ್ಯ ಷಷ್ಟಿ.
,,	೨೭	ಮುಕ್ಕೋಟಿ ದ್ವಾದಶಿ.

೧೮೬೮ನೇ ವರ್ಷದಲ್ಲಿ ಆರಂಭವಾಗುವ ಬೇರೆ ಬೇರೆ ಶಕಗಳು.

Hindoo and Mahommedan Years.

ಮಾರ್ಚ್	೨೫	ವಿಭವವೆಂಬ ಚಾಂದ್ರ ಸಂವತ್ಸರ, ೧೭೯೦ನೇ ಶಾಲಿವಾಹನ ಶಕದ ಆರಂಭವು.
ಎಪ್ರಿಲ್	೨೫	೧೨೮೫ನೇ ಮಹಮ್ಮದೀ ಹಿಜರೀ ಆರಂಭವು.
ಜುಲೈ	೧	ಫಸಲಿ ಎಂಬ ೧೨೭೮ನೇ ವರುಷ ಆರಂಭವು.
ಅಗೊಸ್ತು	೧೫	೧೦೪೪ನೇ ಕೊಲ್ಲಮ್ ವರ್ಷಾರಂಭವು.
ಅಕ್ತೋಬರ	೧೬	೧೯೨೫ನೇ (ಗುಜ್ಜರ) ವಿಕ್ರಮಾದಿತ್ಯ ಶಕಾರಂಭವು.

೨೮, ೨೯, ೩೦, ೩೧ ದಿವಸಗಳಿರುವ ಪ್ರತಿ ತಿಂಗಳಿಗೆ ೧ ರೂಪಾಯಿಯಿಂದ ೫೦೦ ರೂಪಾಯಿ ವರೆಗೆ ಸಂಬಳ ಇರುವವರಿಗೆ ಪ್ರತಿ ಒಂದು ದಿವಸಕ್ಕೆ ಏನು ಬೀಳುತ್ತದೆಂಬದನ್ನು ತೋರಿಸುವ ಪಟ್ಟಿ.

೩೦ಗಳಿನ ಸಂಬಳ.	೨೮ ದಿವಸಗಳ ೩೦ಗಳು.			೨೯ ದಿವಸಗಳ ೩೦ಗಳು.			೩೦ ದಿವಸಗಳ ೩೦ಗಳು.			೩೧ ದಿವಸಗಳ ೩೦ಗಳು.		
ರೂ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
೧	೦	೦	೭	೦	೦	೭	೦	೦	೬	೦	೦	೬
೨	೦	೧	೨	೦	೧	೧	೦	೧	೧	೦	೧	೦
೩	೦	೧	೯	೦	೧	೮	೦	೧	೭	೦	೧	೭
೪	೦	೨	೩	೦	೨	೨	೦	೨	೨	೦	೨	೧
೫	೦	೨	೧೦	೦	೨	೯	೦	೨	೮	೦	೨	೭
೬	೦	೩	೫	೦	೩	೪	೦	೩	೨	೦	೩	೧
೭	೦	೪	೦	೦	೩	೧೦	೦	೩	೯	೦	೩	೭
೮	೦	೪	೭	೦	೪	೫	೦	೪	೩	೦	೪	೨
೯	೦	೫	೨	೦	೫	೦	೦	೪	೧೦	೦	೪	೮
೧೦	೦	೫	೯	೦	೫	೬	೦	೫	೪	೦	೫	೨
೧೧	೦	೬	೩	೦	೬	೧	೦	೫	೧೦	೦	೫	೮
೧೨	೦	೬	೧೦	೦	೬	೭	೦	೬	೫	೦	೬	೨
೧೩	೦	೭	೫	೦	೭	೨	೦	೬	೧೧	೦	೬	೯
೧೪	೦	೮	೦	೦	೭	೯	೦	೭	೬	೦	೭	೩
೧೫	೦	೮	೭	೦	೮	೩	೦	೮	೦	೦	೭	[illegible]
೧೬	೦	೯	೨	೦	೮	೧೦	೦	೮	೬	೦	೮	೩
೧೭	೦	೯	೯	೦	೯	೫	೦	೯	೧	೦	೮	೯
೧೮	೦	೧೦	೩	೦	೯	೧೧	೦	೯	೭	೦	೯	೩
೧೯	೦	೧೦	೧೦	೦	೧೦	೬	೦	೧೦	೨	೦	೯	೧೦
೨೦	೦	೧೧	೫	೦	೧೧	೦	೦	೧೦	೮	೦	೧೦	೪
೨೧	೦	೧೨	೦	೦	೧೧	೭	೦	೧೧	೨	೦	೧೦	೧೦
೨೨	೦	೧೨	೭	೦	೧೨	೨	೦	೧೧	೯	೦	೧೧	೪
೨೩	೦	೧೩	೨	೦	೧೨	೮	೦	೧೨	೩	೦	೧೧	೧೦
೨೪	೦	೧೩	೯	೦	೧೩	೩	೦	೧೨	೧೦	೦	೧೨	೫
೨೫	೦	೧೪	೩	೦	೧೩	೧೦	೦	೧೩	೪	೦	೧೨	೧೧
೨೬	೦	೧೪	೧೦	೦	೧೪	೪	೦	೧೩	೧೦	೦	೧೩	೫
೨೭	೦	೧೫	೫	೦	೧೪	೧೧	೦	೧೪	೫	೦	೧೩	೧೧
೨೮	೧	೦	೦	೦	೧೫	೫	೦	೧೪	೧೧	೦	೧೪	೫
೨೯	೧	೦	೭	೧	೦	೦	೦	೧೫	೬	೦	೧೫	೦
೩೦	೧	೧	೨	೧	೦	೭	೧	೦	೦	೦	೧೫	೬
೩೧	೧	೧	೯	೧	೧	೧	೧	೦	೬	೧	೦	೦
೩೨	೧	೨	೩	೧	೧	೮	೧	೧	೧	೧	೦	೬
೩೩	೧	೨	೧೦	೧	೨	೨	೧	೧	೭	೧	೧	೦
೩೪	೧	೩	೫	೧	೨	೯	೧	೨	೨	೧	೧	೭
೩೫	೧	೪	೦	೧	೩	೪	೧	೨	೮	೧	೨	೧
೩೬	೧	೪	೭	೧	೩	೧೦	೧	೩	೨	೧	೨	೭
೩೭	೧	೫	೨	೧	೪	೫	೧	೩	೯	೧	೩	೧
೩೮	೧	೫	೯	೧	೫	೦	೧	೪	೩	೧	೩	೭
೩೯	೧	೬	೩	೧	೫	೬	೧	೪	೧೦	೧	೪	೧
೪೦	೧	೬	೧೦	೧	೬	೧	೧	೫	೪	೧	೪	೭
೪೧	೧	೭	೫	೧	೬	೭	೧	೫	೧೦	೧	೫	೨
೪೨	೧	೮	೦	೧	೭	೨	೧	೬	೫	೧	೫	೮
೪೩	೧	೮	೭	೧	೭	೯	೧	೬	೧೧	೧	೬	೮
೪೪	೧	೯	೨	೧	೮	೩	೧	೭	೬	೧	೬	೯
೪೫	೧	೯	೯	೧	೮	೧೦	೧	೮	೦	೧	೭	೮
೪೬	೧	೧೦	೩	೧	೯	೫	೧	೮	೬	೧	೭	೯
೪೭	೧	೧೦	೧೦	೧	೯	೧೧	೧	೯	೧	೧	೮	೩
೪೮	೧	೧೧	೫	೧	೧೦	೬	೧	೯	೭	೧	೮	೯
೪೯	೧	೧೨	೦	೧	೧೧	೦	೧	೧೦	೨	೧	೯	೩
೫೦	೧	೧೨	೭	೧	೧೧	೭	೧	೧೦	೮	೧	೯	೧೦
೧೦೦	೩	೯	೨	೩	೭	೨	೩	೫	೪	೩	೩	೭
೨೦೦	೭	೨	೩	೬	೧೪	೪	೬	೧೦	೮	೬	೭	೩
೩೦೦	೧೦	೧೧	೫	೧೦	೫	೬	೧೦	೦	೦	೯	೧೦	೧೦
೪೦೦	೧೪	೪	೭	೧೩	೧೨	೮	೧೩	೫	೪	೧೨	೧೪	೫
೫೦೦	೧೭	೧೩	೯	೧೭	೩	೧೦	೧೬	೧೦	೩	೧೬	೨	೧

The Canarese Almanac 1868

ಕಂನಡ

ಪಂಚಾಂಗವು

☞ ಕ್ರಿಸ್ತಶಕ ೧೮೬೮ ☜

ಹಿಂದು:

ಶಾಲಿವಾಹನ ಶಕ ೧೭೮೯—೧೭೯೦.

ಪ್ರಭವ ಸಂವತ್ಸರದ ಅಂತ್ಯ, ವಿಭವ ಸಂವತ್ಸರದ ಆದಿ.

ವಿಕ್ರಮಾದಿತ್ಯನ ಶಕ ೧೯೨೪—೧೯೨೫.

ಕೊಲ್ಲ ೧೦೪೩—೧೦೪೪.

ಮಹಂಮದಿ:

ಹಿಜರಿ ೧೨೮೪—೧೨೮೫.

ಫಸಲಿ ೧೨೭೭—೧೨೭೮.

MANGALORE

PRINTED BY PLEBST & STOLZ, BASEL MISSION PRESS